ಶ್ರೀ ಎಲ್.ಆರ್. ಶಿವರಾಮೇಗೌಡ (ನಾಗಮಂಗಲ) : ಸನ್ಮಾನ್ಯ ಅಧ್ಯಕ್ಷರೇ ಸನ್ಮಾನ್ಯ ರಾಜ್ಯಪಾಲರ ಭಾಷಣಕ್ಕೆ ನನ್ನ ಬೆಂಬಲವನ್ನು ಸೂಚಿಸಿ ......

ಶ್ರೀ ವಾಟಾಳ್ ನಾಗರಾಜ್ : ಶಿವರಾಮೇಗೌಡರು ರಾಜ್ಯಪಾಲರ ಭಾಷಣಕ್ಕೆ ಬೆಂಬಲವನ್ನು ಸೂಚಿಸುತ್ತಿದ್ದಾರೆ, ಅವರು ನಿಮ್ಮ ಪಕ್ಷದ ಸಹ ಸದಸ್ಯರೇ ? ಇದರ ಬಗ್ಗೆ ಇವೊತ್ತು ತೀರ್ಮಾನ ಆಗಬೇಕು.

ಶ್ರೀ ಎಲ್. ಆರ್. ಶಿವರಾಮೇಗೌಡ : ಇದನ್ನು ವಿರೋಧ ಮಾಡಬೇಕು ಎಂದು ಏನೂ ಇಲ್ಲ.

ಶ್ರೀ ವಾಟಾಳ್ ನಾಗರಾಜ್ : ಶ್ರೀ ಶಿವನಂಜಪ್ಪನವರನ್ನು ಶಿವನೇ ಕಾಪಾಡಬೇಕು. ಶಿವನಂಜಪ್ಪನವರ ಒಕ್ಕೂಟ ಎಲ್ಲಾ ಒಡೆದು ಚಿದ್ರ ಆಗಿ ಹೋಗಿದೆ. ಅವರು ಈಗ ರಾಜ್ಯಪಾಲರ ಭಾಷಣಕ್ಕೆ ಸ್ವಾಗತ ಮಾಡುತ್ತಿದ್ದಾರೆ. ಇದನ್ನು ಹೇಳಿದ ಮೇಲೆ ಇನ್ನು ಏನು ಉಳಿದಿದೆ ? ಶಿವನಂಜಪ್ಪನವರನ್ನು ದೇವರೇ ಕಾಪಾಡಬೇಕು.

ಶ್ರೀ ಎಲ್.ಆರ್. ಶಿವರಾಮೇಗೌಡ : ರಾಜ್ಯಪಾಲರು ಮಾಡಿರತಕ್ಕಂಥ ಭಾಷಣ ಸರಿಯಾಗಿದ್ದರೆ ಸರಿ ಇದೆ ಎಂದು ಹೇಳಬೇಕು. ಸರಿ ಇಲ್ಲದಿದ್ದರೆ ಸರಿ ಇಲ್ಲ ಎಂದು ಹೇಳಬೇಕು. ಇದನ್ನು ನಾವು ರೂಪಿಸಿಕೊಳ್ಳಬೇಕು. ಒಂದು ಸರ್ಕಾರ ಅಸ್ತಿತ್ವಕ್ಕೆ ಬಂದ ಮೇಲೆ ಆ ಸರ್ಕಾರಕ್ಕೆ ಅರು ತಿಂಗಳ ಕಾಲಾವಕಾಶ ಕೊಡಬೇಕು. ಎಂದು ಹಿರಿಯ ಸದಸ್ಯರು ಮಾತನಾಡಿದ್ದಾರೆ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ನಾವು ವಿರೋಧ ಪಕ್ಷದಲ್ಲಿ ಇದ್ದ ತಕ್ಷಣ ಸರ್ಕಾರ ಏನು ಮಾಡಿದರೂ ತಪ್ಪು ಎಂದು ಹೇಳುವುದು ಸರಿಯಲ್ಲ. ತಪ್ಪು ಮಾಡಿದರೆ ತಪ್ಪು ಎಂದೂ, ಸರಿ ಮಾಡಿದರೆ ಸರಿ ಎಂದೂ ಹೇಳಬೇಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಅವರು ಖಂಡಿತ ವಿರೋಧಪಕ್ಷದವರಲ್ಲ. ಅದು ಸಾಧ್ಯವಿಲ್ಲ.

ಶ್ರೀ ಎಲ್.ಅರ್. ಶಿವರಾಮೇಗೌಡ : ನಾನು ವಿರೋಧ ಪಕ್ಷ ಅಥವಾ ಅಳುವ ಪಕ್ಷ ಎಂಬುದು ಜನ ತೀರ್ಮಾನ ಮಾಡಿ ಇಲ್ಲಿಗೆ ಕಳುಹಿಸಿದ್ದಾರೆ. ನಾನೇನು ಈ ಸದನಕ್ಕೆ ಹೊಸಬನಲ್ಲ. ಈಗ ಎರಡನೇ ಸಾರಿ ಬಂದಿದ್ದೇನೆ. ತಾವು ಸಹ ಪಕ್ಷೇತರರಾಗಿ, ವೈಯಕ್ತಿಕವಾಗಿ ಈ ರಾಜ್ಯದಲ್ಲಿ ಒಂದು ಅಸ್ತಿತ್ವವನ್ನು ಉಳಿಸಿಕೊಂಡು ಬಂದಿದ್ದೀರಿ.

ಶ್ರೀ ವಾಟಾಳ್ ನಾಗರಾಜ್ : ನೀವು ಬಂದಿರುವುದು ನನಗೆ ಬಹಳ ಸಂತೋಷ. ನೀವು ಬರದೇ ಇದ್ದರೆ ನನಗೆ ಬಹಳ ನೋವಾಗುತ್ತಿತ್ತು. ನಿಮಗೆ ಏನಾಗುತ್ತದೆ ಎಂಬುದನ್ನು ನಾನು ಕಾಯುತ್ತಿದ್ದೆ. ನೀವು ಬಂದ ಮೇಲೆ ನನಗೆ ಸಂತೋಷವಾಯಿತು ಆದರೆ ಈಗ ನಿಮ್ಮ ದಿಕ್ಕು ...

ಶ್ರೀ ಎಲ್.ಆರ್. ಶಿವರಾಮೇಗೌಡ : ಸರ್ಕಾರ ಸರಿಯಾಗಿ ಕೆಲಸ ಮಾಡಿದರೆ ಅದಕ್ಕೆ ಕೈ ಜೋಡಿಸುತ್ತೇನೆ. ಸರಿಯಾಗಿ ಮಾಡದಿದ್ದರೆ, ತಪ್ಪು ಮಾಡಿದಿರಿ ಎಂದು ಹೇಳುತ್ತೇನೆ. ಅದು ನನ್ನ ಕರ್ತವ್ಯ ಆ ಕೆಲಸವನ್ನು ನಾನು ಮಾಡುತ್ತಿದ್ದೇನೆ. ಈಗ ರಾಜ್ಯಪಾಲರ ಭಾಷಣದಲ್ಲಿ ಜನಸಾಮಾನ್ಯರಿಗೆ ಬಹಳಷ್ಟು ಕಾರ್ಯಕ್ರಮಗಳನ್ನು ಹೇಳಿದ್ದಾರೆ. ಕಾರ್ಯಕ್ರಮಗಳು ಯಶಸ್ವಿಯಾಗಿ ನಡೆದು ಸರ್ಕಾರಕ್ಕೆ ಒಳ್ಳೆಯ ಹೆಸರು

ಬರಬೇಕಾದರೆ ಮಂತ್ರಿ ಮಂಡಲ ಬಹಳ ಬಿಗಿಯಾಗಿ ಇರಬೇಕು. ಮುಂದಿನ ಸಾಲಿನಲ್ಲಿ, ಎರಡನೇ ಸಾಲಿನಲ್ಲಿ ಅಥವಾ ಮೂರನೇ ಸಾಲಿನಲ್ಲಿ ಕುಳಿತುಕೊಂಡು ಕೆಲವು ಮಂತ್ರಿಗಳು ಚೆನ್ನಾಗಿ ಕೆಲಸ ಮಾಡಿದರೆ ಸಾಕಾಗುವುದಿಲ್ಲ. ಇಡೀ ರಾಜ್ಯದ ಮಂತ್ರಿಮಂಡಲದಲ್ಲಿ ಇರತಕ್ಕ ಎಲ್ಲಾ ಮಂತ್ರಿಗಳು ಒಂದು ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸುವುದರಲ್ಲಿ ಪಾಲ್ಗೊಳ್ಳಬೇಕು.

ಸರ್ಕಾರ ಅಧಿಕಾರಕ್ಕೆ ಬಂದು ಈಗಾಗಲೇ ನಾಲ್ಕು ತಿಂಗಳಾಗಿವೆ. ಯಾವುದಾದರೂ ಒಂದು ಫೈಲ್‌ಗೆ ಸಹಿಯನ್ನು ಮಾಡುವುದಕ್ಕೆ ಕೆಲವು ಮಂತ್ರಿಗಳು ಗಡಗಡ ನಡುಗುತ್ತಾರೆ ಎನ್ನತಕ್ಕ ಪರಿಸ್ಥಿತಿಯನ್ನು ನಾವು ಇವೊತ್ತು ನೋಡುತ್ತಾ ಇದ್ದೇವೆ. ಒಂದು ಫೈಲ್ ಸಹಿಗೆ ಹೋದರೆ ಸಹಿ ಮಾಡುವುದಕ್ಕೆ ಹೆದರುತ್ತಾರೆ, ಏನಾಗುತ್ತದೆಯೋ ಏನೋ, ಸಹಿ ಮಾಡಿದರೆ ಎಂದು ಹೆದರುತ್ತಾರೆ. ಅವರ ಇಲಾಖೆಗೆ ಸಂಬಂಧಪಟ್ಟಂತೆ ಜನಪದ ಕಾರ್ಯಕ್ರಮಗಳು ಯಾವುದಾದರೂ ಇದ್ದರೆ ಅದಕ್ಕೆ ಸಂಬಂಧಪಟ್ಟಂತೆ ನಿರ್ಧಾಕ್ಷಿಣ್ಯವಾಗಿ ಕ್ರಮವನ್ನು ತೆಗೆದುಕೊಳ್ಳತಕ್ಕಂಥ ವಿಚಾರದಲ್ಲಿ ಮಂತ್ರಿಗಳು ಕಾರ್ಯೋನ್ಮುಖರಾಗಬೇಕು. ಈ ರೀತಿ ಮಾಡಿದರೆ ಸರ್ಕಾರಕ್ಕೆ ಒಳ್ಳೆಯ ಹೆಸರು ಬರುತ್ತದೆ ಎಂಬುದನ್ನು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ನಾನು ರಾಜಕಾರಣಕ್ಕೆ ಬಂದಮೇಲೆ ಆರೇಳು ಸರ್ಕಾರಗಳನ್ನು ನೋಡಿದ್ದೇನೆ. ದೇವರಾಜ ಅರಸುರವರ ಮಂತ್ರಿಮಂಡಲ ನೋಡಿದ್ದೇವೆ. ಎಷ್ಟೋ ಜನಪದ ಕಾರ್ಯಕ್ರಮಗಳನ್ನು ಅವರು ಅಚ್ಚುಕಟ್ಟಾಗಿ ಈ ರಾಜ್ಯದಲ್ಲಿ ಮಾಡಿ ಶ್ರೀಸಾಮಾನ್ಯರು ತುಳಿತಕ್ಕೆ ಒಳಗಾಗಿದ್ದವರನ್ನು ಮೇಲಕ್ಕೆ ಎತ್ತಿದ್ದನ್ನು ನೋಡಿದ್ದೇವೆ. ಗುಂಡರಾಯರ ಕಾಲದಲ್ಲಿ ಬಹಳ ಎಫಿಷಿಯನ್ಸಿ ಇರುವ ಮಂತ್ರಿಮಂಡಲವನ್ನು ನಾನು ನೋಡಿದ್ದೆವು. ರಾಮಕೃಷ್ಣಹೆಗಡೆಯವರು ಮತ್ತು ಬೊಮ್ಮಾಯಿರವರ ಕಾಲದಲ್ಲಿ ಬಹಳ ಎಫಿಷಿಯನ್ಸಿ ಇದ್ದರೂ ಸಹಿತ ಕಿತ್ತಾಟದಲ್ಲಿ ಆ ಸರ್ಕಾರಗಳು ಹೋಗಿದ್ದನ್ನೂ ಸಹಿತ ನಾವು ನೋಡಿದ್ದೇವೆ. ವೀರೇಂದ್ರ ಪಾಟೀಲರ ಸರ್ಕಾರದಲ್ಲಿ ನಾವು ಹೆಚ್ಚಿಗೆ ಏನನ್ನೂ ನಿರೀಕ್ಷಣೆ ಮಾಡಲಿಕ್ಕೆ ಆಗಲಿಲ್ಲ. ಎರಡು ವರ್ಷಗಳ ಕಾಲದಲ್ಲಿ ಬಂಗಾರಪ್ಪನವರ ಕಾಲದಲ್ಲಿ ಇವೊತ್ತು ಜನಸಾಮಾನ್ಯರಿಗೆ ಬೇಕಾಗಿರತಕ್ಕಂಥ ಆಶ್ರಯ, ಆರಾಧನ ಮತ್ತು ವಿಶ್ವ ಯೋಜನೆಗಳನ್ನು ತಂದು ಜನಪದ ಕಾರ್ಯಕ್ರಮಗಳನ್ನು ತಂದು ಎರಡು ವರ್ಷಗಳಲ್ಲಿ ಭೇಷ್ ಅನ್ನಿಸಿಕೊಂಡಿದ್ದನ್ನು ನಾವು ನೋಡಿದ್ದೇವೆ. ಆದರೆ ಅವರ ತರುವಾಯ ಬಂದಂಥ ಮೊಯಿಲಿಯವರ ಸರ್ಕಾರ ಎರಡು ವರ್ಷಗಳಲ್ಲಿ ಬರೀ ಸೇಡಿನ ರಾಜಕೀಯ ಮಾಡಿ ರಾಜ್ಯದ ಅಭಿವೃದ್ಧಿಯನ್ನು ಕುಂಠಿತ ಮಾಡಿದ್ದನ್ನು ನಾವು ನೋಡಿದ್ದೇವೆ.

(ಗೊಂದಲ)

ಶ್ರೀ. ಎಲ್.ಆರ್. ಶಿವರಾಮೇಗೌಡ : ಆ ಮಂತ್ರಿ ಮಂಡಲ ಸರಿಯಿಲ್ಲ ಎನ್ನತಕ್ಕ ಮಾತನ್ನು ಅವತ್ತೇ ಹೇಳಿದ್ದೇವೆ. ಈ ಸೇಡಿನಿಂದಲೇ ನೀವು ಇವೊತ್ತು 35 ಕ್ಕೆ ಬಂದಿದ್ದು.

ಶ್ರೀ ರಾಮಲಿಂಗಾರೆಡ್ಡಿ : ಕಳೆದ ಎರಡು ವರ್ಷಗಳಲ್ಲಿ ಅಭಿವೃದ್ಧಿಯಾದಷ್ಟು ಯಾವಾಗಲೂ ಆಗಿಲ್ಲ. ನೀವೇ ಹಾಡಿ ಹೊಗಳುತ್ತಿದ್ದಿರಿ. ಗೆಲ್ಲುವುದು, ಸೋಲುವುದು

35 ಸೀಟು ಬರುವುದು, 15 ಸೀಟು ಬರುವುದು ಇಷ್ಯೂಗಳ ಮೇಲೆ ಹೋಗಿ ಬಿಡುತ್ತದೆ. ಅದಕ್ಕೆ ನಾನಾ ಕಾರಣಗಳು ಇರುತ್ತವೆ. ಅವೊತ್ತು ನೀವೇ ವೀರಪ್ಪ ಮೊಯಿಲಿಯವರ ಸರ್ಕಾರವನ್ನು ಹೊಗಳುತ್ತಿದ್ದೀರಿ. ಆದರೆ ಈಗ ಏಕೆ ಈ ರೀತಿ ಮಾತನಾಡುತ್ತಿದ್ದೀರಿ ?

ಶ್ರೀ ಎಲ್. ಅರ್. ಶಿವರಾಮೇಗೌಡ : ಬಂಗಾರಪ್ಪನವರ ಕಾಲದಲ್ಲಿ ಅನ್ಯಾಯವಾಗಿದೆ ಎಂದು ಹೇಳಿದರೆ ರಾಜ್ಯದ ಜನತೆ ಯಾರೂ ಒಪ್ಪುವುದಿಲ್ಲ. ಮೊಯಿಲಿಯವರ ಕಾಲದಲ್ಲಿ ಪ್ರತಿ ಹಂತದಲ್ಲೂ ಸಹಿತ ಏನು ಅನ್ಯಾಯವಾಯಿತು ಎಂದು ವಿರೋಧ ಪಕ್ಷದವರು ಹೇಳುತ್ತಾರೆ. ಅದು ಅಕ್ಷರಶಃ ನಿಜ ಎನ್ನತಕ್ಕದ್ದನ್ನು ನಾವು ಒಪ್ಪಿಕೊಳ್ಳಬೇಕಾಗುತ್ತದೆ.

ಇವೊತ್ತು ನೀವು 35ಕ್ಕೆ ಹೋಗಬೇಕಾದರೆ ಅವರ ಆಡಳಿತವೇ ಮೂಲ ಕಾರಣ ಎಂಬುದನ್ನು ನೀವು ಒಪ್ಪಿಕೊಳ್ಳಬೇಕಾಗುತ್ತದೆ. ಈ ಒಂದು ಸೇಡು ತೀರಿಸುವುದಕ್ಕೋಸ್ಕರ, ಈ ಒಂದು ರಾಜ್ಯದ ಅಭಿವೃದ್ಧಿ ಕೆಲಸ ಕುಂಠಿತವಾಗಲು, ಅವರೇ ಕಾರಣರಾಗಿರುತ್ತಾರೆ. ಇವೊತ್ತು ದೇವೇಗೌಡರ ಪಕ್ಷ ಅಧಿಕಾರಕ್ಕೆ ಬಂದಿದೆ. ಇವೊತ್ತು ನಮ್ಮ ರಾಜ್ಯದ ಜನ, ದೇವೇಗೌಡರನ್ನು ಒಬ್ಬ ಮಣ್ಣಿನ ಮಗ, ಬಡ ಬೋರೇಗೌಡರ ಮಗ, ರಾಜ್ಯದಲ್ಲಿ 5 ವರ್ಷ ಅಧಿಕಾರ ನಡೆಸಲಿ ಎಂದು ಹೇಳಿರತಕ್ಕಂಥ ಮಾತನ್ನು ನಾವು ಸಹಿತ ಹೇಳಿ 5 ವರ್ಷ ಈ ಸರ್ಕಾರ ಜನಪದ ಕಾರ್ಯಕ್ರಮಗಳನ್ನು ಮಾಡಲಿ ಎಂಬುದು ನಮ್ಮ ಆಸೆ. ಬೆಳೆಯುವ ಪೈರು ಮೊಳಕೆಯಲ್ಲಿ ಎಂದು ಹೇಳುವ ಹಾಗೆ ಈಗಾಗಲೇ ಮೂರು ರೀತಿಯಲ್ಲಿ ಜನ ಮೆಚ್ಚತಕ್ಕಂಥ ಕೆಲಸವನ್ನು ಮಾಡಿದ್ದಾರೆ. ಗ್ರಾಮಾಂತರ ಪ್ರದೇಶದ ರೈತಾಪಿ ಜನಗಳಿಗೆ ನೇರವಾಗಿ ಸ್ಪಂಧಿಸತಕ್ಕಂಥ ಮೂರು ಕೆಲಸವನ್ನು ಈಗಾಗಲೇ ಮಾಡಿದ್ದೀರಿ. ಒಂದು ಬಡ್ಡಿ ಮನ್ನಾ ಮಾಡತಕ್ಕಂಥ ವಿಚಾರ ಸನ್ಮಾನ್ಯ ಬಿ.ಜೆ.ಪಿ. ಸದಸ್ಯರು ಇವೊತ್ತು ಯಾರೂ ಇಲ್ಲ. ಈ ಒಂದು ಬಾವಿಯೊಳಕ್ಕೆ ಮೂರು ಸಾರಿ ಅವರು ಬಂದರು ಈ ಬಡ್ಡಿ ಮನ್ನಾ ಮಾಡಬೇಕು ಮಾಡಬೇಕು ಎಂದು ಹೇಳಿಕೊಂಡು. ಸಂಪೂರ್ಣ ಬಡ್ಡಿ ಮನ್ನಾ ಮಾಡುವುದಕ್ಕೆ ಆರ್ಥಿಕ ಪರಿಸ್ಥಿತಿ ಚೆನ್ನಾಗಿದೆಯೋ ಇಲ್ಲವೋ ಎನ್ನುವುದು ಪ್ರಶ್ನೆಯಲ್ಲ. ಆದರೆ ಇದರಲ್ಲಿ ಒಂದು ಹೆಜ್ಜೆಯನ್ನು ಮುಂದಿಟ್ಟು ರೈತರಿಗೆ ಬಡ್ಡಿ ಮನ್ನಾ ಮಾಡತಕ್ಕಂಥ ವಿಚಾರದಲ್ಲಿ ಅವರು ತೆಗೆದಕೊಂಡಿರತಕ್ಕಂಥ ಒಂದು ಕಾರ್ಯಕ್ರಮವನ್ನು ನಾವು ರೈತರ ಪರವಾಗಿ ಸ್ವಾಗತ ಮಾಡಬೇಕಾಗುತ್ತದೆ.

ಒಬ್ಬರು ಮಾನ್ಯ ಸದಸ್ಯರು : ಪ್ರಾಥಮಿಕ ಸಹಕಾರಿ ಸಂಘಗಳ ಸಾಲಕ್ಕೆ ಬಡ್ಡಿಯನ್ನು ಮಾಡಿದೆ ಎಂದು ಹೇಳುತ್ತಾರೆ. ಯಾವುದೇ ಪ್ರಾಧಮಿಕ ಸಹಕಾರಿ ಸಂಘಗಳಲ್ಲಿ ಈಗ ಸಾಲಗಳು ಉಳಿದಿಲ್ಲ. ಸಹಕಾರಿ ಸಂಘಗಳ ಪರಿಸ್ಥಿತಿ ಹೇಗಿದೆ ಎಂದು ಹೇಳಿದರೆ ಕೇವಲ ಪಡಿತರ ಸಾಮಾನುಗಳನ್ನು ಹಂಚುವಂಥ ಪರಿಸ್ಥಿತಿ ಬಂದಿರುವುದರಿಂದ ಸಹಕಾರಿ ಸಂಘಗಳಲ್ಲಿ ಇರತಕ್ಕ ರೈತರ ಸಾಲ ಬಹಳ ಕಡಿಮೆ. ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕ್‌ಗೆ ಕೊಡಬೇಕಾಗಿತ್ತು. ಆದರೆ ಇವರ ನಿಯಮಾವಳಿಯನ್ನು ಮಾಡಿದ್ದರಿಂದ ರೈತರಿಗೆ ಅದರಲ್ಲೂ ಕೂಡ ಲಾಭ ಸಿಗುತ್ತಿಲ್ಲ.

ಶ್ರೀ.ಎಲ್.ಆರ್.ಶಿವರಾಮೇಗೌಡ :- ಅಕ್ಕಿ ಯೋಜನೆ ಸುಮಾರು 135 ಕೋಟಿ ರೂಪಾಯಿ ವೆಚ್ಚದಲ್ಲಿ ಬಡವರಿಗೆ ಅಕ್ಕಿಯನ್ನು ಹಂಚತಕ್ಕಂಥ ಕಾರ್ಯಕ್ರಮ ಒಂದನ್ನು ಇವೊತ್ತು ಹಾಕಿಕೊಂಡಿದ್ದಾರೆ. ನಮ್ಮ ಗ್ರಾಮಾಂತರ ಪ್ರದೇಶದಲ್ಲಿ ಹಬ್ಬದಲ್ಲಿ ಅನ್ನ ಉಣ್ಣಾತಕ್ಕಂಥ ಒಂದು ನಾಣ್ಣುಡಿಯನ್ನು ತಾವು ಕೇಳುತ್ತೀರಿ. ಇವೊತ್ತು ಅಂತಹ ಒಂದು ಪರಿಸ್ಥಿತಿಯಲ್ಲಿ ಬಡತನದ ಕೆಳಗಡೆ ಇರತಕ್ಕಂಥ ರೈತಾಪಿ ವರ್ಗ ಇವೊತ್ತು ಅನ್ನ ಉಣ್ಣಾತಕ್ಕಂಥ ಒಂದು ಸೌಭಾಗ್ಯವನ್ನು ಈ ಸರಕಾರ ವಾರದಲ್ಲಿ ನಾಲ್ಕು ದಿವಸವಾದರೂ ಊಟ ಮಾಡತಕ್ಕಂಥ ಅವಕಾಶವನ್ನು ಮಾಡಿರುವುದನ್ನು ನಾವು ಸ್ವಾಗತ ಮಾಡಬೇಕಾಗುತ್ತದೆ. ಆದರೆ ಒಂದು ಎಚ್ಚರಿಕೆಯನ್ನು ಈ ಇಲಾಖೆಗೆ ನಾನು ಈ ಸಂದರ್ಭದಲ್ಲಿ ಕೊಡಬೇಕಾಗುತ್ತದೆ. ಇವೊತ್ತು ಏನು ನೀವು ಈ ಅಕ್ಕಿ, ಜೋಳ, ರಾಗಿ, ಇವುಗಳಿಗೆ ಸಬ್ಸಿಡಿ ಕೊಡುತ್ತೇವೆ ಎಂದು ಹೋಗುತ್ತಿರೋ ಇದು ಸಮರ್ಪಕವಾಗಿ ವಿವರಣೆ ಆಗಬೇಕು. ಈಗ ಇರತಕ್ಕಂಥ ವ್ಯವಸ್ಥೆಯಲ್ಲಿ ಏನು ನೀವು ನ್ಯಾಯ ಬೆಲೆ ಅಂಗಡಿಗಳ ಮೂಲಕ ವಿತರಣೆ ಮಾಡುತ್ತೇವೆ ಎಂದು ಹೇಳುತ್ತೀರೋ ಅದು ಸಮರ್ಪಕವಾಗಿ ವಿತರಣೆ ಆಗಲಿಕ್ಕೆ ಸಾಧ್ಯವಿಲ್ಲ. ಇವೊತ್ತು ಹಳ್ಳಿಗಳಲ್ಲಿ ಈ ನ್ಯಾಯ ಬೆಲೆ ಅಂಗಡಿಗಳನ್ನು ಅನ್ಯಾಯ ಬೆಲೆ ಅಂಗಡಿಗಳು ಎನ್ನುತ್ತಾರೆ. ಇವೊತ್ತು ಏನು ಈ ಅನ್ಯಾಯ ಬೆಲೆ ಅಂಗಡಿ ಎಂದು ನಾಣ್ಣುಡಿ ಮಾಡಿದ್ದಾರೆ ಜನ, ಇದಕ್ಕೆ ಕಡಿವಾಣ ಹಾಕಬೇಕು. ಇದಕ್ಕೆ ಲಂಗು ಲಗಾಮು ಇಲ್ಲ. ಇವೊತ್ತು ತಾಲ್ಲೂಕು ಹೆಡ್ ಕ್ವಾರ್ಟರನ್‌ಲ್ಲಿ ತೆಗೆದುಕೊಂಡು ಹೋಗತಕ್ಕಂಥ ಒಬ್ಬ ನ್ಯಾಯ ಬೆಲೆ ಅಂಗಡಿ ಮಾಲೀಕ ಎಲ್ಲವನ್ನೂ ಅಲ್ಲೇ ಸಂಪೂರ್ಣ ಮಾರಾಟ ಮಾಡಿ ಯಾವುದು ಹೆಚ್ಚು ಬೆಲೆಗೆ ಹೋಗುವುದಿಲ್ಲವೋ ಅಂಥವುಗಳನ್ನು ಮಾತ್ರ ಹಳ್ಳಿಗಳಿಗೆ ತೆಗೆದುಕೊಂಡು ಹೋಗಿ ಮಾರಾಟ ಮಾಡುತ್ತಾನೆ. ಇಂಥಹ ಪರಿಸ್ಥಿತಿಯನ್ನು ನೋಡುತ್ತಿದ್ದೇವೆ. ಅದಕ್ಕೆ ನಾನು ಸರ್ಕಾರಕ್ಕೆ ನಾನು ವಿನಂತಿ ಮಾಡಿ ಈ ಮೂಲಕ ಒತ್ತಾಯ ಮಾಡುತ್ತೇನೆ. ಇವೊತ್ತು ನೀವು ನ್ಯಾಯ ಬೆಲೆ ಅಂಗಡಿಗಳ ಮುಖಾಂತರ ವಿತರಣೆ ಮಾಡತಕ್ಕಂಥದ್ದರಲ್ಲಿ ಸರ್ಕಾರಕ್ಕೆ ಒಳ್ಳೆಯ ಹೆಸರು ಬರಬೇಕಾಗಿದ್ದರೆ ಜಿಲ್ಲಾಧಿಕಾರಿ ಒಂದು ತಾಲ್ಲೂಕಿಲ್ಲಿ ಕನಿಷ್ಟಪಕ್ಷ 5 ನ್ಯಾಯ ಬೆಲೆ ಅಂಗಡಿಗಳನ್ನು ಒಂದು ತಿಂಗಳಿಗೆ ಅಬ್‌ಜಕ್ಟ್ ಆಗಿ ಇನ್ಸ್‌ಪೆಕ್ಟ್ ಮಾಡಿ ಸರ್ಕಾರಕ್ಕೆ ವರದಿ ಮಾಡಿ ಯಾರು ತಪ್ಪಿತಸ್ಥರು ಇರುತ್ತಾರೋ ಅಂಥವರ ಮೇಲೆ ಕ್ರಮ ತೆಗೆದುಕೊಳ್ಳಬೇಕು ಎನ್ನುವಂಥದ್ದನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಆಮೇಲೆ ಹೇಮಾವತಿ ನಾಲಾ ಕೆಲಸವನ್ನು ನಿಲ್ಲಿಸಿರತಕ್ಕಂಥ ವಿಚಾರದಲ್ಲಿ ಸಾಕಷ್ಟು ಚರ್ಚೆಯಾಯಿತು. ನಾನು ಮೊಯಿಲಿಯವರ ಸರ್ಕಾರ ಅಧಿಕಾರದಲ್ಲಿದ್ದಾಗ ಅಂದಿನ ನೀರಾವರಿ ಮಂತ್ರಿಗಳಿಗೆ ಒಂದು ಪತ್ರವನ್ನು ಬರೆದು ನಾಗಮಂಗಲ ತಾಲ್ಲೂಕು ಯಡಿಯೂರು, ಕುಣಿಗಲ್, ತುರುವೇಕೆರೆ ಭಾಗಗಳಲ್ಲಿ ಏನು ಕೆಲಸ ನಡೆದಿದೆ ಅಲ್ಲಿ ಕೋಟ್ಯಾಂತರ ರೂಪಾಯಿ ಹಣವನ್ನು ಲೂಟಿ ಮಾಡಿದ್ದಾರೆ. ಇವೊತ್ತು ಅಲ್ಲಿ ಡಿಪಾರ್ಟ್‌ಮೆಂಟಿನಲ್ಲಿ ಕೆಲಸ ಕೊಡುತ್ತೇವೆ ಎಂದು ಹೇಳಿ ಅಲ್ಲಿ ಗುತ್ತಿಗೆದಾರರು ಮತ್ತು ಇಂಜಿನಿಯರುಗಳು ಕೋಟ್ಯಾಂತರ ರೂಪಾಯಿ ಹಣವನ್ನು ಲೂಟಿ ಮಾಡಿದ್ದಾರೆ. ಯಾರೂ ಹೇಳುವವರು ಕೇಳುವವರು ಇಲ್ಲದೇ ಇವೊತ್ತು ದುಡ್ಡನ್ನು ನುಂಗಿ ಹಾಕಿದರು.

ದೇವೇಗೌಡರು ನಿಲುವಿಗೆ ನಾನು ಸ್ವಾಗತ ಮಾಡುತ್ತೇನೆ. ಏಕೆಂದರೆ ಅಧಿಕಾರಕ್ಕೆ ಬಂದಾಗ ಪ್ರಪ್ರಥಮವಾಗಿ ನಾನಾ ಕೆಲಸವನ್ನು ನಿಲ್ಲಿಸಿ ತನಿಖೆಗಾಗಿ ಆಜ್ಞೆ ಮಾಡಿಲ್ಲ ದಯವಿಟ್ಟು ತನಿಖೆಗೆ ಆಜ್ಞೆಯನ್ನು ಮಾಡಬೇಕು. ನಾಗಮಂಗಲ ತಾಲ್ಲೂಕು ಒಂದರಲ್ಲೇ ಆರು ಸಾವಿರ ನಾಲೆ ಒಡೆದುಹೋಗಿದೆ. ನಾವು ಜಿಲ್ಲಾ ಪಂಚಾಯತಿ ಸಭೆಯಲ್ಲಿ ಅಂದಿನ ನೀರಾವರಿ ಮಂತ್ರಿಗಳಿಗೆ ಪತ್ರ ಬರೆದೆವು. ನೀವು ಇದನ್ನು ತನಿಖೆ ಮಾಡಿಸಬೇಕು. ಯಾರು ತಪ್ಪಿತಸ್ಥರು ಇದ್ದಾರೋ ಅವರ ಮೇಲೆ ಮತ್ತು ಯಾರು ನಾಲೆ ಒಡೆದು ಹೋಗಿರುವುದಕ್ಕೆ ಭಾಗಿಯಾಗಿದ್ದಾರೋ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು ಎನ್ನುವುದನ್ನೂ ಸಹಿತ ಹೇಳಿದ್ದೇವೆ. ಇವೊತ್ತು ಟೆಂಡರ್ ಕರೆದು ಕೆಲಸ ಕೊಡಬೇಕು ಎಂಬ ತೀರ್ಮಾನ ಬಹಳ ಚೆನ್ನಾಗಿ ಹೇಳಿದ್ದೀರಿ. ಇವೊತ್ತು ಟೆಂಡರ್ ಕರೆಯದೇ ಹೋದರೆ ಆ ಕೆಲಸದಲ್ಲಿ ಅಕೌಂಟಬಿಲಿಟಿ ಸಿಗುವುದಿಲ್ಲ. ಲೆಕ್ಕ ಸಿಗುವುದಿಲ್ಲ. ಇದರಲ್ಲಿ ಕೆಲಸ ಒಂದು ಬೇಗ ಆಗುತ್ತದೆ ಎನ್ನುವುದು ಒಂದನ್ನು ಬಿಟ್ಟರೆ, ಕೆಲಸಕ್ಕೆ ಯಾವ ಲೆಕ್ಕಾಚಾರವೂ ಇರುವುದಿಲ್ಲ ಈ ಟೆಂಡರ್ ಕರೆಯದೇ ಹೋದರೆ. ಈಗಾಗಲೇ ಎಲ್ಲಾ ಕಂಟ್ರಾಕ್ಟ್‌ರ್‌ಗಳು ವಿಧಾನಸೌಧವನ್ನು ಸುತ್ತುತ್ತಾ ಇದ್ದಾರೆ, ಟೆಂಡರ್ ವ್ಯವಸ್ಥೆ ಬೇರೆ ಡಿಪಾರ್ಟ್‌ಮೆಂಟ್ ಮೂಲಕ ಕೊಡಬೇಕು ಎನ್ನತಕ್ಕಂಥದ್ದನ್ನು ಹೇಳಿ ಸಚಿವರ ಮನೆ ಬಾಗಿಲ ಹತ್ತಿರ ಲೋಕೋಪಯೋಗಿ ಸಚಿವರ ಮನೆಯ ಬಾಗಿಲ ಹತ್ತಿರ, ನೀರಾವರಿ ಸಚಿವರ ಮನೆಯ ಬಾಗಿಲ ಹತ್ತಿರ ಕುಳಿತಿದ್ದಾರೆ. ನೀವು ಇದಕ್ಕೆ ತಲೆಬಾಗಬಾರದು, ಟೆಂಡರ್ ಕರೆಯತಕ್ಕಂಥ ವಿಚಾರದಲ್ಲಿ ನಿಮ್ಮ ನಿಲುವು ಬದಲಾಗಬಾರದು ಎಂದು ಸರ್ಕಾರಕ್ಕೆ ಒತ್ತಾಯ ಮಾಡುವುದಕ್ಕೆ ಇಚ್ಛೆಪಡುತ್ತೇನೆ. ಇವೊತ್ತು ಒಬ್ಬೊಬ್ಬ ಇಂಜಿನಿಯರ್ ಹೇಮಾವತಿ ನಾಲೆಯಲ್ಲಿ ಲೂಟಿ ಮಾಡಿ 50 ಲಕ್ಷ ರೂಪಾಯಿಯ ಒಂದು ಮನೆಯನ್ನು ಕಟ್ಟಿರತಕ್ಕಂಥ ಒಂದು ದಾಖಲೆ ಇದೆ. ಈ ಹಿಂದೆ ಎರಡೂವರೆ ವರ್ಷಗಳಲ್ಲಿ ಹೇಮಾವತಿ ನಾಲೆಯಲ್ಲಿ ಏನು ಕೆಲಸ ನಡೆದಿದೆ ಆ ಕರ್ಮಕಾಂಡದ ಸಂಪೂರ್ಣ ಪರಿಚಯವನ್ನು ಮಾಡಿಸಬೇಕು ಎಂದು ಹೇಳಿ ಈ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಹಾಗೇಯೇ. ಏನು ನೀವು 11ನೇ ತಾರಿಖು ಕೆಲಸ ಪ್ರಾರಂಭ ಮಾಡುತ್ತೇವೆ ಎಂದು ಹೇಳಿದ್ದೀರಿ ಅದು ಸಂಪೂರ್ಣ ಸ್ವಾಗತ ಮಾಡತಕ್ಕಂಥ ವಿಚಾರ. ಆದರೆ ಟೆಂಡರ್ ಮೂಲಕವಲ್ಲದೇ ಬೇರೆ ಯಾವುದೇ ರೀತಿಯಲ್ಲೂ ಮಾಡಬಾರದು ಎಂಬ ಸರ್ಕಾರವನ್ನು ನಾನು ಒತ್ತಾಯ ಮಾಡುತ್ತೇನೆ. ಈ ವರ್ಗಾವಣೆ ವಿಚಾರ, ಇವೊತ್ತು ಈ ಸದನ ಮುಗಿದ ಮೇಲೆ ಈ ವರ್ಗಾವಣೆ ಶುರುವಾಗುತ್ತದೆ. ಯಾವ ಶಾಸಕರೂ ಹೊರಗಡೆ ತಿರುಗಾಡುವ ಹಾಗಿಲ್ಲ, ಎದುರುಗಡೆ ಡೈರೆಕ್ಟಾಗಿ ಕುಳಿತುಕೊಳ್ಳುತ್ತಾರೆ, ವರ್ಷವೆಲ್ಲಾ ಕೆಲವರು ಲೂಟಿ ಹೊಡೆಯುತ್ತಾರೆ. ಒಳ್ಳೊಳ್ಳೆ ಜಾಗಕ್ಕೋಸ್ಕರ ಎಲ್ಲಾ ವಿಧಾನಸೌಧದ ಬಾಗಿಲಲ್ಲಿ, ಎಲ್ಲಾ. ಮಂತ್ರಿಗಳ ಬಾಗಿಲಲ್ಲಿ, ಕಛೇರಿಗಳ ಮುಂದೆ ಸುತ್ತಿ ಎಲ್ಲಾ ಒಳ್ಳೊಳ್ಳೆ ಜಾಗವನ್ನು ಸೆಲೆಕ್ಟ್ ಮಾಡುವುದಕ್ಕೆ ಬರುತ್ತಾರೆ. ನಾನು ಹೇಳುತ್ತೇನೆ. ಇವೊತ್ತು ದೇವೇಗೌಡರ ಸರ್ಕಾರ ಇದಕ್ಕೆ ಒಂದು ಹೊಸ ಕಾರ್ಯಕ್ರಮವನ್ನು ರೂಪಿಸಿ, ವರ್ಗಾವಣೆ ನೀತಿಯನ್ನು ರೂಪಿಸಬೇಕು, ವರ್ಗಾವಣೆ ನೀತಿಯನ್ನು ರೂಪಿಸದೇ ಹೋದರೆ ಇವೊತ್ತು ಸರ್ಕಾರಕ್ಕೆ ಕೆಟ್ಟ ಹೆಸರು ಕಟ್ಟಿಟ್ಟ ಬುತ್ತಿ. ಇವೊತ್ತು ವಿರೇಂದ್ರ ಪಾಟೀಲರು ಈ ಸದನದಲ್ಲಿ

ಕ್ಷಮೆ ಯಾಚನೆ ಮಾಡಿದ್ದರು. ಈ ವರ್ಗಾವಣೆ ಪಿಡುಗು ಏಕೆ ಬರುತ್ತದೋ ಎಂಬ ಒಂದು ಮಾತನ್ನು ಹೇಳಿದ್ದರು. ಇವೊತ್ತು ಯಾರು ಜಿಲ್ಲಾ ಮಟ್ಟದಲ್ಲಿ, ತಾಲ್ಲೂಕು ಮಟ್ಟದಲ್ಲಿ ಎಫಿಷಿಯಂಟ್ ಆಗಿ ಕೆಲಸ ಮಾಡುತ್ತಾರೋ, ಅವರನ್ನು ಅಲ್ಲೇ ಇರಿಸಬೇಕು. ಅವನು ಜನಹಿತ ಕೆಲಸವನ್ನು ಮಾಡದೇ ಇದ್ದರೆ ಅವನನ್ನು ಬದಲಾಯಿಸತಕ್ಕಂಥ ಕೆಲಸವನ್ನು ಮಾಡಬೇಕು ಎಂದು ಹೇಳಿ, ವರ್ಗಾವಣೆ ರೂಪಿಸಿ ಹೊಸ ಕಾಯಕಲ್ಪಕ್ಕೆ ಎಡೆಮಾಡಿಕೊಡಬೇಕು ಎಂದು ಹೇಳುತ್ತೇನೆ. ಇನ್ನು ಪೋಲಿಸ್ ಇಲಾಖೆಯ ಬಗ್ಗೆ ಹೇಳುವುದಾದರೆ, ಸ್ವಾತಂತ್ರ್ಯ ಬಂದಮೇಲೆ ಎಲ್ಲರೂ ಈ ರಾಜ್ಯವನ್ನು ಆಳಿದರು. ಇವತ್ತು ಈ ಪೋಲಿಸ್ ಇಲಾಖೆಗೆ ಒಳ್ಳೆಯ ಶಕ್ತಿ ಮತ್ತು ಯುಕ್ತಿ ಇರತಕ್ಕ ಮಂತ್ರಿಗಳನ್ನಾಗಿ ಮಾನ್ಯ ಸಿಂಧ್ಯರವರನ್ನು ಮಾನ್ಯ ದೇವೇಗೌಡರು ಮಾಡಿದ್ದಾರೆ. ನಾನಂತೂ ಅವರು ಗೃಹಮಂತ್ರಿಯಾಗಿ ಅವರು ಸಕ್ಸಸ್ ಆಗಬಹುದು, ಆಗಲಿ ಎಂದು ನಾನು ಹಾರೈಕೆ ಮಾಡುತ್ತೇನೆ. ಆದರೆ ಇದು ಬಹಳ ಪ್ರಮುಖವಾದ ಇಲಾಖೆ. ನಮ್ಮ ರಾಜ್ಯದ ಜನಸಂಖ್ಯೆಗನುಗುಣವಾಗಿ ಹೇಳುವುದಾದರೆ 1600 ಪೋಲಿಸ್ ಸ್ಟೇಷನ್‌ಗಳು ಬೇಕಾಗುತ್ತದೆ. ಇವತ್ತು ನಮ್ಮಲ್ಲಿರತಕ್ಕ ಪೋಲಿಸ್ ಠಾಣೆಗಳು ಎಂದರೆ 760 ಇವೆ. 1600 ಪೋಲಿಸ್ ಸ್ಟೇಷನ್‌ಗಳ ಅವಶ್ಯಕತೆ ಇರುವ ಕಡೆಯಲ್ಲಿ 700 ಪೋಲಿಸ್ ಠಾಣೆಗಳ ಪೋಲಿಸರು ಈ ರಾಜ್ಯವನ್ನು ನಿಯಂತ್ರಣ ಮಾಡಬೇಕು. 340 ಪೋಲಿಸ್ ಸ್ಟೇಷನ್‌ಗಳಲ್ಲಿ 20 ಜನ ಪೋಲಿಸ್ ಪೇದೆಗಳಿದ್ದಾರೆ. 360 ಪೋಲಿಸ್ ಸ್ಟೇಷನ್‌ಗಳಲ್ಲಿ ಕೇವಲ 4-4 ಜನರಂತೆ ಕಾನ್‌ಸ್ಟೇಬಲ್‌ಗಳಿದ್ದಾರೆ. ನಮ್ಮಲ್ಲಿ ಬೆಳ್ಳೂರು ಬಡಿಗನೂರು ಇನ್ನೊಂದು ನಾಗಮಂಗಲ ಈ 3 ಪೋಲಿಸ್ ಸ್ಟೇಷನ್‌ಗಳಿವೆ. ನಾಗಮಂಗಲ ಎಂಬುದು ತಾಲ್ಲೂಕು ಅಲ್ಲಿಯ ಸ್ಟೇಷನ್‌ನಲ್ಲಿ ಕೇವಲ 8 ಜನ ಪೋಲಿಸರು ಇದ್ದಾರೆ. ಅಲ್ಲಿ ಏನಾದರೂ ಒಂದು ಸಣ್ಣ ಗಲಾಟೆಯಾದರೂ ನೀವು ಬೇರೆಕಡೆಯಿಂದ ಪೋಲಿಸರನ್ನು ಕರೆಸಬೇಕು. ಮಾನ್ಯ ಗರುಡಾಚಾರ್‌ರವರು ಡಿ.ಜಿ.ಪಿ. ಆಗಿದ್ದಾಗ ನಾನು ಅವರ ಹತ್ತಿರ ಹೋಗಿ ಸ್ವಾಮಿ, ನೀವು ನಾಗಮಂಗಲ ತಾಲ್ಲೂಕಿನ ಬಂಡಿಗನೂರಿನವರು, ನೀವು ಇಷ್ಟು ದೊಡ್ಡ ಹುದ್ದೆಯಲ್ಲಿದ್ದೀರಿ, ಏನಾದರೂ ಮಾಡಿ ಅಲ್ಲಿಗೆ ಒಂದು ಪೋಲಿಸ್‌ಸ್ಟೇಷನ್ ಕೊಡಬೇಕೆಂದು ಕೇಳಿದಾಗ ಒಳ್ಳೆಯ ಒಂದು ಪೋಲಿಸ್‌ಸ್ಟೇಷನ್‌ನ್ನು ಸರ್ಕಾರದಿಂದ ಮಂಜೂರು ಮಾಡಿಸಿಕೊಡುತ್ತೇನೆಂದು ಹೇಳಿ ಮಂಜೂರು ಮಾಡಿಸಿದರು. ಅಲ್ಲಿಗೆ 28 ಜನ ಪೋಲಿಸರು ಬಂಡಿಗನೂರು ಸ್ಟೇಷನ್‌ನಲ್ಲಿದ್ದಾರೆ. ನಾಗಮಂಗಲ ತಾಲ್ಲೂಕು ಕೇಂದ್ರದಲ್ಲಿ ಕೇವಲ 8 ಜನ ಪೋಲಿಸರು ಇದ್ದಾರೆ. ಈ ಒಂದು ವ್ಯತ್ಯಾಸವನ್ನು ಬಗೆಹರಿಸಬೇಕು. ಇವೊತ್ತು ಮಹರಾಷ್ಟ್ರದಲ್ಲಿ 500 ಜನರಿಗೆ ಒಬ್ಬ ಕಾನ್‌ಸ್ಟೇಬಲ್‌ನ ರೀತಿಯುಲ್ಲಿ ಕೆಲಸಮಾಡುತ್ತಿದ್ದಾರೆ. ಕರ್ನಾಟಕದಲ್ಲಿ 1400 ಜನರಿಗೆ ಒಬ್ಬರಂತೆ ಕಾನ್‌ಸೆಟ್‌ಬಲ್‌ಗಳು ಕೆಲಸಮಾಡುತ್ತಿದ್ದಾರೆ. ಈ ವ್ಯತ್ಯಾಸವನ್ನು ಬೇರೆ ರಾಜ್ಯಗಳಿಗೆ ಹೋಲಿಕೆ ಮಾಡಿ ಸರಿಪಡಿಸಬೇಕು. ಇಡೀ ರಾಜ್ಯದಲ್ಲಿ ಇರತಕ್ಕವರು 50 ಸಾವಿರ ಪೋಲಿಸ್ ಕಾನ್‌ಸ್ಟೇಬಲ್‌ಗಳು. ಇಷ್ಟು ಜನ ಏನೇನೂ ಸಾಲದು. ಜನರು ಏನಾದರೂ ಹೆಚ್ಚು ಸಂಖ್ಯೆಯಲ್ಲಿ ಬಂದು ಪ್ರತಿಭಟನೆಯನ್ನು ಮಾಡಿದರೆ ನಿಮ್ಮ ಹತ್ತಿರ ಇರತಕ್ಕ ಪೋಲಿಸ್ ಫೋರ್ಸ್ ಏನೇನೂ ಸಾಲುವುದಿಲ್ಲ. 1 ಲಕ್ಷ ಜನರು ಈ ಬೆಂಗಳೂರನ್ನು

ಮುತ್ತಿಗೆ ಹಾಕುತ್ತೇವೆಂದು ಬಂದರೆ ನೀವು ಹೊರರಾಜ್ಯದಿಂದ ಪೋಲಿಸರನ್ನು ತರಿಸಬೇಕೇ ಹೊರತು ನಿಮ್ಮಲ್ಲಿರತಕ್ಕ ಪೋಲಿಸ್ ಏನೇನೂ ಸಾಲುವುದಿಲ್ಲ ಎಂದು ಹೇಳಬೇಕಾಗುತ್ತದೆ. ಬಿಹಾರದಲ್ಲಿ ಮುಖ್ಯಮಂತ್ರಿಯಾಗಿರತಕ್ಕ ನಿಮ್ಮ ಲಲ್ಲೂ ಪ್ರಸಾದ್‌ರವರು ಅಧಿಕಾರಕ್ಕೆ ಬಂದಕೂಡಲೇ 20 ಸಾವಿರ ಪೋಲಿಸ್ ಕಾನ್‌ಸ್ಟೇಬಲ್‌ಗಳನ್ನು ಏಕಕಾಲದಲ್ಲಿ ತೆಗೆದುಕೊಳ್ಳುತ್ತಿದ್ದಾರೆ. ಈಗ ನಾವು 5 ಸಾವಿರ ಜನರನ್ನು ತೆಗೆದುಕೊಳ್ಳುತ್ತೇವೆಂದು ಹೇಳಿದ್ದೀರಿ. ಇನ್ನೂ ಹೆಚ್ಚು ಜನರನ್ನು ತೆಗೆದುಕೊಂಡು ಈ ಪೋಲಿಸ್ ಇಲಾಖೆಯನ್ನು ಬಲಪಡಿಸಬೇಕೆಂದು ಹೇಳಬಯಸುತ್ತೇನೆ. ಇವತ್ತು ಎಲ್ಲಾದರೂ ರೌಡಿಗಳ ಹಾವಳಿಯಾದರೆ, ಎಲ್ಲಾದರೂ ಕೋಮು ಗಲಭೆಯಾದರೆ, ಯಾರಾದರೂ ಹೆಣ್ಣುಮಕ್ಕಳನ್ನು ಚುಡಾಯಿಸಿದರೆ, ರಾಮಜ್ಯೋತಿ ಬಂದರೆ, ಇಟ್ಟಿಗೆ ಬಂದರೆ ಹೆಣವನ್ನು ಏನಾದರೂ ಮೆರವಣಿಗೆ ತೆಗೆದುಕೊಂಡು ಬರುತ್ತೇವೆ ಎಂದು ಯಾರಾದರೂ ಹೇಳಿದರೆ ಇಲ್ಲಿರತಕ್ಕ 50 ಸಾವಿರ ಪೋಲೀಸರೂ ಅಲ್ಲಿಗೆ ಹೋಗಬೇಕು. ಅನಂತರ ಯಾವ ಪೋಲೀಸರೂ ಇಲ್ಲ. ಈ ಪರಿಸ್ಥಿತಿಯನ್ನು ನಾವು ನೋಡುತ್ತಿರುವುದರಿಂದ ಈ ಇಲಾಖೆಗೆ ಕಾಯಕಲ್ಪ ಆಗಬೇಕಾದರೆ ನೀವು ಪೋಲೀಸ್ ಇಲಾಖೆಯ ಬಲವರ್ಧನೆ ಮಾಡಬೇಕು. ಮಾನ್ಯ ಬಂಗಾರಪ್ಪನವರು ಮುಖ್ಯ ಮಂತ್ರಿ ಆಗಿದ್ದಾಗ ಒಂದು ಮಾಸ್ಟರ್ ಪ್ಲಾನ್‌ನ್ನು ಮಾಡಿದ್ದರು. ಹೆಚ್ಚು ಪೋಲಿಸ್ ಸ್ಟೇಷನ್‌ಗಳಾಗಬೇಕೆಂದು ಮಾನ್ಯ ಬಂಗಾರಪ್ಪನವರು ಇಲ್ಲಿ ಒಂದು ಬಿಲ್‌ನ್ನು ತಂದರು. 135 ಕೋಟಿ ರೂಗಳ ವೆಚ್ಚದಲ್ಲಿ ಈ ಪೋಲಿಸ್ ಇಲಾಖೆಗೆ ಒಂದು ಹೊಸ ಚಾಲನೆಯನ್ನು ಕೊಡಬೇಕು, ಹೆಚ್ಚು ಪೋಲಿಸ್ ಸ್ಟೇಷನ್‌ಗಳು ಆಗಬೇಕು, ಹೆಚ್ಚು ಪೋಲಿಸ್ ಕಾನ್‌ಸ್ಟೇಬಲ್‌ಗಳನ್ನು ತೆಗೆದುಕೊಳ್ಳಬೇಕು ಎಂದು ಮಾಡಿದ್ದರು. ನೀವು ಕೇವಲ ಹೆಚ್ಚು ಡಿ. ಜಿ.ಪಿ.ಗಳನ್ನು ಈ ಬೆಂಗಳೂರಿನಲ್ಲಿ ಮಾಡಿದರೆ ಅದರಿಂದ ಏನೇನೂ ಆಗುವುದಿಲ್ಲ. ಐ.ಜಿ.ಪಿ.ಗಳಿಗೆ ಆಫೀಸ್‌ನ್ನು ಕೊಟ್ಟುಕೂಡಿಸಿದರೆ ಏನೂ ಪ್ರಯೋಜನವಾಗುವುದಿಲ್ಲ. ಪೋಲಿಸ್ ಸ್ಟೇಷನ್‌ಗಳಲ್ಲಿ ಕಾನ್‌ಸ್ಟೇಬಲ್‌ಗಳು ಹೆಚ್ಚಾಗಬೇಕು. ಸಬ್ ಇನ್‌ಸ್ಪೆಕ್ಟರ್‌ಗಳು ಹೆಚ್ಚಾಗಬೇಕು. ಇವತ್ತು ನೀವು ಪ್ರೊಮೋಷನ್ ಕೊಟ್ಟು ಸಬ್‌ಇನ್‌ಸ್ಪೆಕ್ಟರ್‌ಗಳನ್ನು ಹಳ್ಳಿಗಳಿಗೆ ಹಾಕುತ್ತೀರಿ. ಅಲ್ಲಿ ಅವರು ಪೋಲಿಸ್‌ಸ್ಟೇಷನ್‌ಗಳನ್ನು ನಡೆಸುವುದನ್ನು ನೋಡಿದರೆ ಚಿಂತಾಜನಕವಾಗಿರುತ್ತದೆ. ಇದರ ಬಗ್ಗೆ ಮೊದಲು ನೀವು ಕ್ರಮತೆಗೆದುಕೊಳ್ಳಬೇಕು. ಅಂತರಾಷ್ಟ್ರೀಯ ಮಟ್ಟದಲ್ಲಿ ನಮ್ಮ ರಾಜ್ಯವನ್ನು ಜದ್ ಜೋನ್ ಎಂದು ಕರೆಯುತ್ತಾರೆ. ಮಾಜಿ ರಾಷ್ಟ್ರಪತಿಗಳು ಈ ಬೆಂಗಳೂರಿನಲ್ಲಿ ವಾಸವಾಗಿದ್ದಾರೆ. ಪಿ.ಸಿ.ಅಲೆಕ್ಸಾಂಡರ್‌ರವರು ಈ ಊರಿನಲ್ಲಿ ವಾಸಮಾಡುತ್ತಿದ್ದಾರೆ. ಡಾ॥ರಾಜಾರಾಮಣ್ಣನವರು ಇಲ್ಲಿ ವಾಸಮಾಡುತ್ತಿದ್ದಾರೆ ಇಲ್ಲಿ ಟೆರರಿಸ್ಟ್‌ಗಳ ಹಾವಳಿ, ಎಲ್.ಟಿ.ಟಿ.ಗಳ ಹಾವಳಿ ಇಲ್ಲ, ಯಾವುದೇ ಅಶಾಂತಿಗೆ ಒಳಗಾಗತಕ್ಕ ರಾಜ್ಯ ಇದಲ್ಲ, ಈ ರಾಜ್ಯದಲ್ಲಿ ನಾವು ಶಾಂತವಾಗಿರಬಹುದೆಂದು ತೀರ್ಮಾನ ಮಾಡಿ ಅವರೆಲ್ಲಾರೂ ಇಲ್ಲೇ ಇದ್ದಾರೆ. ಅವರಿಗೆಲ್ಲಾ ಈ 50 ಸಾವಿರ ಪೋಲೀಸರ ಪೈಕಿಯೇ ರಕ್ಷಣೆ ಕೊಡಬೇಕು. ಸೆಕ್ಯೂರಿಟಿ ಕೊಡಬೇಕು. ಆದ್ದರಿಂದ ಈ ಪೋಲಿಸ್ ಇಲಾಖೆಯನ್ನು ಬಲಪಡಿಸಿ ಇದಕ್ಕೆ ಕಾಯಕಲ್ಪಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಇನ್ನು ಫೈರ್ ಸ್ಟೇಷನ್ ಬಗ್ಗೆ ಹೇಳುವುದಾದರೆ, ನಿಮ್ಮ ಬಜೆಟ್‌ನಲ್ಲಿ ಆಗಲಿ, ಮಾನ್ಯರಾಜ್ಯಪಾಲರ ಭಾಷಣದಲ್ಲಿ ಆಗಲಿ ಈ ಫೈರ್ ಸ್ಟೇಷನ್ ಬಗ್ಗೆ ಹೆಚ್ಚು ಹಣವನ್ನು ಒದಗಿಸಿರುವುದನ್ನು ನಾವು ಕಾಣುತ್ತಿಲ್ಲ. ನಮ್ಮ ರಾಜ್ಯದಲ್ಲಿ 100 ಫೈರ್‌ಸ್ಟೇಷನ್‌ಗಳಿವೆ. ತಮಿಳ್ನಾಡಿನಲ್ಲಿ 280 ಫೈರ್ ಸ್ಟೇಷನ್‌ಗಳಿವೆ. ಕೇರಳದಲ್ಲಿ 250 ಫೈರ್ ಸ್ಟೇಷನ್‌ಗಳಿವೆ, ತಮಗೆ ಹೇಳುವುದಾದರೆ ಒಂದೊಂದು ತಾಲೂಕಿಗೆ ಒಂದೊಂದು ಫೈರ್ ಸ್ಟೇಷನ್‌ಗಳಿರಬೇಕು. ಇಡೀ ಮಂಡ್ಯ ಜಿಲ್ಲೆಯಲ್ಲಿ ಮಂಡ್ಯವನ್ನು ಬಿಟ್ಟರೆ ಬೇರೆ ಎಲ್ಲೂ ಕೂಡ ಒಂದೇ ಒಂದು ಫೈರ್ ಸ್ಟೇಷನ್ ಇಲ್ಲ. ತಾವು ಉತ್ತರ ಕೊಡುವ ಸಂದರ್ಭದಲ್ಲಿ ತಮ್ಮ ಸಬ್ ಡಿವಿಜನ್‌ಗೆ ಕೆ.ಆರ್.ಪೇಟೆ, ಪಾಂಡವಪುರ ಅಥವಾ ನಾಗಮಂಗಲಕ್ಕೆ ಒಂದು ಫೈರ್ ಸ್ಟೇಷನ್‌ನ್ನು ಮಂಜೂರು ಮಾಡುತ್ತೇವೆಂಬ ಮಾತನ್ನು ತಾವು ಹೇಳಬೇಕೆಂದು ಕೇಳಿಕೊಳ್ಳುತ್ತೇನೆ. ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, ನಮ್ಮಲ್ಲಿ ಎಲ್ಲಾದರೂ ಬೆಂಕಿ ಬಿದ್ದರೆ ಚಾಮರಾಜ ನಗರ ತಾಲ್ಲೂಕಿನಿಂದ ಫೈರ್ ಫೋರ್ಸ್‌ನ್ನು ತರಿಸಬೇಕಾಗುತ್ತದೆ. ಅಥವಾ ಹಾಸನದಿಂದ ಇಲ್ಲವೇ ತುಮಕೂರಿನಿಂದ ತರಿಸಬೇಕು. ತುಮಕೂರಿನಿಂದ ಬರುವುದರೊಳಗೆ ನಮ್ಮಲ್ಲಿ ಎಲ್ಲವೂ ಉರಿದು ಹೋಗಿರುತ್ತದೆ. ಏನೇನೂ ಉಳಿದಿರುವುದಿಲ್ಲ. ನಿಮ್ಮ ಚಾಮರಾಜ ನಗರಕ್ಕೆ ಮಾತ್ರ (ವಾಟಾಳ್‌ರವರನ್ನು ಉದ್ದೇಶಿಸಿ) ಗಲಾಟೆ ಮಾಡಿ ಮಾಡಿಸಿ ಕೊಂಡುಬಿಡುತ್ತೀರಿ. ನಮ್ಮಕಡೆಗೂ ಮಾಡುವಂತೆ ತಾವು ಹೇಳಬೇಕು. ಪ್ರತಿಯೊಂದು ತಾಲ್ಲೂಕಿಗೂ ಒಂದೊಂದು ಫೈರ್ ಸ್ಟೇಷನ್ ಮಂಜೂರು ಮಾಡಬೇಕು.

ಅಧ್ಯಕ್ಷರು : ಎಲ್ಲಿ ಬೆಂಕಿ ಅನಾಹುತಗಳು ಹೆಚ್ಚಾಗಿ ಆಗಿದ್ದಾಗೆ ಆಗುತ್ತಿರುತ್ತವೆ, ಎಲ್ಲಿ ಸಮೀಪದಲ್ಲಿ ಫೈರ್ ಸ್ಟೇಷನ್ ಇರುವುದಿಲ್ಲ, ಅಂಥ ಕಡೆ ಪ್ರಾಧಾನ್ಯತೆಯಮೇಲೆ ಮಾಡುತ್ತಾರೆ. ತಾಲ್ಲೂಕಿಗೆ ಒಂದೊಂದು ಫೈರ್ ಸ್ಟೇಷನ್‌ನಂತೆ ಕೊಡುತ್ತಾರೆಯೇ?

ಶ್ರೀ ವಾಟಾಳ್ ನಾಗರಾಜ್ : ಫೈರ್ ಸ್ಟೇಷನ್ ಎಂದರೆ ನ್ಯಾಯಬೆಲೆ ಅಂಗಡಿಗಳು ಇದ್ದಂತೆ ಎಂದು ತಿಳಿದುಕೊಂಡಿರಬಹುದು. ಅಗ್ನಿಶಾಮಕದಳಗಳು ನ್ಯಾಯಬೆಲೆ ಅಂಗಡಿಗಳು ಎಂದು ತಿಳಿದುಕೊಂಡು ಇವರು ಕೇಳುತ್ತಿದ್ದಾರೆ.

ಶ್ರೀ ಎಲ್.ಆರ್.ಶಿವರಾಮೇಗೌಡ : ಈ ರಾಜ್ಯದಲಿಲ 135 ತಾಲೂಕುಗಳು ಸತತ ಬರಗಾಲದಿಂದ ನರಳುತ್ತಿವೆ. ಅದರ ಅರ್ಥ ಕುಡಿಯುವ ನೀರಿನ ಅಭಾವ. ಕುಡಿಯುವ ನೀರಿಗೆ ಅಭಾವ ಇದೆ ಎಂದರೆ....

ಶ್ರೀ ವಾಟಾಳ್ ನಾಗರಾಜ್ : ಬರಗಾಲಕ್ಕೂ ಅಗ್ನಿ ಶಾಮಕದಳಕ್ಕೂ ಏನು ಸಂಬಂಧ?

ಶ್ರೀ ಎಲ್.ಆರ್. ಶಿವರಾಮೇಗೌಡ : ಸ್ವಾಮಿ, ನಾನು ಈ ಅಧಿವೇಶನದಲ್ಲೇ ಮಾತನಾಡಿಲ್ಲ. ನನಗೆ ಏಕೆ ಹೀಗೆ ತೊಂದರೆ ಕೊಡುತ್ತಿದ್ದೀರಿ? ನಮ್ಮ ತಾಲ್ಲೂಕಿನಲ್ಲಿ ಒಂದು ಬಿಂದಿಗೆ ನೀರೂ ಕೂಡ ಕುಡಿಯುವುದಕ್ಕೆ ಸಿಕ್ಕುವುದಿಲ್ಲ. ಎಲ್ಲಾದರೂ ದೂರ ಹೋಗಿ ಒಂದು ಗುಡಿಸಲನ್ನು ಕಟ್ಟಿಕೊಂಡರೂ ಅಲ್ಲೂ ಕೂಡ ಕುಡಿಯುವುದಕ್ಕೆ ಒಂದು ಬಿಂದಿಗೆನೀರು ಸಿಕ್ಕುವುದಿಲ್ಲ. ನಮಗೆ ಫೈರ್ ಫೋರ್ಸ್ ಬರಬೇಕಾದರೆ ಹಾಸನದಿಂದಲೋ ಮಂಡ್ಯದಿಂದಲೋ ಬರಬೇಕು. ನಾನಾದರೂ ಹೇಳುವುದೇನೆಂದರೆ, ಪ್ರತಿಯೊಂದು ತಾಲ್ಲೂಕಿಗೆ ಫೈರ್ ಸ್ಟೇಷನ್ ಮಾಡುವುದಕ್ಕಾಗದಿದ್ದರೂ ಕನಿಷ್ಠ 2-3 ತಾಲ್ಲೂಕುಗಳನ್ನು

ಸೇರಿಸಿ ಸಬ್ ಡಿವಿಜನ್‌ಗಾದರೂ ಒಂದೊಂದು ಮಾಡುವ ವ್ಯವಸ್ಥೆ ಬೇಡವೇ? ಅದನ್ನು ಮಾಡಬೇಕೆಂದು ನಾನು ಹೇಳುತ್ತೇನೆ.

ಶ್ರೀ ಕೆ.ಎನ್. ನಾಗೇಗೌಡ : ಅದುತಪ್ಪು ಭಾವನೆ. ಪ್ರತಿ 40 ಕಿ.ಮಿ.ಗೆ ಒಂದರಂತೆ ಫೈರ್ ಸ್ಟೇಷನ್ ಮಾಡಬೇಕೆಂದು ನ್ಯಾಷನಲ್ ಪಾಲಿಸಿ ಮಾಡಿದ್ದಾರೆ. ಫೈರ್‌ಸ್ಟೇಷನ್ ಮಾಡುವುದು ಕೇವಲ ಬೆಂಕಿ ಹತ್ತಿಕೊಳ್ಳುವುದಕ್ಕೆ ಹುಲ್ಲುಮೆ ಇದ್ದಾವೆ. ನಾನು ನಮ್ಮ ಫೈರ್ ಸ್ಟೇಶನ್ ಮಿನಿಸ್ಟರ್ ಜೊತೆಗೆ ನಿನ್ನೆ ಮಾತನಾಡಿದೆ ಈ ಬಜೆಟ್‌ನಲ್ಲಿ 12-13 ಫೈರ್‌ಸ್ಟೇಷನ್‌ಗಳನ್ನು ಮಂಜೂರುಮಾಡಿದ್ದಾರೆ. 20 ಪೋಲೀಸ್ ಸ್ಟೇಶನ್‌ಗಳನ್ನು ಮಂಜೂರು ಮಾಡಿದ್ದಾರೆ. ಪ್ರತಿಯೊಂದು ತಾಲ್ಲೂಕಿಗೂ ಒಂದೊಂದು ಫೈರ್ ಸ್ಟೇಷನ್‌ನ ಅವಶ್ಯಕತೆ ಇದೆ ಎಂದು ಇದಕ್ಕೆ ನ್ಯಾಷನಲ್ ಪಾಲಿಸಿ ಮಾಡಬೇಕೆಂದು ಕೇಂದ್ರ ಸರ್ಕಾರದವರು ಯೋಚನೆ ಮಾಡಿ, 40 ಕಿ.ಮೀ.ಗೇ ಒಂದೊಂದು ಮಾಡಬೇಕೆಂದು ಯೋಚನೆ ಮಾಡಿದ್ದಾರೆ. ನಮ್ಮಲ್ಲಿ ಕಬ್ಬಿನ ಗದ್ದೆಗಳಿವೆ, ಅಷ್ಟೇ ಅಲ್ಲ ರಾಗಿ ಹುಲ್ಲಿನ ಮೆದೆಗಳು ಭತ್ತದ ಹುಲ್ಲಿನ ಮೆದೆಗಳು, ಗುಡಿಸಲು ಇವೆ. ಈ ಚುನಾವಣೆ ಆದಮೇಲೆ ಸುಮಾರು 2-3 ತಿಂಗಳವರೆಗೆ ಕೆಲವರು ಬೀಡಿ ಹಚ್ಚಿಕೊಳ್ಳುವುದಕ್ಕೆ ಹೋಗಿಬೆಂಕಿ ಹಚ್ಚಿಬಿಡುತ್ತಾರೆ. ವಾಟಾಳರ ಸ್ನೇಹಿತರು ಕನ್ನಡ ಚಳುವಳಿಗಾರರು ಹಾಗೇ ಬೆಂಕಿ ಹಚ್ಚಿಬಿಡುತ್ತಾರೆ....

ಶ್ರೀ ವಾಟಾಳ್ ನಾಗರಾಜ್ : ಲಘುವಾಗಿ ಮಾತನಾಡುವುದು, ಹಾಸ್ಯವಾಗಿ ಮಾತನಾಡುವುದು ಒಂದು ವಿಧಾನ. ಇದು ಹರಿಕಥೆ ಅಲ್ಲ. ನಾನು ಇದನ್ನು ಒಪ್ಪುವುದಿಲ್ಲ.

ಶ್ರೀ ಕೆ.ಎಸ್.ನಾಗೇಗೌಡ : ಇದನ್ನು ಸೀರಿಯಸ್ ಆಗಿ ತೆಗೆದುಕೊಳ್ಳಬೇಡಿ.

ಶ್ರೀ ವಾಟಾಳ್ ನಾಗರಾಜ್ : ಮಾತನಾಡುವಾಗ ತಾವು ದಯವಿಟ್ಟು ತಾವು ಹೇಳಿದಂತೆ ನಾವು ಬೆಂಕಿ ಹಚ್ಚುವವರಲ್ಲ. ಬೆಂಕಿ ಹಚ್ಚುವವರೆಲ್ಲಾ ಜನತಾದಳದಲ್ಲಿ, ಕಾಂಗ್ರೆಸ್‌ನಲ್ಲಿ ಸೇರಿಕೊಂಡು ಬಿಟ್ಟಿದ್ದಾರೆ. ಅವರು ಊರಿಗೆಲ್ಲಾ, ದೇಶಕ್ಕೆಲ್ಲಾ ಬೆಂಕಿ ಹಚ್ಚುತ್ತಿದ್ದಾರೆ. ಬೆಂಕಿ ಹಚ್ಚುವವರಿಗೆಲ್ಲಾ ಇವರೇ ಮೊದಲನೇ ಗುರುಗಳು. ಈ ಮಾತನ್ನು ನೀವು ನಮ್ಮ ಮುಂದೆ ಹೇಳಬೇಡಿ. ಬೆಂಕಿ ಹಚ್ಚುವವರಲ್ಲಿ ಶಿವರಾಮೇ ಗೌಡರು ಮೊದಲನೇ ಗುರು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ಮಾನ್ಯ ಸಿಂಧ್ಯರವರ ಪರವಾಗಿ ಮಾನ್ಯ ನಾಗೇಗೌಡರು ಉತ್ತರವನ್ನು ಕೊಟ್ಟರು. ಅವರಿಗೆ ಯಾವಾಗ ಅಧಿಕಾರ ಕೊಟ್ಟರೋ ನನಗೆ ಗೊತ್ತಿಲ್ಲ.

ಶ್ರೀ ಎಲ್.ಆರ್. ಶಿವರಾಮೇಗೌಡ: ಇನ್ನು ಆರೋಗ್ಯ ಇಲಾಖೆಯ ಬಗ್ಗೆ ಒಂದೆರಡು ಮಾತನ್ನು ಹೇಳಬಯಸುತ್ತೇನೆ. ಇವತ್ತು ಗ್ರಾಮಾಂತರ ಪ್ರದೇಶದಲ್ಲಿರತಕ್ಕ ಆಸ್ಪತ್ರೆಗಳ ಪರಿಸ್ಥಿತಿ ಯಾವ ಮಟ್ಟದಲ್ಲಿದೆ ಎಂಬ ಬಗ್ಗೆ ಮಾನ್ಯ ಆರೋಗ್ಯ ಮಂತ್ರಿಗಳು ವಿಧಾನ ಪರಿಷತ್ತಿನಲ್ಲಿ ಎಂದು ಹೇಳಿಕೆಯನ್ನುಕೊಟ್ಟಿದ್ದಾರೆ. ಖಾಲಿ ಇರತಕ್ಕ ವೈದ್ಯರ ಹುದ್ದೆಗಳನ್ನು ಶೀಘ್ರವಾಗಿ ತುಂಬುತ್ತೇವೆಂದು ಹೇಳಿದ್ದಾರೆ. ಹಾಗೆ ತುಂಬುವ ಸಂದರ್ಭದಲ್ಲಿ ಗ್ರಾಮಾಂತರ ಪ್ರದೇಶದಲ್ಲೇ ಸೇವೆ ಮಾಡುತ್ತೇವೆ ಎನ್ನತಕ್ಕ ಧೋರಣೆ ಇರತಕ್ಕವರನ್ನು ತೆಗೆದುಕೊಳ್ಳಬೇಕೆಂಬುದು ಒಂದು ನನ್ನ ಒತ್ತಾಯ ಇವತ್ತು ಆಸ್ಪತ್ರೆಗಳಲ್ಲಿ

ನರ್ಸ್‌ಗಳಿಲ್ಲ ಅದೇ ರೀತಿ ಅವಶ್ಯಕವಾಗಿ ಬೇಕಾದ ಸಿಬ್ಬಂದಿ ಕೂಡ ಇಲ್ಲದೇ ಇರುವುದನ್ನು ನಾವು ನೋಡಿದ್ದೇವೆ. ಅದರ ಬಗ್ಗೆ ಹೆಚ್ಚು ಒತ್ತು ಕೂಡಬೇಕು.

ಇತ್ತೀಚೆಗೆ ಬೆಂಗಳೂರಿನಲ್ಲಿ ಕಿಡ್ನಿ ಹಗರಣ ಬಹಳ ಜೋರಾಗಿ ನಡೆಯಿತು. ಇದು ಬಿ.ಬಿ.ಸಿ.ಯಿಂದ ಕೂಡ ಪ್ರಸಾರವಾಯಿತು. ಬೆಂಗಳೂರು ನಗರದಲ್ಲಿ ತಮಗೆ ಗೊತ್ತಿರುವಂತೆ ಕಳ್ಳತನಗಳು, ಧರೋಡೆಗಳು ನಡೆಯುತ್ತಿದ್ದುವು. ಆದರೆ ಈಗ ಮನುಷ್ಯನ ಅಂಗವನ್ನು ಆಪರೇಷನ್ ಮಾಡಿ ಕಳ್ಳತನವನ್ನು ಮಾಡುವಂಥ ಹೊಸ ದಾಖಲೆಯನ್ನು ಸೃಷ್ಟಿಮಾಡಿದ್ದಾರೆ. ನಾನಾದರೂ ಕೇಳುತ್ತೇನೆ. ಈ ಕಿಡ್ನಿ ಹಗರಣವನ್ನು ಯಾರು ತನಿಖೆ ಮಾಡುತ್ತಿದ್ದಾರೆ ಅವರು ಇವತ್ತು ಈ ಸರ್ಕಾರವನ್ನು ತಪ್ಪುದಾರಿಗೆಳೆಸುತ್ತಿದ್ದಾರೆ. ಇತ್ತೀಚೆಗೆ ಮಾನ್ಯ ಗೃಹಸಚಿವರು ಈ ಸದನದಲ್ಲಿ ಒಂದು ಹೇಳಿಕೆಯನ್ನು ಕೊಡುತ್ತಾ 3 ಜನ ಡಾಕ್ಟರ್‌ಗಳು ಹಾಗೂ ಅದಕ್ಕೆ ಸಂಬಂಧಪಟ್ಟಂತೆ ಇಬ್ಬರು ವ್ಯಕ್ತಿಗಳನ್ನು ನಾವು ಬಂಧಿಸಿದ್ದೇವೆ, ಅವರ ವಿರುದ್ಧ ಕ್ರಮ ತೆಗೆದುಕೊಂಡಿದ್ದೇವೆಂದು ಹೇಳಿದ್ದಾರೆ. ನನಗೆ ತಿಳಿದಮಟ್ಟಿಗೆ ಕಿಡ್ನಿಯಲ್ಲಿ ಎರಡು ವಿಧ. ಕಿಡ್ನಿಯನ್ನು ತೆಗೆಯುವವರು ಒಂದು ಗ್ರೂಪ್ ಆದರೆ, ಆ ಕಿಡ್ನಿಯನ್ನು ಜೋಡಿಸುವವರದ್ದು ಇನ್ನೊಂದು ಗ್ರೂಪ್. ನೀವು ಈ ಕಿಡ್ನಿಯನ್ನು ತೆಗೆಯುತ್ತಿದ್ದವರ ವಿರುದ್ಧ ಕ್ರಮ ತೆಗೆದುಕೊಂಡಿದ್ದೀರಿ. ಆದರೆ ಇಲ್ಲಿಂದ ಅದನ್ನು ತೆಗೆದುಕೊಂಡು ಹೋಗಿ ಹೊರಗಡೆ ಮಾರಾಟ ಮಾಡುತ್ತಿದ್ದವರ ಬಗ್ಗೆ ನೀವು ಒಂದೇ ಒಂದು ಚಕಾರವನ್ನೂ ಎತ್ತಿಲ್ಲ.

5.50 ಪಿ.ಎಂ

ಡಾ॥ ಯು.ಚಿತ್ತರಂಜನ್ : ಮಾನ್ಯ ಅಧ್ಯಕ್ಷರೆ, ಕಿಡ್ನಿ ಹಗರಣದ ಬಗ್ಗೆ ನನಗೆ ತಿಳಿದಮಟ್ಟಿಗೆ ಹೇಳಬಯಸುತ್ತೇನೆ. ನಾನು ಕಳೆದ 30 ವರ್ಷಗಳಿಂದ ಡಾಕ್ಟರ್ ಆಗಿದ್ದೇನೆ. ಇವತ್ತಿನ ದಿವಸ ಇದರ ಬಗ್ಗೆ ಪ್ರಚಾರ ತುಂಬ ಜಾಸ್ತಿ ಆಗಿದೆ. ಕಿಡ್ನಿ ಟ್ರಾನ್ಸ್‌ಫ್ಲಾಂಟ್‌ನಲ್ಲಿ ಮೂರು ವಿಧ. 1) ಲೈವ್ ರಿಲೇಟೆಡ್ ಟ್ರಾನ್ಸ್‌ಫ್ಲಾಂಟ್ 2) ಲೈವ್ ಅನ್‌ರಿಲೇಡೆಟ್ ಟ್ರಾನ್ಸ್‌ಫ್ಲಾಂಟ್ ಎಂದರೆ ಒಂದೇ ಸಾರಿ ಎರಡು ಆಪರೇಷನ್ ಥಿಯೇಟರುಗಳಲ್ಲಿ, ಅವನ ರಿಲೇಟೀವ್ ಮೇಲೆ ತಾಯಿ ಇರಬಹುದು, ತಮ್ಮ ಇರಬಹುದು,ತಂಗಿ ಇರಬಹುದು ಹೀಗೆ ಒಬ್ಬರ ಮೇಲೆ ತೆಗೆಯುವುದಕ್ಕೆ ಆಪರೇಷನ್ ಮಾಡುತ್ತಾರೆ, ಒಬ್ಬರ ಮೇಲೆ ಹಾಕಲಿಕ್ಕೆ ಆಪರೇಷನ್ ಮಾಡುತ್ತಾರೆ. ಇದು ಸೈಡ್ ಬೈ ಸೈಡ್ ಆಗಬೇಕಾಗುತ್ತದೆ. ಇದಕ್ಕೆ ಲೈವ್ ರಿಲೇಟೆಡ್ ಟ್ರಾನ್ಸ್‌ಪ್ಲಾಂಟ್ ಎಂದು ಹೆಸರು. 2) ಲೈವ್ ಅನ್‌ರಿಲೇಟೆಡ್ ಟ್ರಾನ್ಸ್‌ಪ್ಲಾಂಟ್ ಅಂದರೆ ಈಗ ಹಗರಣ ಇದಕ್ಕೆ ಸಂಬಂಧಪಟ್ಟದ್ದು. ಅನರಿಲೇಟೆಡ್ ಟ್ರಾನ್ಸ್‌ಪ್ಲಾಂಟ್ ಅಂದರೆ ಆ ವ್ಯಕ್ತಿಗೆ ಯಾರೂ ಸಂಬಂಧಿ ಇಲ್ಲ, ಅವನ ಕಿಡ್ನಿ ತೆಗೆದು ಯಾವುದು ಮ್ಯಾಚ್ ಆಗುತ್ತದೆ ಅಂದರೆ ಬ್ಲಡ್ ಗ್ರೂಪ್‌ಮ್ಯಾಚ್ ಆಗಬೇಕು. ಟಿಷ್ಯೂ ಮ್ಯಾಚ್ ಆಗಬೇಕು. ಇದಾದ ಮೇಲೆ ನಾವು ಟ್ರಾನ್ಸ್‌ಪ್ಲಾಂಟ್ ಮಾಡಬೇಕಾಗುತ್ತದೆ. ಇಲ್ಲಿ ಮಾನ್ಯ ಸದಸ್ಯರು ಒಂದು ವಿಚಾರ ತಿಳಿದುಕೊಳ್ಳಬೇಕು. ಕೆಲವು ನಿಮಿಷಗಳಿಗಿಂತ ಜಾಸ್ತಿ ಅದನ್ನು ಸ್ಟೋರ್ ಮಾಡುವುದಕ್ಕೆ ಆಗುವುದಿಲ್ಲ. ನಮ್ಮ ಭಾರತದಲ್ಲಿ ಆ ವ್ಯವಸ್ಥೆ ಇಲ್ಲ. ಕಾರ್ನಿಯೂ ಕಣ್ಣು ಇದನ್ನು ದಿವಸಗಟ್ಟಲೆ ಸ್ಟೋರ್ ಮಾಡುವ ವ್ಯವಸ್ಥೆ ಭಾರತದಲ್ಲಿ ಇದೆ.

ಆದರೆ ಕಿಡ್ನಿಯನ್ನು ಆ ರೀತಿ ಸ್ಟೋರ್ ಮಾಡುವುದಕ್ಕೆ ಆಗುವುದಿಲ್ಲ. ಮೂರನೆಯದು ಕೆಡವರ್ ಟ್ರಾನ್ಸ್‌ಪ್ಲಾಂಟ್. ಕೆಡವರ್ ಅಂದರೆ ಹೆಣ. ಹೆಣದಿಂದ ತೆಗೆದದ್ದು ಉಪಯೋಗಕ್ಕೆ ಬರುವುದಿಲ್ಲ. ಮೆಡಿಕಲ್ ಟರ್ಮ್‌ದಲ್ಲಿ ಹೆಣ ಎಂದರೆ ಬ್ರೈನ್ ಡೆತ್- ಇ.ಇ.ಬಿ. This should go at horizontal line ಅದು ನೇರವಾಗಿ ಲೈನ್ ತೋರಿಸಿದರೆ ಬ್ರೈನ್ ಡೆತ್ ಆಯಿತು ಎಂದು. ಮನುಷ್ಯ ಬದುಕುವುದಕ್ಕೆ ಖಂಡಿತ ಸಾಧ್ಯವಿಲ್ಲ. ಹೇಗೆ ಶ್ವಾಸಕೋಶ ಆಡುತ್ತದೆ, ಹೃದಯ ಆಡುತ್ತದೆ ಎಂದರೆ ವೆಂಟಲೇಟರ್ಸ್ ಇದ್ದಾಗ ಉಪಕರಣಗಳ ಮೇಲೆ ಹೃದಯ ಪುಪ್ಪಸ ಕಿಡ್ನಿ ಮಾಡುವುದಕ್ಕೆ ಆಗುತ್ತದೆ. ಇವತ್ತು ಅಮೇರಿಕ, ಜರ್ಮನ್, ಇಂಗ್ಲೇಡ್‌ಗಳಲ್ಲಿ ಆ ಒಂದು ವ್ಯವಸ್ಥೆ ಇದೆ. ಕೆಡವರ್ ಡೆತ್ ಎಂದರೆ ಬ್ರೈನ್ ಡೆತ್ ಆದ ಕೂಡಲೇ ತಕ್ಷಣ ಅದನ್ನು ತೆಗೆದು ಇನ್ನೊಬ್ಬರಿಗೆ ಟ್ರಾನ್ಸ್‌ಪ್ಲಾಂಟ್ ಮಾಡುವ ವ್ಯವಸ್ಥೆ ಇದೆ. ಈಗ ನಮ್ಮ ದೇಶದಲ್ಲಿ ಯಾರಾದರೂ ವೈದ್ಯರು ಕಿಡ್ನಿ ತೆಗೆದುಕೊಂಡು ಸ್ಟಾಕ್ ಮಾಡಿಟ್ಟುಕೊಂಡು ಇನ್ನೊಬ್ಬನಿಗೆ ಮಾರುತ್ತಾರೆ ಎಂಬ ಇಂಪ್ರೆಷನ್ ಇದ್ದರೆ ಅದು ತಪ್ಪು. ಇತ್ತೀಚೆಗೆ ಇದು ಏತಕ್ಕೆ ಜಾಸ್ತಿ ಆಯಿತು ಅಂದರೆ ಡೆಲ್ಲಿಯಲ್ಲಿ ಕೇಂದ್ರಸರ್ಕಾರದಿಂದ ಟ್ರಾನ್ಸ್‌ಪ್ಲಾಂಟ್ ಬಗ್ಗೆ ಮಾಡಿದ ಆ್ಯಕ್ಟ್ ಏನಿದೆ, ಅದನ್ನು ನಾವು ಮೊನ್ನೆ ಅನುಮೋದಿಸಿದ್ದೇವೆ. ತಮಿಳುನಾಡು ಮಹಾರಾಷ್ಟ್ರ ಸರ್ಕಾರಗಳು ಮೊದಲೇ ಇದನ್ನು ಅನುಮೋದಿಸಿದ್ದವು. ಹಾಗಾಗಿ ತಮಿಳುನಾಡು ಮತ್ತು ಮಹಾರಾಷ್ಟ್ರದಲ್ಲಿ ಇದನ್ನು ಮಾರಾಟಮಾಡತಕ್ಕದ್ದು ನಿಂತುಹೋಗಿತ್ತು. ಈವತ್ತು ಬ್ಲಡ್ ಬ್ಯಾಂಕ್‌ಗೆ ಹೋಗಿ ಬ್ಲಡ್ ಕೊಡುತ್ತೇನೆಂದು ಹೇಳಿ ತಮ್ಮ ಹೆಸರು ರಿಜಿಸ್ಟರ್ ಮಾಡಿಸಿಕೊಂಡು ಬಂದಿರುತ್ತಾರೆ. ಅವರಿಂದ ಬ್ಲಡ್ ತೆಗೆದುಕೊಂಡು 50 ರೂಪಾಯಿ ಕೊಡುತ್ತಾರೆ, ಹಾಗೆಯೇ ತಮಿಳುನಾಡಿನಿಂದ ಜನ ಬಂದು ಕರ್ನಾಟಕದಲ್ಲಿ ಹೆಸರು ರಿಜಿಸ್ಟರ್ ಮಾಡಿಸುವ ಬಗ್ಗೆ ಪ್ರಾರಂಭ ಮಾಡಿದರು. ಇಲ್ಲಿ ಅವರ ರಷ್ ಜಾಸ್ತಿ ಆಯಿತು. ಕೊನೆಗೆ ಯಾರಿಗೂ ಸಿಗಲಿಲ್ಲ. ಆದುದು ಸುಳ್ಳು ಎಂದು ಹೇಳುತ್ತಿಲ್ಲ. ಆದರೆ ಈ ರೀತಿ ಎಕ್ಸಾಗರೇಷನ್ ಮಾಡುವುದು ಸರಿಯಲ್ಲ. ಈರೀತಿ ಅವರು ಆ ಪೇಷೆಂಟ್ ಹೆಸರು ಗುರುತು ಮಾಡಿಕೊಂಡು ಆ ಡೋನರ್ ಇರುವ ಸಮಯದ ಈ ಕಿಡ್ನಿ ಯಾರದ್ದು ಫೈಲ್ ಆಗಿ ಅವನನ್ನು ಇರಿಸಿಕೊಂಡಿದ್ದರು, ಅವನಿಗೆ ಇಲ್ಲಿಗೆ ಟ್ರಾನ್ಸ್‌ಪ್ಲಾಟ್ ಮಾಡುವುದಕ್ಕೆ ಆಗುತ್ತದೆಯೇ ಹೊರತು, ಸ್ಟಾಕ್ ಮಾಡಿ ಇಟ್ಟುಕೊಂಡು ಟ್ರಾನ್ಸ್ ಪ್ಲಾಂಟ್ ಮಾಡುವುದಕ್ಕೆ ಆಗುವುದಿಲ್ಲ. ಇಷ್ಟೆಲ್ಲಾ ಘಟನೆ ಆದಮೇಲೆ ಮೊನ್ನೆ ಸಚಿವರು ಕೇವಲ ಐದು ಕೇಸುಗಳನ್ನು ದಾಖಲು ಮಾಡಿದ್ದೇವೆ ಎಂದು ಉತ್ತರ ಕೊಟ್ಟರು ಇವತ್ತು ಬ್ಲಾಕ್‌ಮೈಲ್ ಮಾಡುವುದಕ್ಕೆ ಅನೇಕರು ಹೊರಟಿದ್ದಾರೆ. ವೈದ್ಯರು ಎಲ್ಲರೂ ಒಳ್ಳೆಯವರೆಂದು ಹೇಳುತ್ತಿಲ್ಲ. ಅವರಲ್ಲಿ ಸಾಕಷ್ಟು ಜನ ಕೆಟ್ಟವರಿದ್ದಾರೆ. ಇವತ್ತಿನ ದಿವಸ ನಮ್ಮ ಅನೇಕ ಹಳ್ಳಿಗಳಲ್ಲಿ ಅವಶ್ಯಕವಾಗಿ ಬೇಕಾದ ಆರ್ಡಿನರಿ ಗ್ಲೂಕೋಸ್ ಇಲ್ಲದೆ ಒಂದೊಂದು ಹಳ್ಳಿಯಲ್ಲಿ ಒಬ್ಬೊಬ್ಬರೂ ಸಾಯುತ್ತಿದ್ದಾರೆ. ಅದರ ಬಗ್ಗೆ ಸರ್ಕಾರ ವಿಶೇಷ ಲಕ್ಷ್ಯ ಹರಿಸಬೇಕು. ಅದರ ಬಗ್ಗೆ ಸರ್ಕಾರ ಲಕ್ಷ್ಯ ಹರಿಸಿ ಕೇಂದ್ರದ ಶಾಸನವನ್ನು ಅನುಮೋದಿಸಿದೆ. ಸರಿಯಾದ ಕ್ರಮವನ್ನು ಸರ್ಕಾರ ಮಾಡಿದೆ. ಹಾಗಾಗಿ

ಲೈನ್ ಅನರಿಲೇಟೆಡ್ ಟ್ರಾನ್ಸ್‌ಪ್ಲಾಂಟ್ ಏನು ಇದೆ ಅದರ ಮೇಲೆ ಚೆಕ್ ಮಾಡುವುದಕ್ಕೆ ಆಯಿತು. ಚೆಕ್ ಮಾಡುವುದು ಬಹಳ ಒಳ್ಳೆಯ ಕೆಲಸವಾಗಿದೆ, ಇದರ ಬಗ್ಗೆ ಸರ್ಕಾರಕ್ಕೆ ನಾನು ಒಂದು ಸಲಹೆ ಕೊಡುವುದಕ್ಕೆ ಇಷ್ಟಪಡುತ್ತೇನೆ. ನರ್ಸಿಂಗ್ ಹೋಂ ಕಾಯಿದೆಯನ್ನು ಸರ್ಕಾರ ಪುನರ್‌ಪರಿಶೀಲನೆ ಮಾಡುವುದಾಗಿ ರಾಜ್ಯ ಪಾಲರ ಭಾಷಣದಲ್ಲಿ ಹೇಳಿದ್ದಾರೆ. ಆ ಸಂದರ್ಭದಲ್ಲಿ ಇದರ ಬಗ್ಗೆ ವ್ಯಾಪಕವಾಗಿ ಚರ್ಚೆ ಆಗಬೇಕು ಅಡ್‌ಮಿನಿಸ್ಟ್ರೇಟರ್ ಮತ್ತು ಆ ಸಂದರ್ಭದಲ್ಲಿ ಇದರ ಬಗ್ಗೆ ನನಗೆ ಗೌರವ ಇದೆ. ಇದರ ಬಗ್ಗೆ ಸಾಕಷ್ಟು ನುರಿತ ತಜ್ಞರಿಂದ ಮಾಹಿತಿ ಪಡೆದು ಖಾಸಗಿ ಆಸ್ಪತ್ರೆಗಳಲ್ಲಿ ಪ್ರೈವೇಟ್ ಪೇಷೆಂಟುಗಳಿಗೆ ಪುಕ್ಕಟೆ ಔಷಧಿ ಕೊಡಬೇಕು. ವೈದ್ಯರ ಕೆಲಸ ಏನು? ವೈದ್ಯರು ಮನಸ್ಸು ಮಾಡದೆ ರೋಗಿಗೆ ಟ್ರೀಟ್‌ಮೆಂಟ್ ಮಾಡುವುದಕ್ಕೆ ಆಗುವುದಿಲ್ಲವೆಂದು ಹೇಳಿ ಈ ಸಂದರ್ಭದಲ್ಲಿ ನನಗೆ ಇಷ್ಟು ಹೇಳಲಿಕ್ಕೆ ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಜೆ.ಹೆಚ್.ಪಾಟೇಲ್ : ಅವರ ಸಲಹೆ ಬಹಳ ಉಪಯುಕ್ತವಾಗಿದೆ. ನಾನು ಡಾಕ್ಟರ್ ಅಲ್ಲದಿದ್ದರೂ ಕೆಲವು ವಿಷಯಗಳನ್ನು ಕೇಳಿ ತಿಳಿದುಕೊಂಡಿದ್ದೆ. ಹೀಗೆ ಕಿಡ್ನಿಯನ್ನು ಕಳ್ಳತನ ಮಾಡುವುದಕ್ಕೆ ಬರುವುದಿಲ್ಲ ಎಂದು. ಆ ಮೇಲೆ ಡಾಕ್ಟರುಗಳು ಹೇಳಿದರು. ಇದು ಎಲ್ಲಿ ಹುಟ್ಟಿದೆ ಎಂದರೆ ನಡುವೆ ಮಧ್ಯಸ್ಥಿಕೆದಾರರು ಯಾರದೋ ಕಿಡ್ನಿ, ಅವನ ಬ್ಲಡ್‌ಗ್ರೂಪ್ ತಿಳಿದುಕೊಳ್ಳುವುದು ಅವನು ತಮಿಳುನಾಡಿನವನು. ಇಲ್ಲಿಗೆ ಬಂದು ಅವನು ಯಾರಿಗೆ ಟ್ರಾನ್ಸ್‌ಪ್ಲಾಂಟ್ ಆಗಿದೆ ಎಂಬುದು ಗೊತ್ತಿಲ್ಲದೆ ಹಾಗೆಯೇ ಆಗಿರುತ್ತದೆ ಅದು ಈ ರೀತಿ ನರ್ಸಿಂಗ್ ಹೋಂಗಳಲ್ಲಿ ವ್ಯಾಪಾರ ಮಾಡಿಕೊಂಡು ಮಧ್ಯವರ್ತಿಗಳು ದುಡ್ಡು ಹೊಡೆದು ಕಿಡ್ನಿ ಹೋಗಿರುವುದು ನಿಜ. ಈ ಸಂದರ್ಭದಲ್ಲಿ ಮಾನ್ಯ ಸದಸ್ಯರು ಕೊಟ್ಟ ಸಲಹೆ ಬಹಳ ಉತ್ತಮವಾಗಿದೆ.

ಡಾ.ಮಹೇಶ್ ಚಂದ್ರ : ಸಾಮಾನ್ಯ ಜನರಲ್ಲಿ ಏನು ಭಾವನೆ ಇದೆ ಎಂದರೆ ಕಿಡ್ನಿಗಳ ಬಗ್ಗೆ ಅಂದರೆ ಕಿಡ್ನಿಗಳ ಟೆಸ್ಟೀಸ್ ಎಂದು ಭಾವಿಸಿ ಕೊಂಡಿರುತ್ತಾರೆ. ಅದನ್ನು ತೆಗೆದು ಬೇರೆ ಸೀಸೆಯಲ್ಲಿ ಹಾಕಿ ಬೇರೆ ದೇಶಕ್ಕೆ ರವಾನೆ ಮಾಡುತ್ತಾರೆ ಎಂಬ ಭಾವನೆ ಇದೆ. ಕಿಡ್ನಿ ಟ್ರಾನ್ಸ್‌ಪ್ಲಾಂಟ್ ಮಾಡುತ್ತಾರೆ ಎಂದರೆ ಇವತ್ತು ಮುಟ್ಟಿಕೊಂಡು ನೋಡತಕ್ಕ ಪರಿಸ್ಥಿತಿ ಇದೆ. ಮಾನ್ಯ ಸದಸ್ಯರಾದ ಡಾಕ್ಟರು ಏನು ಹೇಳಿದ್ದಾರೆ ಆ ರೀತಿ ತೆಗೆದುಕೊಳ್ಳುವವರು ಕೊಡುವವರು ಜೊತೆಗೆ ಇದ್ದಾಗ ಮಾತ್ರ ಟ್ರಾನ್ಸ್‌ಪ್ಲಾಂಟ್ ಮಾಡುವುದಕ್ಕೆ ಸಾಧ್ಯ. ಅದನ್ನು ಹಾಗೆ ಸ್ಟೋರ್ ಮಾಡಿಟ್ಟುಕೊಂಡು ಬೇರೆಯವರಿಗೆ ಕೊಡುವುದಕ್ಕೆ ಆಗುವುದಿಲ್ಲ. ಸಾಮಾನ್ಯ ಜನರಲ್ಲಿ ಇವತ್ತು ಕಿಡ್ನಿಯೆಂದರೆ ಟೆಸ್ಟೀಸ್ ಎಂಬ ಭಾವನೆ ಇದೆ. ಆದರೆ ಅದು ಅಲ್ಲವೆಂದು ಹೇಳುತ್ತೇನೆ.

ಶ್ರೀ ಜಿ.ಬಿ.ಶಿವಕುಮಾರ್ : ತಾವು ಅವಕಾಶ ಮಾಡಿಕೊಟ್ಟು ಕೆಲವಂ ಬಲ್ಲವರಿಂದ ಕಲಿತು ವಿಚಾರಗಳನ್ನು ತಿಳಿದುಕೊಳ್ಳುವುದಕ್ಕೆ ಅವಕಾಶವಾಯಿತು. ನಿಜವಾಗಿ ನಾನು ಅವರಿಗೆ ಗೌರವದಿಂದ ಅಭಿನಂದಿಸುತ್ತೇನೆ. ಪ್ರಾಯಶಃ ಈ ರೀತಿ ಚರ್ಚೆ ಬಂದು ತಪ್ಪು ಕಲ್ಪನೆ ದೂರವಾದರೆ ತಮ್ಮ ಜೀವನವನ್ನು ಮುಂದುವರಿಸಿಕೊಂಡು ಹೋಗುವವರಿಗೆ ದಾರಿ ಆಗುತ್ತದೆ. ಇವತ್ತು ಆ ದಿಸೆಯಲ್ಲಿ ಡಾಕ್ಟರ್‌ಗಳು ಬೆಳಕು ಚಲ್ಲಿದ್ದಾರೆ. ಅದಕ್ಕಾಗಿ ನಾನು ಅವರಿಗೆ ಮತ್ತೊಮ್ಮೆ ಅಭಿನಂದಿಸುತ್ತೇನೆ.

ಶ್ರೀ ಎಲ್.ಆರ್. ಶಿವರಾಮೇಗೌಡ : ಕಿಡ್ನಿ ತೆಗೆದುಕೊಂಡು ಮಾರಾಟ ಮಾಡಿದ್ದಾರೆ ಎಂಬುದು ನನ್ನ ವಾದ ಅಲ್ಲ. ಕಳೆದ ಒಂದೂವರೆ ವರ್ಷದ ಹಿಂದೆ ಶ್ರೀ ರಾಮಲಿಂಗಾರೆಡ್ಡಿಯವರು ಮತ್ತು ನಾನು ಅವರ ಛೇಂಬರಿನಲ್ಲಿ ಕುಳಿತಿದ್ದೆವು. ಆ ಸಂದರ್ಭದಲ್ಲಿ ನನ್ನ ಕ್ಷೇತ್ರದ ಒಬ್ಬ ಹೆಣ್ಣು ಮಗಳು ಬಂದು ನನ್ನ ಗಂಡನ ಹಾರ್ಟ್ ಆಪರೇಷನ್‌ಗೆ ದುಡ್ಡು ಇಲ್ಲದೆ ಇದ್ದಾಗ ನಮ್ಮ ಕಿಡ್ನಿ ತೆಗೆದುಕೊಂಡು ದುಡ್ಡು ಕೊಡುತ್ತಾರೆಂದು ಎಲ್ಲಮ್ಮ ದಾಸಪ್ಪ ಆಸ್ಪತ್ರೆಯಲ್ಲಿ ರೈಟಿಂಗ್‌ನಲ್ಲಿ ಬರಸಿಕೊಂಡು 30,000 ರೂಪಾಯಿ ಕೊಡುತ್ತೇವೆಂದು ಹೇಳಿ ಕೇವಲ 5000 ರೂಪಾಯಿ ಕೊಟ್ಟು ಓಡಿಸಿಬಿಟ್ಟಿದ್ದಾರೆ. ಆಕೆ ಆ ಮೇಲೆ ಹುಡುಕಿಕೊಂಡು ಬಂದು ಡಾಕ್ಟರ್ ನನಗೆ ಮೋಸ ಮಾಡಿದ್ದಾರೆಂದು ಹೇಳಿದ್ದಕ್ಕೆ ನಾನು ಮತ್ತು ರಾಮಲಿಂಗ ರೆಡ್ಡಿಯವರು ಸೇರಿಕೊಂಡು ಡಾಕ್ಟರನ್ನು ಕರೆಸಿ ಹೇಳುವ ಹೊತ್ತಿಗೆ 15000 ರೂಪಾಯಿ ತಂದು ಇದೇ ವಿಧಾನಸೌಧದಲ್ಲಿ ಕೊಡಿಸಿದ್ದೇನೆ. ನಾನು ಹೇಳುತ್ತಿರುವುದು, ಈ ಒಂದು ದಂಧೆ ಪ್ರಾರಂಭವಾದದ್ದು ಕಿಡ್ನಿಯನ್ನು ಒಬ್ಬರಿಂದ ತೆಗೆದು ಮತ್ತೊಬ್ಬರಿಗೆ ಜೋಡಿಸುವುದರಲ್ಲಿ ದಂದೆ ಪ್ರಾರಂಭ ಮಾಡಿ ಬ್ಲಾಕ್‌ಮೈಲ್ ಮಾಡಿದ್ದಾರೆ, ಕೆಲವರಿಗೆ ಮೋಸ ಮಾಡಿದ್ದಾರೆ. ಈ ಮೋಸದ ಹಿಂದೆ ತೆಗೆದಿರುವವರನ್ನು ಹಿಡಿದಿದ್ದಾರೆಯೇ ಹೊರತು ಜೋಡಿಸುವುದಕ್ಕೆ ಪ್ರಯತ್ನ ಪಟ್ಟವರನ್ನು ಹಿಡಿದಿಲ್ಲ. ಇವತ್ತು ವೈದ್ಯರುಗಳಲ್ಲಿ ಸಂಶಯ ಬರುತ್ತದೆ. ಇವತ್ತು ಎಲ್ಲಾ ವೈದ್ಯರು ಮಾತನಾಡುತ್ತಾರೆ ಇವತ್ತು ನೀವು ಏನು ಕ್ರಮ ತೆಗೆದುಕೊಂಡಿದ್ದೀರಿ ಅವರು ಇನ್ನೋಸೆಂಟ್ ಎಂದು ಎಲ್ಲರೂ ಹೇಳುತ್ತಾರೆ. ಆದರೆ ಯಾರು ಕ್ರಿಮಿನಲ್ ಇದ್ದಾನೆ ಅವನ ಮೇಲೆ ನೀವು ಕ್ರಮ ತೆಗೆದುಕೊಂಡಿಲ್ಲವೆಂದು ಜನರು ಮಾತನಾಡುತ್ತಾರೆ. ಇವತ್ತು ವೈದ್ಯರು ಮಾತನಾಡುತ್ತಾರೆ. ಯಾರು ಮಹಾರಾಷ್ಟ್ರದ ವ್ಯಕ್ತಿ ಬೆಂಗಳೂರಿನಲ್ಲಿ ಕುಳಿತು ಈ ದಂಧೆ ಶುರುಮಾಡುವ ಅವನನ್ನು ಮಹಾರಾಷ್ಟ್ರ ಮೆಡಿಕಲ್ ಕೌನ್ಸಿಲ್‌ನಲ್ಲಿ ಅವರ ಮೆಂಬರ್‌ಶಿಪ್‌ನ್ನು ರದ್ದು ಮಾಡುತ್ತಾರೆ. ಆದರೆ ಬೆಂಗಳೂರು ಮೆಡಿಕಲ್ ಕೌನ್ಸಿಲ್‌ನಲ್ಲಿ ನೀವು ಅವನ ಮೆಂಬರ್‌ಶಿಪ್‌ನ್ನು ರದ್ದು ಮಾಡತಕ್ಕ ಕೆಲಸ ಮಾಡಲಿಲ್ಲ. ಅವರ ಬಗ್ಗೆ ನಿಗಾವಹಿಸಿ ಇನ್ನೂ ಯಾರು ಯಾರು ಇದ್ದಾರೆ ಈ ಜಾಲದ ಹಿಂದೆ ಎಂಬುದನ್ನು ಸಂಪೂರ್ಣವಾಗಿ ತನಿಖೆ ಮಾಡಿ ಅವರನ್ನು ಶಿಕ್ಷೆಗೆ ಒಳಪಡಿಸಬೇಕೆಂಬುದು ಬಿಟ್ಟರೆ ಈ ಕಿಡ್ನಿ ತೆಗೆದುಕೊಂಡು ಎಲ್ಲೋ ಮಾರಾಟ ಮಾಡುತ್ತಾರೆ ಎಂಬುದು ನನಗೆ ಗೊತ್ತಿಲ್ಲ. ನನಗೆ ಗೊತ್ತಿರತಕ್ಕ ವಿಚಾರವನ್ನು ಸಂಕ್ಷಿಪ್ತವಾಗಿ ಹೇಳಿದ್ದೇನೆ. ಇವತ್ತು ಎಜ್ಯುಕೇಷನ್ ಬಗ್ಗೆ ಮಾನ್ಯ ನಂಜೇಗೌಡರು ಬಹಳ ಚೆನ್ನಾಗಿ ಹೇಳಿದರು. ನನ್ನ ತಾಲ್ಲೂಕಿನಲ್ಲಿ ಬೋಗಾದಿ ಎಂಬ ಗ್ರಾಮ ಇದೆ. ಆ ಬೋಗಾಧಿಯಲ್ಲಿ ಇವತ್ತು ಒಂದು ಜೂನಿಯರ್ ಕಾಲೇಜು ಇದೆ. ಅಲ್ಲಿ ಕಳೆದ ನಾಲ್ಕು ವರ್ಷಗಳಿಂದ ಕೆಮಿಸ್ಟ್ರಿ ಲೆಕ್ಚರರ್ ಪೋಸ್ಟ್‌ಗೆ ಯಾರೊಬ್ಬರೂ ಕೂಡ ಹೋಗಲಿಲ್ಲ. ನಾಗಮಂಗಲ ತಾಲ್ಲೂಕು ತಮಗೆ ಗೊತ್ತಿದೆ. ಅದು ಬಹಳ ಬೆಂಗಾಡು. ಅಲ್ಲಿ ಒಬ್ಬ ಎಕನಾಮಿಕ್ಸ್ ಲೆಕ್ಚರರ್ ಮೂರು ವರ್ಷದಿಂದ ಇಲ್ಲ. ನಾನು ಎಷ್ಟು

ಕಾಗದ ಕೊಟ್ಟರೂ ಹಾಕುವುದಕ್ಕೆ ಆಗಲಿಲ್ಲ. ಬೆಳ್ಳೂರು ಜೂನಿಯರ್ ಕಾಲೇಜಿನಲ್ಲಿ ಒಬ್ಬ ಇಂಗ್ಲೀಷ್ ಲೆಕ್ಚರನ್ನು ಹಾಕಿಸುವುದಕ್ಕೆ ಆಗಲಿಲ್ಲ. ಇವತ್ತು ಬಹಳ ಕಷ್ಟದಿಂದ ಓದುತ್ತಿರತಕ್ಕ ಬಡ ಬೋರೇಗೌಡರ ಮಕ್ಕಳು ಬೆಂಗಳೂರಿನಲ್ಲಿ ಇರತಕ್ಕ ಬಿಷಪ್‌ಕಾಟನ್ ಆಗಲಿ ಬೆಂಗಳೂರಿನಲ್ಲಿರತಕ್ಕ ಸೋಫಿಯ ಆಗಲಿ ಬೆಂಗಳೂರಿನಲ್ಲಿ ಇರತಕ್ಕ ಪೂರ್ಣಪ್ರಜ್ಞ ಆಗಲಿ ಎಲ್ಲಾ ವ್ಯವಸ್ಥೆಯನ್ನೊಳಗೊಂಡಿರತಕ್ಕ ಈ ನಗರದ ಶಾಲೆಗಳಲ್ಲಿ ಓದಿದ ಮಕ್ಕಳ ಜೊತೆ ಪೈಪೋಟಿ ಮಾಡಬೇಕಾದರೆ ಬಹಳ ಕಷ್ಟ ಇದೆ. ಮಾನ್ಯ ನಂಜೇಗೌಡರು ಏನು ಹೇಳಿದರು ಅದಕ್ಕೆ ನಾನೂ ಸಹ ಅವರ ಮಾತನ್ನು ಬೆಂಗಲಿಸುತ್ತೇನೆ. ಮಾನ್ಯ ಸಭಾನಾಯಕರಾದ ಮುಖ್ಯಮಂತ್ರಿಗಳು ಸಹ ಒಂದು ಹೊಸ ಬಿಲ್ ತರುತ್ತೇವೆ ಎಂದು ಹೇಳಿರತಕ್ಕಂತಹ ಮಾತನ್ನು ನಾನು ಈ ಸಂದರ್ಭದಲ್ಲಿ ಸ್ವಾಗತಿಸಿ ಬಂದ ಬೋರೇಗೌಡರ ಮಕ್ಕಳು, ಗ್ರಾಮಾಂತರ ಪ್ರದೇಶದ ಮಕ್ಕಳು ಶ್ರೀಮಂತ ವರ್ಗದ ಮಕ್ಕಳ ಜೊತೆ ನಗರದಲ್ಲಿ ವಿದ್ಯಾಭ್ಯಾಸ ಮಾಡಿದ ಮಕ್ಕಳ ಜೊತೆಯಲ್ಲಿ ಪೈಪೋಟಿ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಹೇಳುತ್ತೇನೆ.ಇನ್ನು ಎರಡು ವಿಚಾರ ಇದೆ. ಎರಡೇ ವಿಚಾರ. ನನ್ನ ಸಮಯವೆಲ್ಲಾ ಅವರು ತೆಗೆದುಕೊಂಡು ಬಿಟ್ಟಿದ್ದಾರೆ.

ಅಧ್ಯಕ್ಷರು : ಮತ್ತೆ ಮುಂದಕ್ಕೆ ಎಷ್ಟು ಅವಕಾಶಗಳಿವೆ. ನೀವು ಮಾತನಾಡದೇ ಹೋದರೆ ಇನ್ನು ಯಾರು ಮಾತನಾಡುತ್ತಾರೆ.

ಶ್ರೀ ಎಲ್.ಆರ್.ಶಿವರಾಮೇಗೌಡ : ಮಾತನಾಡುವುದಕ್ಕೆ ತಾವು ಕರೆದಿರಿ. ಆದರೆ ನನಗೆ ಗಂಟಲು ಚೆನ್ನಾಗಿರಲಿಲ್ಲ.

ಅಧ್ಯಕ್ಷರು : ನನಗೇನೂ ಇಲ್ಲ. ನಿಮಗೆ ಮೊದಲೇ ಗಂಟಲು ತೊಂದರೆ ಯಾಗಿದೆ.

ಶ್ರೀ ಎಲ್.ಆರ್.ಶಿವರಾಮೇಗೌಡ : ಇಲ್ಲ, ಇಲ್ಲ. ಇನ್ನು 5 ನಿಮಿಷದಲ್ಲಿ ಮುಗಿಸುತ್ತೇನೆ.

ಅಧ್ಯಕ್ಷರು : ನಿಮ್ಮ ಆರೋಗ್ಯದ ದೃಷ್ಟಿಯಿಂದ ಹೇಳುತ್ತಿದ್ದೇನೆ.

ಶ್ರೀ ಎಲ್.ಆರ್.ಶಿವರಾಮೇಗೌಡ : ನನಗೆ ಆಗುತ್ತಿಲ್ಲ.

ಅಧ್ಯಕ್ಷರು : ಅದಕ್ಕೇ ಪ್ರಯಾಸ ಪಟ್ಟುಕೊಂಡು ಏತಕ್ಕೆ ಮಾತನಾಡುತ್ತೀರಿ?

ಶ್ರೀ ಎಲ್.ಆರ್.ಶಿವರಾಮೇಗೌಡ : ಎರಡು ವಿಚಾರದಲ್ಲಿ ಮಾತ್ರ ಮಾತನಾಡುತ್ತೇನೆ. ಮಾನ್ಯ ಅಬ್ಕಾರಿ ಸಚಿವರು ಇಲ್ಲೇ ಇದ್ದಾರೆ ಸ್ವಾಮಿ.

ಶ್ರೀ ವಾಟಾಳ್ ನಾಗರಾಜ್ : ಒಂದು ನಿಮಿಷ ದಯವಿಟ್ಟು. ಮಾನ್ಯ ಅಧ್ಯಕ್ಷರು ಎಷ್ಟು ಪ್ರೀತಿಯಿಂದ ನಿಮ್ಮ ಆರೋಗ್ಯದ ಬಗ್ಗೆ ಮಾತನಾಡಿದ್ದಾರೆ. ಆದ್ದರಿಂದ ಮುಂದಕ್ಕೆ ಮಾತನಾಡಬಾರದು.

ಶ್ರೀ ಎಲ್.ಆರ್.ಶಿವರಾಮೇಗೌಡ : ಸನ್ಮಾನ್ಯ ಸಭಾಧ್ಯಕ್ಷರೇ, ವೀರೇಂದ್ರಪಾಟೀಲರ ಸರ್ಕಾರದಲ್ಲಿ ರಾಜಶೇಖರ ಮೂರ್ತಿಯವರನ್ನು ಅಬ್ಕಾರಿ

ಸಚಿವರನ್ನಾಗಿ ಮಾಡಿದ್ದರು. ಬಂಗಾರಪ್ಪನವರ ಕಾಲದಲ್ಲಿ ಶಿವಮೂರ್ತಿ ಮತ್ತು ಧರ್ಮಸಿಂಗ್ ಅವರನ್ನು ಅಬ್ಕಾರಿ ಸಚಿವರನ್ನಾಗಿ ಮಾಡಿದ್ದರು. ಮೊಯಿಲಿಯವರ ಸರ್ಕಾರದಲ್ಲಿ ನಮ್ಮ ಪಕ್ಕದಲ್ಲೇ ಕುಳಿತುಕೊಳ್ಳತಕ್ಕ ರಮಾನಾಥ ರೈ ಅವರನ್ನು ಅಬ್ಕಾರಿ ಸಚಿವರನ್ನಾಗಿ ಮಾಡಿದ್ದರು. ನಮ್ಮ ದೇವೇಗೌಡರ ಕಾಲದಲ್ಲಿ ತಿಪ್ಪೇಸ್ವಾಮಿಯವರನ್ನು ಅಬ್ಕಾರಿ ಸಚಿವರನ್ನಾಗಿ ಮಾಡಿದ್ದಾರೆ ಸ್ವಾಮಿ. ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಒಂದು ವಿನಂತಿ ಮಾಡುತ್ತೇನೆ. ನಾನು ಬೇರೆ ಇಲಾಖೆ ಗೋಜಿಗೆ ಹೋಗುವುದಿಲ್ಲ. ಈ ಒಂದು ಇಲಾಖೆ ರಾಜ್ಯದಲ್ಲಿ ಎರಡನೇ ವರಮಾನ ಕೊಡತಕ್ಕ ಇಲಾಖೆ. ಸುಮಾರು 700 ಕೋಟಿ ರೂಪಾಯಿ ವರಮಾನ ಕೊಡತಕ್ಕ ಇಲಾಖೆ. ಈ ಇಲಾಖೆಗೆ ಕಾಯಕಲ್ಪ ಆಗಬೇಕು. ಅಷ್ಟೊಂದು ರೆವಿನ್ಯೂ ಕೊಡತಕ್ಕ ಇಲಾಖೆಗೆ ಸಹಕಾರವನ್ನು ಕೊಡತಕ್ಕ ವ್ಯವಸ್ಥೆ ಈ ಸರ್ಕಾರದಲ್ಲಿ ಆಗಬೇಕು. ನಾನು ಕೇಳುತ್ತೇನೆ ಸ್ವಾಮಿ ಎಲ್ಲಾ ಮುಖ್ಯಮಂತ್ರಿಗಳೂ ಸಹ ವಿಸ್ಕಿ ರುಚಿ ನೋಡದಿರುವಂಥವರನ್ನು ಮಂತ್ರಿಯನ್ನಾಗಿ ಮಾಡುತ್ತಾರೆ. ನಾನು ತಿಪ್ಪೇಸ್ವಾಮಿಯವರನ್ನು ಕೇಳಿದೆ. ತಿಪ್ಪೇಸ್ವಾಮಿಯವರೇ ನಿಮಗೇನಾದರೂ ವಿಸ್ಕಿರುಚಿ ಗೊತ್ತೇ ಎಂದು. ನನಗೆ ಗೊತ್ತಿಲ್ಲ ಎಂದು ಹೇಳಿದರು. ಹಾಗೇ ರಾಜಶೇಖರ ಮೂರ್ತಿಯವರಿಗೂ ಗೊತ್ತಿಲ್ಲ. ಹಿಂದೆ ರಾಜಶೇಖರ ಮೂರ್ತಿಯವರು ಮಂತ್ರಿಗಳಾಗಿದ್ದಾಗ ಉನ್ನತ ದರ್ಜೆ ಹೋಟೆಲ್‌ಗಳಿಗೆಲ್ಲಾ 50 ಪರ್ಸೆಂಟ್ ಟ್ಯಾಕ್ಸ್ ಹಾಕಿದರು. ಯಾರು ಹೋಗಿ ವಿಸ್ಕಿ ಕುಡಿದರೂ ಜೇಬಲ್ಲಿ ದುಡ್ಡು ನೋಡಿಕೊಂಡು ಕುಡಿಯುವಂಥ ಪರಿಸ್ಥಿತಿ ಬಂದು ಹೋಯಿತು. ಕುಡಿಯುವುದು ಕಲಿತಿದ್ದರೆ ಅದರ ಯೋಗ್ಯತೆ ಏನು ಎಂದು ಗೊತ್ತಿರುತ್ತದೆ. ಆದ್ದರಿಂದ ಕುಡಿಯುವುದನ್ನು ಕಲಿತುಕೊಳ್ಳಬೇಕು. ಕುಡಿಯುವುದಕ್ಕೆ ಪ್ರಾರಂಭ ಮಾಡಲಿ. ಇಲ್ಲದೇ ಹೋದರೆ ಈ ಒಂದು ಇಲಾಖೆಯನ್ನು ಕಾಯಕಲ್ಪ ಮಾಡುವುದು ಬಹಳ ಕಷ್ಟವಾಗುತ್ತದೆ ಸ್ವಾಮಿ. ನಾನು ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಈ ಒಂದು ಇಲಾಖೆಯಲ್ಲಿ ರೂಲ್5ನ್ನು ತಂದಿದ್ದಾರೆ. ಈ ಒಂದು ಕರಾಳ ಶಾಸನ ಅಬ್ಕಾರಿ ಇಲಾಖೆಯಲ್ಲಿ ಸಾವಿರಾರು ಜನರನ್ನು ಬೀದಿಪಾಲು ಮಾಡಿದೆ ಸ್ವಾಮಿ. ಇವತ್ತು ಇಡೀ ರಾಜ್ಯದಲ್ಲಿ 10500 ಅರ್‍ರ್ಯಾಕ್ ಷಾಪ್‌ಗಳಿವೆ. ಸಿ.ಎಲ್.1 ಹೋಲ್‌ಸೇಲ್ 380 ಇವೆ. ಸಿಎಲ್ 2 ರೀಟೈಲ್ 3500 ಇವೆ ಸ್ವಾಮಿ. ಇಷ್ಟೆಲ್ಲಾ ಇದ್ದರೂ ಸಹ ಒಂದು ಪರ್ಸೆಂಟ್ ಕಂಪ್ಲೇಂಟ್ ಇರತಕ್ಕದ್ದು. ಕೇವಲ 1 ಪರ್ಸೆಂಟ್ ಕಂಪ್ಲೇಂಟ್ ಇಟ್ಟು ಕೊಂಡು ರೂಲ್ಸ್‌ನ್ನು...

ಶ್ರೀ ಸಿ.ಎಂ.ಉದಾಸಿ : ಸನ್ಮಾನ್ಯ ಅಬ್ಕಾರಿ ಸಚಿವರು ರುಚಿ ನೋಡಿ ಅದರ ಬಗ್ಗೆ ತೀರ್ಮಾನ ಮಾಡಬೇಕು ಎಂದು ಮಾನ್ಯ ಸದಸ್ಯರು ಹೇಳಿದರು. ಹಾಗಾದರೆ ಪಾನ ಸಂಯಮ ಮಂಡಲಿ ಅಧ್ಯಕ್ಷರನ್ನಾಗಿ ಮಾಡಬೇಕಾದರೆ ಸಂಪೂರ್ಣವಾಗಿ ದಿನ ಬೆಳಗಾದರೆ ಕುಡಿಯುವವರನ್ನು ಮಾಡಿದರೆ ಚೆನ್ನಾಗಿರುತ್ತದಲ್ಲವೆ? ಹಾಗೆ ಮಾಡಿದರೆ ಕುಡಿಯುವುದರ ಬಗ್ಗೆ ಹೇಳುವುದಕ್ಕೆ ಅನುಕೂಲವಾಗುತ್ತಯೇ ಏನೋ ಅದರ ಬಗ್ಗೆ ಆಲೋಚನೆ ಮಾಡಿ.

ಶ್ರೀ ಎಲ್.ಆರ್.ಶಿವರಾಮೇಗೌಡ : ತಮ್ಮ ಮಾತು ನಾನು ಒಪ್ಪುತ್ತೇನೆ ಪಾನ ವಿರೋಧ ಮಾಡುವುದಕ್ಕೆ ವಾಟಾಳ್ ನಾಗರಾಜ್‌ರವರು ರೆಡಿ ಇದ್ದಾರೆ, ಮಾಡೋಣ. ಆದರೆ ಈ ಇಲಾಖೆ ರೆವಿನ್ಯೂ ತರತಕ್ಕ ಇಲಾಖೆ. ಆದುದರಿಂದ ಚೆನ್ನಾಗಿರುಚಿ ನೋಡುವವರನ್ನೇ ಮಾಡಬೇಕು. ಸ್ವಾಮಿ, ಒಂದು ಪರ್ಸೆಂಟ್ ಕಂಪ್ಲೇಂಟ್ ಇರತಕ್ಕದ್ದು ಇಲಾಖೆಯಲ್ಲಿ. ನೀವು ಇವತ್ತು ರೂಲ್ 5 ಮಾಡಿ ಅಧಿಕಾರಿಗಳು ಇವತ್ತು ಕಸ್ಟಮರ್‌ಗಳನ್ನು ಅಂಗಡಿ ಮಾಲೀಕರುಗಳನ್ನು ಬ್ಲಾಕ್‌ಮೇಲ್ ಮಾಡುತ್ತಿದ್ದಾರೆ. ಬ್ಲಾಕ್‌ಮೇಲ್ ಮಾಡಿ ಸುಮಾರು ಒಂದೂವರೆ ಸಾವಿರ ಅಂಗಡಿಗಳನ್ನು ಇವತ್ತು ಮುಟ್ಟುಗೋಲು ಮಾಡಿದ್ದಾರೆ. ಅಂಗಡಿಗಳನ್ನು ಇಟ್ಟುಕೊಂಡಿರುವವರು ಶ್ರೀಮಂತರಲ್ಲ. ಒಂದೊಂದು ಅಂಗಡಿ ಇಟ್ಟುಕೊಂಡು ಜೀವನ ಮಾಡುತ್ತಾ ಇದ್ದಂಥವರು. ಇಂಥದ್ದನ್ನು ಮುಟ್ಟುಗೋಲು ಹಾಕಿದ್ದಾರೆ ಅಂಥವರಿಗೆಲ್ಲಾ ಕಡಿವಾಣ ಹಾಕಬೇಕಾಗಿದೆ. ದಯಮಾಡಿ ಸದನದಲ್ಲಿ ಹೇಳಬೇಕು ರೂಲ್ಸ್ 5ನ್ನು ತಿದ್ದುಪಡಿ ಮಾಡುವುದಿಲ್ಲ ಎಂದು ಇವತ್ತು ಉದಾಹರಣೆಗೆ ರೂಲ್ಸ್ 5ರಲ್ಲಿ ಮುಜರಾಯಿ ದೇವಸ್ಥಾನದ ಹತ್ತಿರ ಇರತಕ್ಕದ್ದು ಎಂದು ಹೇಳಿದ್ದೀರಿ. ಮುಂಜರಾಯಿ ದೇವಸ್ಥಾನಕ್ಕೆ 50 ಮೀಟರ್ ಹತ್ತಿರ ಇರತಕ್ಕದ್ದು ಎಂದು ಹೇಳಿದೆ. ತಾವು ಆನಂದರಾವ್ ಸರ್ಕಲ್ ಹತ್ತಿರ ಹೋಗಬೇಕು. ಅದೇ ರಸ್ತೆಯಲ್ಲಿ ಅಣ್ಣಮ್ಮದೇವಿ ದೇವಸ್ಥಾನ ಇದೆ. ಅದು ಮುಜರಾಯಿಗೆ ಸೇರಿಲ್ಲ. ಎಷ್ಟು ಸಾವಿರ ಜನ ಸಾಯಂಕಾಲ ಅಲ್ಲಿ ಹೋಗುತ್ತಾರೆ ನೋಡಿ. ಹಾಗಾದರೆ ಅಣ್ಣಮ್ಮದೇವಿ ದೇವಸ್ಥಾನದ ಪಕ್ಕ ಯಾರು ಬೇಕಾದರೂ ಮಧ್ಯ ಕೊಡಬಹುದು ನಿಮ್ಮ ಕಾನೂನು ಪ್ರಕಾರ. ಆದ್ದರಿಂದ ರೂಲ್ಸ್ 5ನಲ್ಲಿ ಸಮಗ್ರವಾಗಿ ಎಲ್ಲಿ ಲೋಪದೋಷ ಇದೆ ಅದನ್ನು ಸರಿಪಡಿಸುತ್ತೇನೆ ಎನ್ನತಕ್ಕ ಮಾತನ್ನು ತಾವು ಹೇಳಬೇಕು. ನೀವು ಹೇಳುವುದಾದರೆ ಈಗಲೇ ಹೇಳಿ. ಹೇಳತಕ್ಕ ಎಲ್ಲ ಶಕ್ತಿ ಬರಬೇಕು ನಿಮಗೆ. ಇರತಕ್ಕ ಲೋಪದೋಷಗಳನ್ನು ತಿದ್ದತಕ್ಕ ಕೆಲಸ ಮಾಡಬೇಕು. ಇವತ್ತು ಹೋಲ್‌ಸೇಲ್‌ಗಳಿಗೆ ರೂಲ್ 5 ಆಡಾಪ್ಟ್ ಮಾಡುತ್ತೀರಿ. ಯಾವ ಕಾರಣಕ್ಕೋಸ್ಕರ ರೂಲ್ 5 ಅಡಾಪ್ಟ್ ಮಾಡುತ್ತೀರಿ ಎಂಬುದನ್ನು ಹೇಳಿ. ಇವತ್ತು ಹೋಲ್‌ಸೇಲ್‌ನಲ್ಲಿ ಕ್ಲೋಸ್ಡ್ ಡೋರ್‌ನಲ್ಲಿ ಬಿಸಿನೆಸ್ ಮಾಡತಕ್ಕದ್ದು. ಉದಾಹರಣೆಗೆ ಕೃಷ್ಣ ಹೋಲ್‌ಸೇಲ್ ಎಂದು ಬೆಂಗಳೂರಿನಲ್ಲಿ ಇದೆ. ಅಲ್ಲಿ ಕೆಲಸ ಮಾಡತಕ್ಕ ನೌಕರರು ನಾಗಮಂಗಲ ತಾಲ್ಲೂಕಿನವರು 25 ಜನ ಬೀದಿಪಾಲಾಗಿದ್ದಾರೆ. ಕೃಷ್ಣ ಹೋಲ್‌ಸೇಲ್ ಪ್ರಾರಂಭ ಆದಮೇಲೆ ಹೋಗಿ ಯಾರೋ ಒಬ್ಬ ಒಂದು ಸ್ಕೂಲ್ ಓಪನ್ ಮಾಡಿದ್ದಾನೆ ಅಲ್ಲಿ. ಇವತ್ತು ಇಂಥದ್ದಕ್ಕೆ ನಿಮ್ಮ ಅಧಿಕಾರಿಗಳು ಬ್ಲಾಕ್‌ಮೇಲ್ ಮಾಡಿ ಹೋಲ್‌ಸೇಲ್ ಷಾಪ್ ಮುಚ್ಚಿಕೊಂಡು ಬಂದಿದ್ದಾರೆ. ಕಳೆದ ಆರು ತಿಂಗಳಿಂದ ನಾಗಮಂಗಲ ತಾಲ್ಲೂಕಿನ 25ಜನ ಬೀದಿಪಾಲಾಗಿದ್ದಾರೆ ನೌಕರಿಗೆ ಜಾಗ ಇಲ್ಲದೆ. ಆದ್ದರಿಂದ ಇಂಥದ್ದನ್ನು ಸರಿಪಡಿಸಬೇಕು ಎಂಬ ಮಾತನ್ನು ಹೇಳಿ ಸನ್ಮಾನ್ಯ ಸಭಾಧ್ಯಕ್ಷರು ಈಗಾಗಲೇ ನನಗೆ ಸಮಯವನ್ನು ನಿಗದಿ ಮಾಡಿರುವುದರಿಂದ ಕೊನೆಯದಾಗಿ ಒಕ್ಕಲಿಗರ ಸಂಘದ ಬಗ್ಗೆ ಹೇಳುತ್ತೇನೆ. ರಿಜಿಸ್ಟ್ರೇಷನ್ ಆಫ್ ಸೊಸೈಟೀಸ್ ಆಕ್ಟ್ ಪ್ರಕಾರ ಒಕ್ಕಲಿಗರ ಸಂಘ ನೊಂದಾವಣೆಯನ್ನು ಪಡೆದು ಈ ರಾಜ್ಯದಲ್ಲಿ ಇವತ್ತು ಕೆಲಸವನ್ನು ಮಾಡುತ್ತಿದೆ ಸ್ವಾಮಿ, ಇವತ್ತು

ಪತ್ರಿಕೆಯಲ್ಲಿ ಒಕ್ಕಲಿಗರ ಸಂಘ ಕೆ.ಆರ್.ರಸ್ತೆ, ವಿ.ವಿ.ಪುರಂ, ಬೆಂಗಳೂರು ಎನ್ನತಕ್ಕ ಜಾಹಿರಾತು ನೋಡಿದೆ. 20-4-1995ರಿಂದ 24-4-1995ರವರೆಗೆ ಚುನಾವಣೆಗೆ ಸ್ಪರ್ಧೆ ಮಾಡುವುದಕ್ಕೆ ಅರ್ಜಿಯನ್ನು ಕೊಡುತ್ತೇವೆ ಎಂದು ಕೊಟ್ಟಿದ್ದಾರೆ ಸ್ವಾಮಿ. ಇವತ್ತು ಏನಾಗಿದೆಯೆಂದರೆ ಇಡೀ ಒಂದು ಕೋಟಿ ಇರತಕ್ಕ ಸಮುದಾಯ, ಜನ ಏನಿದೆ ಈ ಜನಕ್ಕೆ ಇವತ್ತು ಬ್ಲಾಕ್‌ಮೇಲ್ ಮಾಡುತ್ತಿದ್ದಾರೆ ಒಕ್ಕಲಿಗರ ಸಂಘದಲ್ಲಿರತಕ್ಕ ಕೆಲವು ಮುಖಂಡರುಗಳು. ಕಳೆದ ಅಧಿವೇಶನದಲ್ಲಿ ನಾನು ಮಾತನಾಡುವಾಗ ಸನ್ಮಾನ್ಯ ಉಪಮುಖ್ಯಮಂತ್ರಿಗಳು ಇದರ ಬಗ್ಗೆ ತನಿಖೆ ಮಾಡಿಸುತ್ತೇನೆ ಎಂಬ ಮಾತನ್ನು ಹೇಳಿದ್ದರು. ಆದರೆ ಅದು ಅಲ್ಲಿಗೇ ನಿಂತುಹೋಯಿತು, ತನಿಖೆ ಮಾಡಿಸಲಿಲ್ಲ. ಸುಮಾರು 1 ಲಕ್ಷ 95ಸಾವಿರ ಜನ ಇವತ್ತು ನಾವು ಅಲ್ಲಿ ಮೆಂಬರ್‌ಷಿಪ್ ತೆಗೆದುಕೊಳ್ಳಬೇಕೆಂದು ಮನವಿ ಸಲ್ಲಿಸಿದ್ದಾರೆ ಒಕ್ಕಲಿಗರ ಸಂಘಕ್ಕೆ. ಕೇವಲ 45 ಸಾವಿರ ಜನ ಮೆಂಬರ್‌ಷಿಪ್ ಇಟ್ಟುಕೊಂಡು ಅವರು ಮಾತ್ರ ಬಂದು ಓಟು ಮಾಡುತ್ತಾರೆಯೇ ವಿನಹ ಬೇರೆಯವರು ಬಂದು ಮಾಡುವುದಿಲ್ಲ. ಇದು ರೆವಿನ್ಯೂ ಮಿನಿಸ್ಟರ್ ಕೈಕೆಳಗೆ ಬರುತ್ತದೆ. ಸನ್ಮಾನ್ಯ ಕಂದಾಯ ಸಚಿವರು ಈ ಬಗ್ಗೆ ಗಮನ ಹರಿಸಬೇಕು. ತಾವು ಹೇಳಬೇಕು ಈಗ ಚುನಾವಣೆ ನಡೆಯುತ್ತಿದೆ. 1 ಲಕ್ಷ 95ಸಾವಿರ ಜನ ಅರ್ಜಿ ಹಾಕಿಕೊಂಡು ಇವತ್ತು ಮೆಂಬರ್‌ಷಿಪ್ ಕೇಳುತ್ತಿದ್ದಾರೆ. ನಮಗೆ ಓಟು ಮಾಡುವ ಹಕ್ಕು ಕೊಡಿ, ಇವತ್ತು ಸಮಾಜದಲ್ಲಿ ಈ ಸಂಘ ಬಹಳ ಚೆನ್ನಾಗಿ ಉಳಿಯಬೇಕು ಎಂದು ಕೇಳುತ್ತಿದ್ದಾರೆ. ಅಲ್ಲಿರತಕ್ಕ ಆಡಳಿತ ಮಂಡಳಿಯವರು ಹೊಸಬರಿಗೆ ಅವಕಾಶ ಕೊಟ್ಟರೆ ಈಗಿರುವ ಆಡಳಿತ ಮಂಡಳಿ ಮತ್ತೆ ಬರುವುದಿಲ್ಲ ಎಂದು ಅವಕಾಶ ಕೊಡದೇ ಇರುವುದನ್ನು ನಾವು ನೋಡುತ್ತಿದ್ದೇವೆ. ಸಭಾಧ್ಯಕ್ಷರೇ, ತಮ್ಮ ಮೂಲಕ ನಾನು ಒಂದು ಕೋಟಿ ಜನರ ಪರವಾಗಿ ಕೇಳುತ್ತೇನೆ ಆ ಒಂದು ಚುನಾವಣೆಯನ್ನು ರದ್ದು ಮಾಡಿ ಮೆಂಬರ್‌ಷಿಪ್ ಕೊಡಲಿಕ್ಕೆ ಅವಕಾಶ ಮಾಡಿಕೊಡುವುದಕ್ಕೆ ಸರ್ಕಾರ ಆದೇಶ ಕೊಡಬೇಕು. ಇದಕ್ಕೆ ಕಂದಾಯ ಸಚಿವರು ದಯವಿಟ್ಟು ಈ ಸಂದರ್ಭದಲ್ಲಿ ಉತ್ತರ ಹೇಳಬೇಕೆಂದು ಈ ಸಂದರ್ಭದಲ್ಲಿ ಹೇಳಿ ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿರತಕ್ಕ ಸಭಾಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ಜೈಹಿಂದ್.

* Sri B.I. Patil(Uchagaon) :- Mr. Speaker Sir, I am grateful to you for giving me this opportunity to speak few words on the Governor's Address. I would like to take this opportunity to highlight some of the important problems and issues pertaining to our area.

Sir, there is acute shortage of power and drinking water in our area. Erratic power supply causing lot of inconvenience and hardship to the farmers in many areas. Therefore, there is necessity to establish a sub-station and replacement of transfarmers to improve electric supply position. In extension areas, electric power connection is

not being given to the residents/ houses coming within the jurisdiction of BUDA Authority . The BUDA authority is giving lot of harassment while issuing NOCs. I think the power of issuing NOCs shold be vested with the Panchayat for power connection to residents comes within the jurisdiction of Panchayats.

Then, there are more than 18% Marathi speaking people in Border dispute area of Belgaum. at present official Boards, bus routes are all written in Kannada. I demand that the Government should direct all concerenced to see that Official Boards, roads, bus routes should display boards in Marathi also. There is a circular issued by Government of India that in Border areas they should display both official language as well minority language. This may be followed by the Official concerned of that area.

Sir, though the Government says that the Law and Order situation is good in the State Idon't feel so because just a few days back the Cauvery Kannada Activists locked the rooms of MES Members in Legislators' Home. Though this incident appeared in the newspapers the Government has not taken steps against them. Police authorities have miserably failed in giving protection. The boundary dispute is being discussed for the last 39 years and the Government has not taken any initiative in soving the boundary dispute.

The Government of Karnataka should compel the central Government to solve this border problem emicably and to give justice to our people living there explained as ordered by the chair.

(Interruptions)

Mr. Speaker : I order not to record......

Sri B.I. Patil . I strongly oppose the thanks giving motion to the governor's Address moved by Sri K.N.Nage Gowda and conclude my speech.

ಶ್ರೀ ಎಂ.ನಾರಾಯಣಸ್ವಾಮಿ(ಬೇತಮಂಗಳ ಕ್ಷೇತ್ರ) : ಸನ್ಮಾನ್ಯ ಸಭಾಧ್ಯಕ್ಷರೆ, ನಾನು ರಾಜ್ಯಪಾಲರ ಭಾಷಣದ ಮೇಲೆ ಮುಂಡಸಿರುವ ವಂದನಾ ನಿರ್ಣಯವನ್ನು ಸ್ವಾಗತಿಸುತ್ತಾ ಎರಡು ಮಾತುಗಳನ್ನು ಆಡುವುದಕ್ಕೆ ಬಯಸುತ್ತಾ ಇದ್ದೇನೆ ನಮ್ಮ ಸರ್ಕಾರ.

ಶ್ರೀ ಎಂ. ನಾರಾಯಣಸ್ವಾಮಿ : ನಮ್ಮ ಸರ್ಕಾರ ಮಣ್ಣಿನ ಮಗನ ಸರ್ಕಾರ. ನಾವು ಜನತೆಗೆ ಏನು ಮಾತನ್ನು ಕೊಟ್ಟಿದ್ದೇವೇಯೋ, ಆ ಮಾತಿನ ಪ್ರಕಾರ ನಡೆಯತಕ್ಕ ಸರ್ಕಾರ ಕೂಡ ಇದ್ದಾಗಿದೆ. ಉದಾಹರಣೆಗೆ ನಾವು ಸರ್ಕಾರವನ್ನು ರಚನೆ ಮಾಡಿದ ಮೇಲೆ, ನಾವು ಜನಗಳಿಗೆ ಸಾವಾನ್ಯ ಜನರಿಗೆ ಏನೇನು ಭರವಸೆಗಳನ್ನು ಕೊಟ್ಟಿದ್ದೇವೆಯೋ ಅದನ್ನು ಸಕ್ರಿಯವಾಗಿ ಕೊಡತಕ್ಕಂತಹ ವ್ಯವಸ್ಥೆಯನ್ನು ಮಾಡುವುದರ ಮೂಲಕವಾಗಿ ಈಗಾಗಲೇ ಒಂದು ಹೆಜ್ಜೆ ಮುಂದಿಟ್ಟಿದ್ದೇವೆ. ಉದಾಹರಣೆಗೆ ನಾವು ಬಂದ ತಕ್ಷಣ ನಾವು ಪಂಚಾಯಿತಿ ರಾಜ್ ವ್ಯವಸ್ಥೆಗೆ ಒಂದು ಚುನಾವಣಾ ಭರವಸೆಯನ್ನು ಕೊಟ್ಟಿದ್ದೆವೋ, ಕಾಂಗ್ರೆಸ್ ಸರ್ಕಾರ ಪದೇ ಪದೇ ತಾಲ್ಲೂಕು ಸಮಿತಿ ಮತ್ತು ಜಿಲ್ಲಾ ಪಂಚಾಯ್ತಿ ಚುನಾವಣೆಗಳನ್ನು ಮುಂದಕ್ಕೆ ಹಾಕಿಕೊಂಡು ಬಂದಿದ್ದವೊ, ಆ ಚುನಾವಣೆಗಳನ್ನು ಕೇವಲ ಮೂರು ತಿಂಗಳೊಳಗೆ ಮಾಡಿ, ಜನರಿಗೆ ಕೊಟ್ಟಿರತಕ್ಕಂತಹ ವಾತನ್ನು ನಡೆಸಿಕೊಟ್ಟಿದ್ದೇವೆ. ಅದೇ ರೀತಿ ರೈತರಿಗೆ ಬಡ್ಡಿ ವ್ಯವಸ್ಥೆಯನ್ನು ಯಾರು ಈ ರಾಜ್ಯದ ರೈತ ಸಾಲ ಪಡೆದು ಬೆಳೆ ಮೇಲೆ ಹಾಕಿ, ಬೆಳೆ ಬರದೆ, ಮಳೆ ಇಲ್ಲದೆ ಒಣಗಿ, ಬಡ್ಡಿ ಮತ್ತು ಅಸಲನ್ನು ಕಟ್ಟುವುದಕ್ಕೆ ಯೋಗ್ಯತೆ ಇರಲಿಲ್ಲವೋ........

ಅಧ್ಯಕ್ಷರು: ಶ್ರೀ ನಾರಾಯಣಸ್ವಾಮಿಯವರೇ, ಎಲ್ಲರೂ ಬಡ್ಡಿಯನ್ನೇ ಹಿಡಿದುಕೊಂಡಿದ್ದೀರಿ ಬೇರೆ ಏನಾದರೂ ಹೊಸದನ್ನು ಹೇಳಿ. ಅವರು ಕೊಟ್ಟಿದ್ದು ಆಯಿತು ಇವರು ತೆಗೆದುಕೊಂಡದ್ದು ಆಗಿ ಹೋಯಿತು. ಎಲ್ಲರೂ ಬಡ್ಡಿಯನ್ನೇ ಹಿಡಿದುಕೊಂಡಿದ್ದಾರೆ.

ಶ್ರೀ ಎಂ.ನಾರಾಯಣಸ್ವಾಮಿ: ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ನಾವು ಮಾರ್ಚಿ 31ಕ್ಕೆ ಮತ್ತು ಅಸಲನ್ನು ಕಟ್ಟುವುದಕ್ಕೆ ಏನು ಅವಕಾಶ ಕೊಟ್ಟಿದ್ದೇವೋ, ಅದನ್ನು ಇನ್ನೂ 2 ತಿಂಗಳ ಕಾಲ ಹೆಚ್ಚಿಗೆ ಕೊಟ್ಟಿರತಕ್ಕಂತಹ ನಿರ್ಧಾರವನ್ನು ನಮ್ಮ ಸರ್ಕಾರ ಮಾಡಿದೆ. ಅದಕ್ಕಾಗಿ ನಾವು ಹೇಳಿದ ರೀತಿಯಲ್ಲಿ ನಡೆದಿದ್ದೇವೆ ಎನ್ನುವ ವಿಷಯವನ್ನು ತಮ್ಮ ಮೂಲಕ ಜನರ ಗಮನಕ್ಕೆ ತರಲಿಕ್ಕೆ ಬಯಸುತ್ತೇನೆ. ಅದೇ ರೀತಿ ಇವತ್ತು ಮಾನ್ಯ ಮೊಯಿಲಿಯವರು ಇರಬಹುದು, ಶ್ರೀಮಾನ್ ಖರ್ಗೆಯವರು ಇರಬಹುದು. ಅನೇಕ ಈ ರಾಜ್ಯದ ಬಜೆಟ್ ಮೇಲೆ, ನಾವು ಇಷ್ಟು ದುಡ್ಡು ಇಟ್ಟಿದ್ದೇವೆ, ಇಷ್ಟು ನಾವು ದುಡ್ಡು ಖರ್ಚು ಮಾಡಿದ್ದೇವೆ, ಎನ್ನತಕ್ಕ ಮಾತನ್ನು ಹೇಳಿದರು. ಆದರೆ ಬಜೆಟ್ ಪುಸ್ತಕದಲ್ಲಿದ್ದ ತಕ್ಷಣ ಅದು ಜನರಿಗೆ ತಲುಪದಿದ್ದರೆ, ಬಜೆಟ್ ಪುಸ್ತಕದಲ್ಲಿ ಇಟ್ಟೂ ಏನು ಪ್ರಯೋಜನವಾಗುವುದಿಲ್ಲ. ಕಾರಣ ಅನೇಕ ವಿಷಯಗಳಲ್ಲಿ ಬಜೆಟ್ ಅನ್ನು ಇಡುತ್ತೇವೆ. ಹೇಳಬೇಕಾಗಿ ಬಂದಾಗ ಅದರ ಅಂಕಿ ಅಂಶಗಳನ್ನು ಇಡುತ್ತೇವೆಯೇ ಹೊರತು ಪುಸ್ತಕದಲ್ಲಿರುತ್ತದೆ. ಆದರೆ ಸಾಮಾನ್ಯ

ಜನರಿಗಾಗಲಿ, ಅಥವಾ ನಮ್ಮ ಪ್ರತಿಯೊಂದು ಗ್ರಾಮಮಟ್ಟಕ್ಕೆ ತಲುಪದೆ ಬಜೆಟ್‌ನಲ್ಲೇ ಒಂದು ಮನೆಯನ್ನು ಕಟ್ಟಿದ ಹಾಗೆ ಆಗುತ್ತದೆ. ಅಂಕಿ ಅಂಶಗಳನ್ನು ಪುಸ್ತಕದಲ್ಲಿಟ್ಟು,ಬಜೆಟನಲ್ಲಿಟ್ಟು ಖರ್ಚು ಮಾಡಿದ್ದೇವೆ ಎಂದು ಅಂಕಿ ಅಂಶಗಳನ್ನು ಕೊಟ್ಟರೆ ಆ ರೀತಿ ಆಗುತ್ತದೆ ಎನ್ನುವ ಮಾತನ್ನು ಗಮನಕ್ಕೆ ತರಲಿಕ್ಕೆ ಬಯಸುತ್ತೇನೆ. ಜೊತೆಗೆ ಪಿ.ಡಬ್ಲ್ಯು.ಡಿ ಇಲಾಖೆಯಲ್ಲಾಗಲಿ, ಇರಿಗೇಷನ್ ಇಲಾಖೆಯಲ್ಲಾಗಲಿ, ಹಣ ಇಟ್ಟಿದ್ದೇವೆಂದು ಹೇಳಿದ್ದಾರೆ. ಆದರೆ ಅಲ್ಲಿ ನಡೆಯತಕ್ಕ ವ್ಯವಸ್ಥೆ ಏನು ಅಂದರೆ, ಸುಮಾರು 500 ಕೋಟಿ ರೂಪಾಯಿಗಳ ಪೀಸ್ ವರ್ಕ ಎಂದು ಹೇಳಿ ಬಿಲ್ಲುಗಳನ್ನು ಮಾಡಿ ದುಡ್ಡನ್ನು ಹೊಡಿದಿದ್ದಾರೆ. ಅದರ ಮೇಲೆ ವಿಚಾರಣೆಯಾಗಬೇಕು ಎನ್ನತಕ್ಕ ಮಾತನ್ನು ಹೇಳುತ್ತೇನೆ. ಜೊತೆಗೆ ನೀರಾವರಿ ಇಲಾಖೆ ಬಗ್ಗೆ ಹೇಳುವುದಾದರೆ, ಕಾವೇರಿ, ಕೃಷ್ಣ ಯೋಜನೆಗೆ 1,000 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇವೆಂದು ಸನ್ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ಅದನ್ನು ನಾನು ಒಪ್ಪುತ್ತೇನೆ. ಕೃಷ್ಣ-ಕಾವೇರಿ ಯೋಜನೆಗಳಿಗೆ 2000 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ. ಆದರೆ ಬರಡು ಜಿಲ್ಲೆಗಳಾಗಿರತಕ್ಕ ಕೋಲಾರ ಜಿಲ್ಲೆ ಆಗಬಹುದು. ಚಿತ್ರದುರ್ಗ ಜಿಲ್ಲೆ ಆಗಬಹುದು. ತುಮಕೂರು ಜಿಲ್ಲೆಯಾಗಬಹುದು. ಬೆಂಗಳೂರು ಗ್ರಾಮಾಂತರ ಜಿಲ್ಲೆಯಾಗಬಹುದು. ಈ ಜಿಲ್ಲೆಗಳಿಗೆ ಎಷ್ಟು ಹಣವನ್ನು ಕೊಡುತ್ತೀರೆಂಬುದನ್ನು ಹೇಳಬೇಕು. ಮೇಜರ್ ಇರಿಗೇಷನ್‌ಗೆ ದುಡ್ಡನ್ನು ಕೊಡುವುದಾದರೆ, ಸಣ್ಣ ನೀರಾವರಿಗೆ ಏಕೆ ದುಡ್ಡು ಕೊಡುವುದಿಲ್ಲ? ಅದಕ್ಕೆ ಬರೀ 70 ಕೋಟಿ ಇಟ್ಟಿದ್ದೀರಿ. ಈ ರೀತಿಯ ತಾರತಮ್ಯ ಏಕೆ ಎಂಬುದಾಗಿ ಕೇಳಬಯಸುತ್ತೇನೆ. ಕೋಲಾರ ಜಿಲ್ಲೆಯನ್ನೇ ತೆಗೆದುಕೊಂಡು ಹೇಳುವುದಾದರೆ, ಸುಮಾರು ಸಾವಿರಾರು ಕೆರೆಗಳಿವೆ. ಆ ಕೆರೆಗಳಲ್ಲಿ ಇದ್ದಂತಹ ಸಾವಿರಾರು ಮರಗಳನ್ನು ನಾವು ನೋಡುತ್ತಿದ್ದೆವು. ಸಣ್ಣ ಸಣ್ಣ ಕೆರೆಗಳ ಹತ್ತಿರ ಹೋದರೆ ಅನೇಕ ಮರಗಳನ್ನು ನೋಡಬಹುದಾಗಿತ್ತು. ಗಿಡಗಳು ಇರುತ್ತಿದ್ದವು. ಹೊಂಗೆ ಗಿಡಗಳು ಇರುತ್ತಿದ್ದವು. ಬಹಳ ಸೊಪ್ಪುಸಿಗುತಿತ್ತು. ಒಳ್ಳೆಯ ಸೌದೆಸಿಗುತ್ತಾ ಇತ್ತು. ಆದರೆ ಇವತ್ತು ಯಾವ ರೀತಿ ಆಗಿದೆ ಎಂದರೆ, ಸೌದೆಗೆ ಕಬ್ಬಿನ ಸೋಗೆಯನ್ನು ಉಪಯೋಗಿಸುತ್ತಿದ್ದಾರೆ. ಒಂದು ಮರ ಸಿಕ್ಕುವುದಿಲ್ಲ. ಒಂದು ಬಳ್ಳಿ ಸಿಕ್ಕುವುದಿಲ್ಲ. ಸೌದೆ ಸಿಕ್ಕುವುದಿಲ್ಲ. ನಮಗೆ ಪರಿಸ್ಥಿತಿ ಏನಾಗಿದೆ ಎಂದರೆ, ಸೌದೆ ಇಲ್ಲದೆ ಇರತಕ್ಕ ಪರಿಸ್ಥಿತಿಯಲ್ಲಿ ಕಬ್ಬಿನ ಸೋಗೆಯನ್ನು ಉರುವಲಾಗಿ ಉಪಯೋಗಿಸತಕ್ಕ ಪರಿಸ್ಥಿತಿ ಬಂದಿದೆ. ಸೀಮೆ ಎಣ್ಣೆ ಕೂಡ ಸರಿಯಾಗಿ ಸಿಕ್ಕುತ್ತಿಲ್ಲ. ನ್ಯಾಯ ಬೆಲೆ ಅಂಗಡಿಗಳಲ್ಲಿ ಸೀಮೆ ಎಣ್ಣೆಯನ್ನು ಮಾರತಕ್ಕ ವ್ಯವಸ್ಥೆಯಲ್ಲಿ ಏನಾಗಿದೆ ಎಂದರೆ, ಬಡವರಿಗೆ ಕೊಡದೆ ಇರತಕ್ಕ ಪರಿಸ್ಥಿತಿ ನಿರ್ಮಾಣವಾಗಿದೆ. ಇಷ್ಟೆಲ್ಲಾ ಆದರೂ ಹೋಗಲಿ ಆದರೆ ವಿದ್ಯುಚ್ಛಕ್ತಿಯೂ ಸರಿಯಾಗಿರುವುದಿಲ್ಲ. ಉದಾಹರಣೆಗೆ ಕೋಲಾರ ಜಿಲ್ಲೆ ಬಗ್ಗೆ ಹೇಳುವುದಾದರೆ, ಪಂಪುಸೆಟ್ಟುಗಳಿಗೆ ಕರೆಂಟ್ ಕೊಡಬೇಕು ಎನ್ನುವ ಮಾತು ಬಂದಾಗ, 400 ಅಡಿ ಕೊರೆದರೂ ಕೊಳವೆ ಬಾವಿ ನೀರು ಸಿಕ್ಕುತ್ತಿಲ್ಲ. ಕುಡಿಯುನ ನೀರಿನ ವ್ಯವಸ್ಥೆಯ

ಬಗ್ಗೆ ಹೇಳುವುದಾದರೆ, 5 ವರ್ಷಗಳಿಂದಲೂ ಈ ಮನೆಯ ಸದಸ್ಯನಾಗಿ ಕೆಲಸ ಮಾಡಿದ್ದೇನೆ. ಕುಡಿಯುವ ನೀರಿಗೆ ತೊಂದರೆ ಇಲ್ಲ. . ಹಣವನ್ನು ಬಿಡುಗಡೆ ಮಾಡುತ್ತೇವೆ ಎಂಬ ಹೇಳಿಕೆ ಕೊಟ್ಟುಬಿಡುತ್ತಾರೆ. ಆದರೆ ಒಂದು ತಾಲ್ಲೂಕಿನಲ್ಲಿ 50 ಕೊಳವೆ ಬಾವಿಗಳು ಬೇಕಾಗಿದ್ದರೆ, 5-6 ಕೊಳವೆ ಬಾವಿಗಳನ್ನು ಕೊಡುತ್ತಾರೆ. ವೆಲ್ ಬೋರ್ ಡಿವಿಜನ್‌ನವರು ಬಾವಿಯನ್ನು ಡ್ರಿಲ್ ಮಾಡಿಸುತ್ತಾರೆ. ಅಲ್ಲಿರತಕ್ಕ ಜಿಯಾಲಜಿಸ್ಟ್‌ನ ಯಾರು ಇದ್ದಾರೆ. ಅವರು ಸರಿಯಾಗಿ ಸರ್ವೇ ಮಾಡುವುದಿಲ್ಲ. ಹೋಗಿ ಎಲ್ಲೋ ಒಂದು ಪಾಯಿಂಟ್ ತೋರಿಸುತ್ತಾನೆ. ಅದು ಫೇಲಾಗುತ್ತದೆ. ಈ ರೀತಿ ಒಂದೆರಡು ಕಡೆ ಡ್ರಿಲ್ ಮಾಡಿ ಕೈತೊಳೆದುಕೊಳ್ಳುತ್ತಾರೆ. ಮತ್ತೆ ತೋಡಿದ ಕೊಳವೆ ಬಾವಿಗಳಿಗೆ ಕೈ ಪಂಪನ್ನು ಜೋಡಿಸುವುದಿಲ್ಲ. ಇದರ ಬಗ್ಗೆ ಎಕ್ಸಿಕ್ಯೂಟಿವ್ ಇಂಜಿನೀಯರನ್ನು ಕೇಳಿದರೆ, ನಮಗೆ ಮೆಟೀರಿಯಲ್ಸ್ ಸಪ್ಲೈ ಸರಿಯಾಗಿಲ್ಲ ಎಂದು ಹೇಳುತ್ತಾರೆ. ಅಲ್ಲಿ ಪ್ಲಾಟ್ ಫಾರಂ ಕಟ್ಟಲು ಸಿಮೆಂಟ್ ಸಪ್ಲೈ ಇಲ್ಲ ಎಂದು ಹೇಳುತ್ತಾರೆ. ಉದಾಹರಣೆಗೆ ಹೇಳುವುದಾದರೆ, ಸುಮಾರು ಒಂದು ವರ್ಷದ ಹಿಂದೆ ಹಾಕಿದಂತಹ ಕೊಳವೆ ಬಾವಿಗಳಿಗೆ ಹ್ಯಾಂಡಿ ಪಂಪನ್ನು ಇದುವರೆವಿಗೂ ಹಾಕಿಲ್ಲ. ಸಿಮೆಂಟ್ ಸಪ್ಲೈ ಇಲ್ಲದೆ ಪ್ಲಾಟ್ ಫಾರಂ ಹಾಗೆಯೇ ಬಿಟ್ಟಿದ್ದಾರೆ. ಸರಬರಾಜು ಮಾಡತಕ್ಕಂತಹ ಪೈಪು ಕೂಡ ಸ್ಟ್ಯಾಂಡರ್ಡ್ ಆಗಿರುವುದಿಲ್ಲ. ಪೈಪು ಕೊಡತಕ್ಕಂಥದ್ದು ಸಬ್ ಸ್ಟ್ಯಾಂಡರ್ಡ್ದು ಇರುತ್ತದೆ. ಮೂರು, ಸಾರಿ ಕೈ ಪಂಪನ್ನು ಬದಲಾವಣೆ ಮಾಡಿದರೆ ಅದು ಹಾಳಾಗಿ ಹೋಗುತ್ತದೆ. ಹಿಂದೆ ಜನತಾ ದಳದ ಸರ್ಕಾರ ಇದ್ದಂತಹ ಸಂದರ್ಭದಲ್ಲಿ ಹಾಕಿರತಕ್ಕ ಕೊಳವೆ ಬಾವಿಗಳನ್ನು ರಿಪೇರಿ ಮಾಡದಿರುವುದನ್ನು ನಾವು ನೋಡುತ್ತಿದ್ದೇವೆ. ಆದ ಕಾರಣ ಸರ್ಕಾರ ಆ ಕಡೆ ಗಮನವನ್ನು ಹರಿಸಿ ಕೊಳವೆ ಬಾವಿಗಳನ್ನು ರಿಪೇರಿ ಮಾಡುವಂತಹ ಕೆಲಸವನ್ನು ಮಾಡಬೇಕು. ಕಾವೇರಿ ಮತ್ತು ಕೃಷ್ಣಾ ಯೋಜನೆಗಳನ್ನು 2000ನೇ ಇಸವಿಯೊಳಗೆ ಬಚಾವತ್ ಅವಾರ್ಡ್ ಪ್ರಕಾರ ನಮ್ಮ ಪಾಲಿನ ನೀರನ್ನು ಬಳಸಿಕೊಳ್ಳಬೇಕು. ಅದಕ್ಕಾಗಿ ಹೆಚ್ಚು ಹಣವನ್ನು ಖರ್ಚು ಮಾಡಿ. ಅದಕ್ಕೆ ನಮ್ಮ ತಕರಾರು ಇಲ್ಲ. ಇದೇ ರೀತಿ ಸಣ್ಣ ನೀರಾವರಿ ಬಗ್ಗೆ ಹೇಳುವುದಾದರೆ, ನಮ್ಮ ಜಿಲ್ಲೆಯನ್ನೇ ಉದಾಹರಣೆಯಾಗಿ ಹೇಳುವುದಾದರೆ, ಸಾವಿರಾರು ಸಣ್ಣ ಸಣ್ಣ ಕೆರೆಗಳು ಇವೆ. ಇವುಗಳು 3 ವರ್ಷಕ್ಕೋ - 4 ವರ್ಷಕ್ಕೋ ಒಂದು ಸಾರಿ ತುಂಬುತ್ತವೆ. ಈ ರೀತಿ ತುಂಬಿದಾಗ ಹೆಚ್ಚುವರಿ ನೀರು ಪಕ್ಕದ ರಾಜ್ಯವಾದ ಆಂಧ್ರ ಹಾಗೂ ತಮಿಳುನಾಡು ರಾಜ್ಯಗಳಿಗೆ ಹರಿದು ಹೋಗುತ್ತದೆ. ಈ ಬಗ್ಗೆ ಕಳೆದ 5 ವರ್ಷಗಳಲ್ಲಿ 5 ಸಾರಿ ಪ್ರಶ್ನೆಯನ್ನು ಕೇಳಿದ್ದರೂ ಅಂದು ಇದ್ದಂತಹ ಸರ್ಕಾರ ನನಗೆ ಉತ್ತರವನ್ನು ಒದಗಿಸಲಿಲ್ಲ. ಈ ಕೆರೆಗಳು ಕೋಲಾರ ಜಿಲ್ಲೆಯ ಬಂಗಾರಪೇಟೆ ತಾಲ್ಲೂಕಿನಲ್ಲಿರಬಹುದು. ಶ್ರೀನಿವಾಸಪುರ ತಾಲ್ಲೂಕಿನಲ್ಲಿ ಇರಬಹುದು. ಮಾಲೂರು ತಾಲ್ಲೂಕಿನಲ್ಲಿ ಇರಬಹುದು. ಚಿಂತಾಮಣಿ ತಾಲ್ಲೂಕಿನಲ್ಲಿ ಇರಬಹುದು. ಹಾಗೂ ಬಾಗೆಪಲ್ಲಿ ತಾಲ್ಲೂಕಿನಲ್ಲಿರಬಹುದು. ಈ ತಾಲ್ಲೂಕುಗಳಲ್ಲಿರತಕ್ಕ ಕೆರೆಗಳು ಮಳೆ ನೀರಿನಿಂದ ತುಂಬುವಂತಹವು. 3-4

ವರ್ಷಗಳಿಗೊಮ್ಮೆ ತುಂಬಿದಾಗ ಅದರಿಂದ ಹೆಚ್ಚುವರಿ ನೀರು ಏನು ಹರಿದು ಹೋಗುತ್ತದೆ, ಅದು ಪಕ್ಕದ ರಾಜ್ಯಗಳಿಗೆ ಹರಿದು ಹೋಗುತ್ತದೆ. ಇದನ್ನು ತಡೆಗಟ್ಟುವ ಸಲುವಾಗಿ ಚಿಕ್ಕ ಚಿಕ್ಕ ಡ್ಯಾಮ್‌ಗಳನ್ನು ಹಾಕಿದಾಗ 50 ಎಕರೆ, 410 ಎಕರೆ, 30 ಎಕರೆ ನೀರಾವರಿ ಯಾಗಬಹುದು. ನನ್ನ ತಾಲ್ಲೂಕಿನಲ್ಲಿ 4 ದೊಡ್ಡ ಕೆರೆಗಳು ಇವೆ. ಅವುಗಳಿಗೆ ಹಣವನ್ನು ಬಿಡುಗಡೆ ಮಾಡಿದ್ದಾರೆಂದರೆ ಆದರಿಂದ ಬಹಳ ಪ್ರಯೋಜನವಾಗುತ್ತದೆ.

6.20 ಪಿ.ಎಂ

ರಾಮಸಾಗರ ಆಗಬಹುದು ಮಾರ್ಕಂಡೇಯ ಆಗಬಹುದು ಕಾಮಸಮುದ್ರವಾಗಬಹುದು ನಮ್ಮಲ್ಲಿ ಮೇಜರ್ ಟ್ಯಾಂಕುಗಳು ಇದ್ದರೂ ಅನೇಕ ಸಾರಿ ನೀರು ಹರಿದುಹೋಗುತ್ತದೆ. ನಾನು ಮುಖ್ಯ ಇಂಜಿನಿಯವರನ್ನು ಭೇಟಿ ಮಾಡಿದ್ದೇನೆ ಅವರು ಹೇಳುತ್ತಾರೆ, ಮದ್ರಾಸ್ ರಾಜ್ಯದ ಜೊತೆ ಅಗ್ರಿಮೆಂಟ್ ಮಾಡಿದ್ದೇವೆ, ನಮ್ಮದೇ ರಾಜ್ಯವಾದರೂ ಕೂಡ ನಾವು 19 ಕಿಲೋಮೀಟರ್ ಮಾಡುತ್ತೇವೆಂದು ಹೇಳಿದರು. ಅದಕ್ಕೆ ನಾನು ಗಲಾಟೆ ಮಾಡಿದೆ. ಅದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಸಣ್ಣ ನೀರಾವರಿಗೆ ಹೆಚ್ಚು ಅಧ್ಯತೆಯನ್ನು ಕೊಡಬೇಕು. ಕೃಷ್ಣಾ ಕಾವೇರಿ ಯೋಜನೆಗಳಿಗೆ 2 ಸಾವಿರ ಕೋಟಿ ರೂಪಾಯಿ ಖರ್ಚುಮಾಡಿ. ಆದರೆ ಬಯಲುಪ್ರದೇಶಗಳಿಗೆ ಕಣ್ಣೊರೆಸತಕ್ಕ ಕೆಲಸವಾಗಬಾರದೆಂದು ನಾನು ಹೇಳುತ್ತೇನೆ. ನಮ್ಮದು ಬಯಲು ಸೀಮೆ ಪ್ರದೇಶ ಇದೆ. ಬಯಲುಸೀಮೆಪ್ರದೇಶಗಳಿಗೆ ಹಿಂದಿನ ಸರ್ಕಾರದವರು ಏನು ಮಾಡಿದರು ಅದನ್ನು ಜಾರಿಗೆ ತರಬೇಕು. ಹಳ್ಳಿಗಾಡಿನಿಂದ ಬಂದಿರತಕ್ಕವರಿಗೆ ಮತ್ತು ಪಟ್ಟಣಗಳಲ್ಲಿರತಕ್ಕವರಿಗೆ ಉದ್ಯೋಗ ಮತ್ತು ವಿದ್ಯಾಭ್ಯಾಸದಲ್ಲಿ ಪರ್ಸೆಂಟೇಜ್ ಫಿಕ್ಸ್ ಮಾಡುತ್ತಾರೆ. ಪರ್ಸೆಂಟೇಜ್ ಪ್ರಕಾರ 80-90 ಪರ್ಸೆಂಟ್ ಇದ್ದರೆ ಅವರಿಗೆ ಉದ್ಯೋಗ ಕೊಡುತ್ತಾರೆ. ಗ್ರಾಮಾಂತರಪ್ರದೇಶದಲ್ಲಿ ಓದಿಕೊಂಡು ಬಂದಿರತಕ್ಕ ಮಕ್ಕಳು 50-40ಪರ್ಸೆಂಟ್ ತೆಗೆದುಕೊಂಡಿರುತ್ತಾರೆ ಆದರೆ ಅವರಿಗೆ ಕೆಲಸ ಸಿಗುವುದಿಲ್ಲ. ಯಾವುದೇ ಕಾಲೇಜಿನಲ್ಲಿ ಓದಬೇಕಾದರೆ ವಿದ್ಯಾಸಂಸ್ಥೆಗಳಲ್ಲಿ ಸೀಟು ಸಿಗುವುದಿಲ್ಲ. ಹಳ್ಳಿಯಲ್ಲಿ ಓದತಕ್ಕ ಮಕ್ಕಳಿಗೆ ಯಾವುದೇ ಸವಲತ್ತು ಇಲ್ಲದೆ ಅನೇಕ ಹರಿಜನ-ಗಿರಿಜನರ ಮಕ್ಕಳು ಮತ್ತು ಹಿಂದುಳಿದವರ ಅವರು ಯಾವುದೇ ಜನಾಂಗಕ್ಕೆ ಸೇರಿರಲಿ ಅವರು ಸೌಲಭ್ಯಗಳು ಇಲ್ಲದೆ ಓದುವುದಕ್ಕೆ ವಂಚಿತರಾಗಿ ಹಳ್ಳಿಯಿಂದ ಬಂದಿರತಕ್ಕ ಸಾಮಾನ್ಯ ಪ್ರಜೆಗಳ ಮಕ್ಕಳಿಗೆ ಅವರು ಯಾವುದೇ ಜನತೆ ಇರಲಿ ಅವರಿಗೆ ಎಲ್ಲೂ ಸೀಟು ಮತ್ತು ಉದ್ಯೋಗ ಸಿಗುವುದಿಲ್ಲ. ಬೆಂಗಳೂರುನಗರದಲ್ಲಿ ಕೌನ್ವೆಂಟ್ ಶಾಲೆಗಳಿಗೆ ಸೇರಿಕೊಂಡು 90 ಪರ್ಸೆಂಟ್ ಅಂಕಗಳನ್ನು ಪಡೆದಿರುತ್ತಾರೆ. ಅಂತಹವರ ಜೊತೆ ಹಳ್ಳಿಯಲ್ಲಿ ಓದಿದ ಮಕ್ಕಳು 35ಪರ್ಸೆಂಟ್ ತೆಗೆದುಕೊಂಡು ಅವರ ಜೊತೆಯಲ್ಲಿ ಕಾಂಪೀಟ್ ಮಾಡುವುದಕ್ಕಾಗುವುದಿಲ್ಲ. ಹೆಚ್ಚು ಅಂಕಗಳನ್ನು ಪಡೆದಿರತಕ್ಕವರಿಗೆ ಉದ್ಯೋಗ ದೊರೆಯುತ್ತದೆ. ಹಳ್ಳಿಯಿಂದ

ಓದಿಕೊಂಡು ಬಂದವರಿಗೆ ಉದ್ಯೋಗ ಸಿಗುವುದಿಲ್ಲ. ದಯಮಾಡಿ ಎರಡು ಭಾಗಗಳಾಗಿ ವಿಂಗಡಿಸತಕ್ಕ ಕೆಲಸವನ್ನು ಮಾಡಬೇಕು. ಗ್ರಾಮಾಂತರ ಪ್ರದೇಶಗಳಿಂದ ಬಂದಿರತಕ್ಕವರಿಗೆ ಇಂತಿಷ್ಟು ರಿಸರ್ವೇಷನ್ ಅನ್ನು ಕೊಡತಕ್ಕ ಪರಿಸ್ಥಿತಿಯನ್ನು ಉಂಟು ಮಾಡಬೇಕು.

ಮತ್ತೊಂದು ವಿಚಾರ ಬಜೆಟ್ ಮಂಡನೆ ಮಂಡಿದ್ದಾರೆ. ಮಾರ್ಚ್ 31ನೇ ತಾರೀಖು ಕೊನೆಗೊಳ್ಳುವ ಲೆಕ್ಕಚಾರದಲ್ಲಿ ಟ್ರಜರಿ ವಿಷಯದಲ್ಲಿ ಯಾರೂ ಗಮನವನ್ನು ಕೊಡುತ್ತಿಲ್ಲ.ಟ್ರಜರಿಯಲ್ಲಿ ಬಿಲ್‌ಗಳನ್ನು ಪಾಸ್ ಮಾಡಬೇಕಾದರೆ ಯಾರಿಗೂ ಬೆಲೆ ಕೊಡುವುದಿಲ್ಲ. ಟ್ರಜರಿಯಲ್ಲಿ ಏನು ಕೆಲಸ ನಡೆಯುತ್ತಿದೆ ಅಂದರೆ ಅಲ್ಲಿರತಕ್ಕ ಪ್ಯೂನ್ ಬಿಲ್ ಪಾಸ್ ಮಾಡುವ ಕೆಲಸವನ್ನು ಮ್ಯಾನೇಜ್ ಮಾಡುತ್ತಾನೆ. ಕೋಲಾರ ಜಿಲ್ಲೆಯಲ್ಲಿ ಡಿಪಿಎಪಿ ಕಾರ್ಯಕ್ರಮದಲ್ಲಿ ಎರಡು ವಿಭಾಗ ಮಾಡಿದ್ದಾರೆ. ಒಂದು ಚಿಕ್ಕಬಳ್ಳಾಪುರ ಸಬ್‌ಡಿವಿಜನ್ ಮತ್ತೊಂದು ಕೋಲಾರ ಸಬ್‌ಡಿವಿಜನ್. ಚಿಕ್ಕಬಳ್ಳಾಪುರ ಸಬ್ ಡಿವಿಜನ್‌ಗೆ 79ಲಕ್ಷ ರೂಪಾಯಿ ಹಣವನ್ನು ಜಿಲ್ಲಾಧಿಕಾರಿಗಳು ಬಿಡುಗಡೆ ಮಾಡಿ ಬಿಲ್ ಪಾಸ್ ಆಗಿ ಹಣವನ್ನು ತೆಗೆದುಕೊಂಡಿದ್ದಾರೆ. ಕೋಲಾರ ಸಭ್ ಡಿವಿಜನ್‌ನಲ್ಲಿ 90 ಲಕ್ಷ ರೂಪಾಯಿ ಬಿಲ್ ಇವತ್ತಿನವರೆಗೂ ಪಾಸ್ ಆಗಿಲ್ಲ. ಕಾರಣ ಏನೆಂದರೆ ಯಾರ‍್ಯಾರು ಹಣವನ್ನು ಕೊಡುತ್ತಾರೆ ಅವರ ಬಿಲ್‌ಗಳನ್ನು ಟ್ರಜರಿಯಲ್ಲಿ ಪಾಸ್ ಮಾಡುತ್ತಾರೆ. ಉಳಿದ ಬಿಲ್‌ಗಳು ಹಾಗೆಯೇ ಉಳಿದುಕೊಳ್ಳತಕ್ಕ ಕೆಲಸವಾಗಿದೆ. ಇದನ್ನು ಮೊದಲು ಸರಿಪಡಿಸಬೇಕು. ಕೋಲಾರ ಜಿಲ್ಲೆಯ ನನ್ನ ತಾಲ್ಲೂಕಿನಲ್ಲಿ ಕೆಜಿಎಫ್ ಸಿಲ್ಕ್, ಮಿಲ್ಕ್, ಗೋಲ್ಡ್‌ಗೆ ಹೆಸರುವಾಸಿ. ಗೋಲ್ಡ್‌ಮೈನಿಂಗನ್ನು ಮುಚ್ಚುತ್ತೇವೆ ಎಂದು ಹೇಳುತ್ತಿದ್ದಾರೆ. ಅದರ ಬಗ್ಗೆ ಸರ್ಕಾರದಿಂದ ಕೇಂದ್ರಸರ್ಕಾರದ ಮೇಲೆ ಒತ್ತಡ ತರತಕ್ಕ ಕೆಲಸವಾಗಲಿಲ್ಲ. ನಮ್ಮಲ್ಲಿ ಮಿಲ್ಕ್‌ಗೆ ಹೆಚ್ಚು ಪ್ರೋತ್ಸಾಹವಿಲ್ಲ. ಬೆಂಗಳೂರುನಗರದಲ್ಲಿ ಬಿಸ್ಲೇರಿವಾಟರ್ ಬಾಟಲ್‌ಗೆ 15ರೂಪಾಯಿ ಕೊಟ್ಟು ತೆಗೆದುಕೊಳ್ಳುತ್ತಾರೆ. ಒಂದು ಲೀಟರ್ ಹಾಲಿಗೆ 9 ರೂಪಾಯಿ ಕೊಡಿ ಅಂದರೆ ಅವರಿಗೆ ಕೊಡುವುದಕ್ಕಾಗುವುದಿಲ್ಲ. ಹಾಲು ಉತ್ಪಾದನೆ ಮಾಡತಕ್ಕ ರೈತನಿಗೆ ಇವತ್ತು ಹಸುಗಳಿಗೆ ಮೇವು ಕೊಡುವುದಕ್ಕೆ ಆಗುವುದಿಲ್ಲ. ಅವರಿಗೆ ಹಸಿರು ಮೇವು ಒದಗಿಸಲಿಕ್ಕೆ ಆಗುತ್ತಿಲ್ಲ. ಒಂದು ಲೀಟ್‌ರ ಹಾಲಿಗೆ 5 ರೂಪಾಯಿ ಚಿಲ್ಲರೆ ಕೊಟ್ಟರೆ ಅದು ಏನೇನೂ ಸಾಲದು. ಅವನ ಐಆರ್‌ಡಿಪಿ ಸಾಲಕ್ಕೆ ಬಡ್ಡಿ ಕಟ್ಟಲಿಕ್ಕೆ ಆಗದಿರತಕ್ಕ ಪರಿಸ್ಥಿತಿ ಇದೆ. ಅಂತಹ ಒಂದು ಪರಿಸ್ಥಿತಿಗೆ ಇವತ್ತು ರೈತ ಹೋಗಿದ್ದಾನೆ. ನಾನು ಈ ಮಾತನ್ನು ಏಕೆ ಹೇಳುತ್ತಿದ್ದೇನೆಂದರೆ ಹಾಲಿನ ದರವನ್ನು ಹೆಚ್ಚಿಗೆ ಮಾಡತಕ್ಕ ಕೆಲಸವಾಗಬೇಕು.

ಶ್ರೀ ಎನ್.ರಾಜಣ್ಣ : ಹಾಲು ಉತ್ಪಾದನೆ ಮಾಡತಕ್ಕ ರೈತರು ಬಿಂದಿಗೆಯಲ್ಲಿ ಹಾಲು ಇಟ್ಟುಕೊಂಡು ಹಾಲು ಸರ್‌ಪ್ಲಸ್ ಆದಾಗ ಯಾರೂ ಸಹಕಾರ ಕೊಡಲಿಲ್ಲ. ಗೋಧಿ ಪ್ರಾಡಕ್ಟ್‌ಗಳಿಗೆ 10-20 ರೂಪಾಯಿ ಬೆಲೆ ಜಾಸ್ತಿಯಾಗಿದೆ. ಆದರಿಂದ ಹಾಲು ಉತ್ಪಾದನೆಗೆ ಎಫೆಕ್ಟ್ ಆಗುತ್ತಿದೆ. ಹಸುಗಳನ್ನು ಇಟ್ಟುಕೊಂಡಿರುವವರು ಬೆಳಗ್ಗೆ ಎದ್ದು ಹಸುಗಳ ಸಗಣಿ ಎತ್ತಿ ಮೈತೊಳೆದು ನಾಲ್ಕು ಲೀಟರ್ ಹಾಲು ಕರೆಯುತ್ತಾರೆ. ಆದರಿಂದ

20 ರೂಪಾಯಿ ಅವನಿಗೆ ಸಿಗುತ್ತದೆ. 8 ರೂಪಾಯಿ ಒಂದು ಲೀಟರ್ ಹಾಲಿಗೆ ಮಾರಾಟ ಮಾಡುತ್ತಾರೆ. ಹಾಲು ಉತ್ಪಾದನೆ ಮಾಡುವವರಿಗೆ 6 ರೂಪಾಯಿ ಕೊಟ್ಟರೆ ಆದರಿಂದ ಏನೂ ಆಗುವುದಿಲ್ಲ. ಹೀಗೆ ಮಾಡಿದರೆ ಹಾಲು ಉತ್ಪಾದನೆ ಹೇಗಾಗುತ್ತದೆ.

ಶ್ರೀ ಎಂ.ನಾರಾಯಣಸ್ವಾಮಿ : ರೇಷ್ಮೆಯಿಂದ ಹಣ ಬರುತ್ತದೆ. ಮಿಲ್ಕ್‌ನಿಂದ ಹಣ ಬರುವುದಿಲ್ಲ. ರೇಷ್ಮೆ ದರವನ್ನು ನಿಗದಿಪಡಿಸುವುದು ಕೇಂದ್ರಸರ್ಕಾರ, ಕೇಂದ್ರಸರ್ಕಾರದ ನೀತಿಯನ್ನು ಪ್ರತಿಭಟಿಸಿ ಹೆಚ್ಚು ದರವನ್ನು ಕೊಡಲಿಕ್ಕೆ ಕೇಂದ್ರಸರ್ಕಾರದ ಮೇಲೆ ನಮ್ಮ ಸಭಾನಾಯಕರು ಒತ್ತಡ ತಂದು ರೇಷ್ಮೆಗೆ ಹೆಚ್ಚು ಬೆಲೆಯನ್ನು ನಿಗದಿ ಮಾಡತಕ್ಕ ಕೆಲಸ ಮಾಡಬೇಕಾಗುತ್ತದೆ. ನಮ್ಮ ಕೆಜಿಎಫ್‌ನಲ್ಲಿ ಚಿನ್ನದ ಅದಿರು ತೆಗೆಯುತ್ತಾರೆ. ಆದರಿಂದ ಇಡೀ ತಾಲ್ಲೂಕು ಹಾಳಾಗುತ್ತಿದೆ. ಚಿನ್ನದ ಅದಿರು ತೆಗೆದು ಚಿನ್ನವನ್ನು ತೆಗೆಯಲಿಕ್ಕೆ ಮಾಡತಕ್ಕ ಕೆಲಸದಿಂದ ಅಲ್ಲಿಂದ ಬರತಕ್ಕ ಗಾಳಿಯಿಂದ ಉಸಿರಾಟಕ್ಕೆ ತೊಂದರೆಯಾಗುತ್ತದೆ. ಅದನ್ನು ನಿಲ್ಲಸತಕ್ಕ ಕೆಲಸವನ್ನು ಮಾಡಬೇಕು. ನಮ್ಮಲ್ಲಿ ಬೋರ್‌ವೆಲ್ ತೆಗೆಯುತ್ತಿದ್ದಾರೆ. ನಮ್ಮ ಜಿಲ್ಲೆಯಲ್ಲಿ ಬೋರ್‌ವೆಲ್ ಮಾಡಲಿಕ್ಕೆ ಪಾಯಿಂಟ್ ನಿಗದಿ ಮಾಡತಕ್ಕ ಅಧಿಕಾರವನ್ನು ಜಿಯಾಲಜಿಸ್ಟ್‌ಗಳಿಗೆ ಕೊಟ್ಟಿದ್ದಾರೆ. ಯಾರೂ ಕೂಡ ಆ ಕೆಲಸವನ್ನು ಸರಿಯಾಗಿ ಮಾಡುತ್ತಿಲ್ಲ. ಅಂತರ್ಜಲವನ್ನು ಗುರುತಿಸುವ ರೀತಿಯಲ್ಲಿ ಜಿಯಾಲಜಿಸ್ಟ್‌ಗಳು ಸರಿಯಾಗಿ ಗುರುತು ಮಾಡುವಂತೆ ವ್ಯವಸ್ಥೆ ಮಾಡಬೇಕೆಂದು ತಮ್ಮ ಮೂಲಕ ಮನವಿ ಮಾಡುತ್ತೇನೆ. ನಮ್ಮ ಜಿಲ್ಲೆಗೆ 5 ಸಾವಿರ ಕೊಳವೆಬಾವಿಗಳನ್ನು ಹರಿಜನ-ಗಿರಿಜನ ಮತ್ತು ಹಿಂದುಳಿದ ವರ್ಗದವರು ವಾಸಿಸುವ ಕಡೆಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡುತ್ತೇವೆಂದು ಹೇಳಿದರು. ಅಲ್ಲಿ ಕುಡಿಯಲಿಕ್ಕೆ ಯೋಗ್ಯವಲ್ಲದ ನೀರು ಬರುತ್ತದೆಂದು ಹೇಳಿ ಆ ಏರಿಯಾಕ್ಕೆ ಕೊಡತಕ್ಕ ಸವಲತ್ತುಗಳನ್ನು ನಿಲ್ಲಿಸಿದ್ದಾರೆ. ಹರಿಜನ ಗಿರಿಜನರಿಗೆ ಕೊಟ್ಟ ಸೌಲಭ್ಯವನ್ನು ಉಪಯೋಗಿಸಿಕೊಳ್ಳಲು ಗ್ರೇಬ್ಲಾಕ್ ಏರಿಯಾ ಎಂದು ಇರುವ ರಿಸ್ಟ್ರಿಕ್ಷನ್ ಅನ್ನು ತೆಗೆದು, ಅದನ್ನು ರಿಲ್ಯಾಕ್ಸ್ ಮಾಡುವ ಕೆಲಸವನ್ನು ನೀವು ಮಾಡಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ಮನವಿ ಮಾಡುತ್ತೇನೆ. ನಮ್ಮ ಕೋಲಾರ ಜಿಲ್ಲೆಯಲ್ಲಿ ಹೂಳು ತೆಗೆಯತಕ್ಕ ಕೆಲಸವನ್ನು ಮಾಡಲು ಕೇಂದ್ರಸರ್ಕಾರ ಅಥವಾ ವರ್ಲ್ಡ್‌ಬ್ಯಾಂಕ್ ಯಾವುದೇ ವತಿಯಿಂದ ಹಣ ತೆಗೆದು ಹೂಳು ತೆಗೆಯತಕ್ಕ ಕೆಲಸವನ್ನು ಮಾಡಬೇಕೆಂದು ಹೇಳಿ, ನನಗೆ ಮಾತನಾಡಲು ತಾವು ಅವಕಾಶ ಕೊಟ್ಟಿದ್ದಕ್ಕಾಗಿ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಜಗದೀಶ್ ತಿಮ್ಮನಗೌಡ ಪಾಟೀಲ್ :(ಬೀಳಗಿ) ಮಾನ್ಯ ಅಧ್ಯಕ್ಷರೆ, ಮಾನ್ಯರಾಜ್ಯಪಾಲರು ಏನು ತಮ್ಮ ಭಾಷಣವನ್ನು ದಯಪಾಲಿಸಿದ್ದಾರೆ ಅದನ್ನು ಕೂಲಂಕುಶವಾಗಿ ನೋಡುತ್ತಾ ಹೋದರೆ ಕೆಲವು ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ರೈತರಿಗೆ ಅವರ ಸಾಲದ ಮೇಲಿನ ಬಡ್ಡಿ ಮನ್ನಾ ಮತ್ತು ಗ್ರಾಮಾಭಿವೃದ್ಧಿಯ ಬಗ್ಗೆ ಹೇಳಿದ್ದಾರೆ. ಗ್ರಾಮೀಣಾ ಸಮಸ್ಯೆಗಳ ಬಗ್ಗೆ ಅದರ ಸಲುವಾಗಿ ಹೇಳಿದ್ದಾರೆ. ಗ್ರಾಮಾಭಿವೃದ್ಧಿಯ ಸಲುವಾಗಿ ರೈತರ ಸಲುವಾಗಿ ಸ್ಪಷ್ಟವಾದ ನಿರ್ದಿಷ್ಟವಾದ ಯಾವುದೇ

ದೀರ್ಘವಾದ ಯೋಜನೆಗಳಾಗಲೀ ಅಥವಾ ಅಲ್ಪಾವಧಿ ಯೋಜನೆಗಳಾಗಲೀ ಅವುಗಳ ಬಗ್ಗೆ ಹೇಳಲಿಲ್ಲ. ಆದ್ದರಿಂದ ಇವತ್ತು ರಾಜ್ಯದ ಜನತೆಯನ್ನು ಉದ್ದೇಶಿಸಿ ರಾಜ್ಯಪಾಲರು ಏನು ಭಾಷಣ ಮಾಡಿದ್ದಾರೆ. ಅದು ನಿರಾಶದಾಯಕವಾಗಿದೆಯೆಂದು ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಸರ್ಕಾರ ಕೇವಲ ರೈತರ ಸಾಲದ ಮೇಲಿನ ಬಡ್ಡಿಯನ್ನು ಮನ್ನಾ ಮಾಡಿದ್ದೇವೆಂದರೆ ಸಾಲದು. ರೈತರಿಗೆ ತಾತ್ಕಾಲಿಕವಾಗಿ ಏನು ಪರಿಹಾರವನ್ನು ಕೊಡಬೇಕೋ ಅದನ್ನು ಕೊಡಬೇಕು. ಎಲ್ಲಿಯವರೆಗೆ ರೈತ ತಾನು ಬೆಳೆದ ಮಾಲಿಗೆ ನಿರ್ದಿಷ್ಟವಾದ ಬೆಲೆಯನ್ನು ಸರ್ಕಾರ ಕೊಡಲಿಕ್ಕೆ ಸಾಧ್ಯವಿಲ್ಲವೋ ಅಲ್ಲಿಯವರೆಗೆ ರೈತಋಣಮುಕ್ತನಾಗುವುದಕ್ಕೆ ಅವನನ್ನು ಉದ್ಧಾರ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ.

ಸನ್ಮಾನ್ಯ ಅಧ್ಯಕ್ಷರೇ:- ಇವತ್ತು ಆಡಳಿತ ಮಾಡತಕ್ಕ ಸರ್ಕಾರ ಇರಲಿ ಅಥವಾ ಆಡಳಿತ ಮಾಡಿರುವಂಥ ಸರ್ಕಾರ ಇರಲಿ, ರೈತರಿಗೆ ಕೆಲವು ಆಸೆಗಳನ್ನು ತೋರಿಸುತ್ತಾರೆ. ಈ ಆಸೆಗಳು ಕೇವಲ ಕುರ್ಚಿಗಾಗಿ ಎಂಬ ಭಾವನೆ ಬರುತ್ತದೆ. ದಯಮಾಡಿ, ಆಡಳಿತ ಮಾಡುವಂಥ ಸರ್ಕಾರ ರೈತರನ್ನು ಬಿಕ್ಷುಕರನ್ನಾಗಿ ಪರಿವರ್ತನೆ ಮಾಡಬಾರದು. ಸ್ವಾವಲಂಭಿ ರೈತನನ್ನಾಗಿ ಮಾರ್ಪಾಡು ಮಾಡಬೇಕಾಗಿದೆ. ಎಲ್ಲಿಯವರೆಗೆ ರೈತ ಪರಾವಲಂಭಿಯಾಗಿರುತ್ತಾನೆ, ಅಲ್ಲಿಯವರೆಗೆ, ಈ ರಾಜ್ಯದ, ಈ ದೇಶದ ಅಭಿವೃದ್ಧಿಯಾಗುವುದಕ್ಕೆ ಸಾಧ್ಯವಿಲ್ಲ. ಕಾರಣ ರೈತ, ಕೆಲವು ಸಮಯದಲ್ಲಿ ವಂಚಿತನಾಗುತ್ತಾನೆ, ರೈತನ ಬೆಳೆ ಪೇಟೆಗೆ ಯಾವಾಗ ಬೇಡಿಕೆ ಬರುತ್ತದೆ, ಆಗ, ಬೆಲೆ ಕುಸಿದು, ಅದರಿಂದ ವಂಚಿತನಾಗುತ್ತಾನೆ. ಎರಡನೆಯದಾಗಿ, ರೈತ ಕೊಂಡುಕೊಳ್ಳುವಂಥ ಬೀಜ, ಕ್ರಿಮಿನಾಶಕ ವಸ್ತುಗಳು, ನೀರಾವರಿ ಬಗ್ಗೆ ಕಳಪೆ ದರ್ಜೆಯ ಸಾಮಗ್ರಿಗಳನ್ನು ಒದಗಿಸುವುದರಿಂದಲೂ ರೈತ ವಂಚಿತನಾಗುತ್ತಾನೆ. ಆದಕಾರಣ, ಇವತ್ತು ರೈತರ ಈ ಸಮಸ್ಯೆಗಳನ್ನು ನಿವಾರಣೆ ಮಾಡಬೇಕಾದರೆ, ಸ್ಪಷ್ಟವಾದ ಯೋಜನೆಗಳು ಸರ್ಕಾರದಲ್ಲಿ ಇರಬೇಕು. ರೈತರಿಗಾಗಿ ಸಂಸ್ಕರಣ ಘಟಕಗಳನ್ನು ಸ್ಥಾಪನೆ ಮಾಡಬೇಕು. ರೈತನಿಗೆ ಎಲ್ಲಿಯವರೆಗೆ ನಿರ್ದಿಷ್ಟವಾದ ಬೆಲೆ ಸಿಕ್ಕುವುದಿಲ್ಲ, ಅಲ್ಲಿಯವರೆಗೆ ರೈತ ತೊಂದರೆಗಳಿಂದ ಮುಕ್ತನಾಗುವುಧಿಲ್ಲವೆಂದು ಸ್ಪಷ್ಟವಾದ ಮಾತುಗಳಲ್ಲಿ ಹೇಳುತ್ತೇನೆ. ಗ್ರಾಮಾಂತರ ಪ್ರದೇಶಗಳಲ್ಲಿ, ಕೃಷಿ ಆಧಾರಿತ ಸಂಸ್ಕರಣ ಘಟಕಗಳು ಬರಬೇಕಾಗಿದೆ. ನನ್ನ ಮತ ಕ್ಷೇತ್ರದ ಒಂದೇ ಒಂದು ಉದಾಹರಣೆಯನ್ನು ಹೇಳುವುದಾದರೆ, ದಿವಂಗತ ಕೆ.ಹೆಚ್.ಪಾಟೀಲರ ಆಶೀರ್ವಾದದಿಂದ ನಂದಿ ಸಕ್ಕರೆ ಕಾರ್ಖಾನೆ ಸ್ಥಾಪಿತವಾಯಿತು. ಆಗ 20 ಸಾವಿರ ರೂಪಾಯಿಗಳಿಗೆ ಒಂದು ಎಕರೆ ಜಮೀನು ಇದ್ದುದು, ಈಗ ಒಂದು -ಒಂದುವರೆ ಲಕ್ಷ ರೂಪಾಯಿಗಳಿಗೆ ಮಾರ್ಪಾಟಾಗಿದೆ. ಇವತ್ತು ರೈತನ ಆದಾಯ 7-8 ಪಟ್ಟು ಜಾಸ್ತಿಯಾಗಿದೆ, ಪ್ರತಿಯೊಬ್ಬರೂ ಕಬ್ಬು ಬೆಳೆಯುವುದಕ್ಕೆ ಪ್ರಾರಂಭ ಮಾಡಿದ್ದಾರೆ. ಈ ಕಾರ್ಖಾನೆಗೆ ಸರ್ಕಾರದ, ಬಂಡವಾಳ ಎಷ್ಟೆಂದರೆ, ಕೇವಲ 7ಕೋಟಿ ರೂಪಾಯಿಗಳು ಮಾತ್ರ ಈ ನಂದಿ ಕಾರ್ಖಾನೆಯಿಂದ ಸರ್ಕಾರಕ್ಕೆ, ಒಂದು ವರ್ಷಕ್ಕೆ ಸುಮಾರು 5 ಕೋಟಿ ರೂಪಾಯಿಗಳಿಗಿಂತ ಹೆಚ್ಚು ತೆರಿಗೆ ಬರುತ್ತಿದೆ. ಇದಲ್ಲದೆ, ಸೇಲ್ಸ್‌ಟಾಕ್ಸ್ ಅವಲಂಬಿತ ವ್ಯಾಪಾರಸ್ಥರ ಮುಖಾಂತರವೂ ಟ್ಯಾಕ್ಸ್ ಬರುತ್ತದೆ.

ಆದ್ದರಿಂದ, ರೈತರ ಬಗ್ಗೆ ಸರ್ಕಾರಕ್ಕೆ ನಿಜವಾದ ಕಾಳಜಿ ಇದ್ದರೆ, ಪ್ರತಿಯೊಂದು ತಾಲ್ಲೂಕಿನಲ್ಲೂ, ಅಲ್ಲಿ ಏನೇನು ಬೆಳೆ ಬೆಳೆಯುತ್ತಾರೆ, ಅದಕ್ಕೆ ಸಂಬಂಧಿಸಿದ ಸಂಸ್ಕರಣ ಘಟಕಗಳನ್ನು ಸ್ಥಾಪನೆ ಮಾಡಬೇಕು. ಅವು ಸರ್ಕಾರದಿಂದ ಇರಬಹುದು ಅಥವಾ ಖಾಸಗಿ ರಂಗದಲ್ಲಿರಬಹುದು. ಇವುಗಳನ್ನು ಸ್ಥಾಪನೆ ಮಾಡಿದರೆ, ರೈತ ಉದ್ಧಾರವಾಗುತ್ತಾನೆ ಮತ್ತು ಬಡ ಕುಟುಂಬಗಳಿಗೆ ಉದ್ಯೋಗ ಅವಕಾಶಗಳೂ ಸಿಗುತ್ತವೆ. ಬಿಜಾಪುರ ಜಿಲ್ಲೆಯೊಂದರಲ್ಲೇ 10-12 ಸಂಸ್ಕರಣ ಘಟಕಗಳನ್ನು ಸ್ಥಾಪನೆ ಮಾಡುವುದಕ್ಕೆ ಸಾಧ್ಯವಿದೆ ಎಂದು ಹೇಳುತ್ತೇನೆ. ಕಳೆದ ಹಲವಾರು ವರ್ಷಗಳಿಂದ, ಅದು ಯಾವುದೇ ಸರ್ಕಾರವಿರಲಿ, ಕೇವಲ ಅನುಕಂಪದ ಮಾತುಗಳನ್ನು ಕೇಳುತ್ತಿದ್ದೇವೆಯೇ ಹೊರತು, ಗಂಭೀರವಾದ ಚಿಂತನೆ ಏನೂ ಇಲ್ಲ. ಈಗ ಮಾನ್ಯ ದೇವೇಗೌಡರು ಮುಖ್ಯಮಂತ್ರಿಯಾಗಿದ್ದಾರೆ. ಇವರು ರೈತರ ಬಗ್ಗೆ ಕಳಕಳಿ ಇರತಕ್ಕಂಥ ವ್ಯಕ್ತಿ. ಈಗಲಾದರೂ ಪ್ರತಿಯೊಂದು ತಾಲ್ಲೂಕಿಗೂ ಇಂತಹ ಘಟಕಗಳನ್ನು ಸ್ಥಾಪಿಸಿ, ರೈತರಿಗೆ ನಿರ್ದಿಷ್ಟವಾದ ಬೆಲೆ ಸಿಗುವಂತೆ ಮಾಡಬೇಕು. ಇನ್ನು ಬಿಜಾಪುರ ಜಿಲ್ಲೆಯ ಆಲಮಟ್ಟಿ ಯೋಜನೆಯಲ್ಲಿ, ಸಾವಿರಾರು ಕುಟುಂಬಗಳು ನೀರಿನಲ್ಲಿ ಮುಳಗಡೆಯಾಗಿವೆ. ಅವರಿಗೆ ಪುನರ್ ವಸತಿ ಕಲ್ಪಿಸಿಕೊಟಿಲ್ಲ. ಈ ಆಲಮಟ್ಟಿ ಯೋಜನೆಯನ್ನು ಮುಕ್ತಾಯ ಮಾಡಿ, ಕೆಳಗಡೆ ಜನರಿಗೆ ನೀರು ಕೊಟ್ಟರೆ, ಸರ್ಕಾರದ ಕೆಲಸ ಬಗೆಹರಿದಂತಾಗದು. ಅಲ್ಲಿ ಗಂಭೀರವಾದ ಪುನರ್ ವಸತಿ ಸಮಸ್ಯೆ ಇದೆ. ಇದರ ಬಗ್ಗೆ ಯಾವುದೇ ಚಿಂತನೆ ಇಲ್ಲ. ಆದುದರಿಂದ, ದಯಮಾಡಿ, ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, 8 ಜನರಿಗೆ ಅನ್ಯಾಯವಾಗಿದೆ, ಸರಿಯಾದ ಪರಿಹಾರ ಸಿಕ್ಕಿಲ್ಲ, ಪುನರ್ ವಸತಿ ಕೇಂದ್ರ ಇಲ್ಲ ಮತ್ತು ಸರ್ಕಾರದಲ್ಲಿ ಯಾವುದೇ ಸ್ಪಷ್ಟವಾದ ನೀತಿ ಇಲ್ಲ. ಆದ್ದರಿಂದ, ಸದನದ ಮುಖಾಂತರ ಕೇಳಿಕೊಳ್ಳುವುದೇನೆಂದರೆ, ಇದರ ಬಗ್ಗೆ ಒಂದು ಸದನದ ಸಮಿತಿ ಮಾಡಬೇಕು. ಯೋಗ್ಯವಾದ ಪರಿಹಾರ ನೀತಿ ಬೇಕಾಗಿದೆ, ಮತ್ತು ಪುನರ್ ವಸತಿ ಕೇಂದ್ರ ಆಗಬೇಕಾಗಿದೆ. ಇವತ್ತು ಅಲ್ಲಿಯ ಜನ ಮಾಳುಗಡೆಯಾಗಿದ್ದಾರೆ. ಅವರು ನಿರಾಶ್ರಿತರಲ್ಲ, ಅಥವಾ ಬಿಕ್ಷುಕರೂ ಅಲ್ಲ. ಒಂದು ಮಾತನ್ನು ತಾವು ನೆನಪಿನಲ್ಲಿಟ್ಟುಕೊಳ್ಳಬೇಕು. ಇವತ್ತು ಇಲ್ಲಿ ಏನು ರೈತರಿಗೆ ಅನ್ಯಾಯವಾಗಿದೆ, ಮುಳುಗಡೆಯಾಗಿದೆ ಅದನ್ನು ಸರ್ಕಾರ ಸರಿಪಡಿಸಬೇಕಾಗಿದೆ. ಈ ದಿಸೆಯಲ್ಲಿ ಸರ್ಕಾರ ಕಾರ್ಯಕ್ರಮ ಹಾಕಿಕೊಂಡು ತ್ವರಿತಗತಿಯಲ್ಲಿ ಸಹಾಯಕ್ಕೆ ನಿಲ್ಲಬೇಕಾಗಿದೆ. ಅಲ್ಲಿರುವ ಜನರು ಸಂಕಷ್ಟದಲ್ಲಿದ್ದಾರೆ, ಯಾವುದೇ ಪರಿಹಾರ ಸಿಗದೇ ತೊಂದರೆಯಾಗಿದೆ. ಸರ್ಕಾರದ ಇದೇ ನೀತಿ ಮುಂದುವರೆದರೆ ಆಲಮಟ್ಟಿಯಲ್ಲಿ ಆಗುತ್ತಿರುವ ಕೆಲಸವನ್ನು ಸ್ಥಗಿತ ಮಾಡಬೇಕೆಂಬ ವಿಚಾರ ಜನರಿಗಿದೆ. ಇದನ್ನು ಸ್ಥಗಿತ ಮಾಡಬಾರದು, ರೈತರಿಗೆ ಯೋಗ್ಯವಾದ ಪರಿಹಾರ ಕೊಡಬೇಕು, ಸರಿಯಾದ ಪುನರ್ ವಸತಿ ಕೇಂದ್ರಗಳನ್ನು ಸ್ಥಾಪನೆ ಮಾಡಬೇಕೆಂದು ಕೇಳಿಕೊಂಡು, ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತೇನೆ.

ಶ್ರೀ ಎ.ರಾಮದಾಸ್(ಕೃಷ್ಣರಾಜು): ಸನ್ಮಾನ್ಯಾ ಸಭಾಧ್ಯಕ್ಷರೇ, ಜನತಾ ದಳ ಸರ್ಕಾರ ಬಂದಾಗ, ಕರ್ನಾಟಕದ ಎಲ್ಲಾ ಯುವಕರಲ್ಲಿಯೂ ಒಂದು ಆಶಾಭಾವನೆ ಮೂಡಿತ್ತು.

ಒಂದು ವರ್ಷದಲ್ಲಿ ಒಂದು ಲಕ್ಷ ಜನರನ್ನು ಉದ್ಯೋಗಸ್ಥರನ್ನಾಗಿ ಮಾಡುವ ಯೋಜನೆ ತರುತ್ತೇವೆಂದು ಹೇಳಿದ್ದರು ಆದರೆ ಇವರ ನೂರು ದಿವಸಗಳ ಆಡಳಿತವನ್ನು ನೋಡಿದರೆ, ಪಾರಂಭದಲ್ಲಿಯೇ ಎಲ್ಲರ ಮನಸ್ಸಿಗೆ ಆಘಾತವನ್ನುಂಟು ಮಾಡುವ ಪರಿಸ್ಥಿತಿ ಬಂದಿದೆ. ಇದರ ಆಡಳಿತ, ಇಡೀ ಕರ್ನಾಟಕದ ಯುವಜನರಲ್ಲಿ ನೋವುಂಟುಮಾಡಿದೆ. ಇವತ್ತು ರಾಜ್ಯದ ಭವಿಷ್ಯಕ್ಕೆ ನಾವು ಯುವ ಶಕ್ತಿಯನ್ನು ಅಭಿವೃದ್ಧಿ ಮಾಡುವಂಥ ದಿಸೆಯಲ್ಲಿ ಸರಿಯಾದ ಯೋಜನೆಗಳನ್ನು, ಕಾರ್ಯಕ್ರಮಗಳನ್ನು ರೂಪಿಸಬೇಕು. ಈ ಯುವಜನರಿಗೆ ಸರ್ಕಾರ ಕೆಲಸವನ್ನು ಕೊಡಬೇಕು. ಮತ್ತು ಈ ಯುವಶಕ್ತಿಯು, ಸರ್ಕಾರದಲ್ಲಿರುವಂಥ ಆಡಳಿತ ವ್ಯವಸ್ಥೆ ಏನಿದೆ, ಅದರ ಸದುಪಯೋಗ ಮಾಡಿಕೊಳ್ಳಬೇಕಾಗಿದೆ. ಈ ದಿಸೆಯಲ್ಲಿ, ವಿದ್ಯಾವಂತ ಯುವಕರನ್ನು ವೃತ್ತಿಪರರನ್ನಾಗಿ ಮಾಡಿ, ಸ್ವಂತ ಉದ್ಯೋಗಕ್ಕೆ ಅವಕಾಶ ಮಾಡಿಕೊಡಬೇಕು. ಎರಡನೆಯದಾಗಿ, ಈ ರಾಜ್ಯಪಾಲರ ಭಾಷಣವನ್ನು ನೋಡಿದಾಗ, ಇದರಲ್ಲಿ ರಾಜ್ಯದ ಪ್ರಗತಿಯ ಕಡೆಗೆ ಯಾವ ಸೂಚನೆಯೂ ಕಾಣುತ್ತಿಲ್ಲ. ಸರ್ಕಾರ ಇಂತಹ ಯೋಜನೆಗಳನ್ನು ಮಾಡುತ್ತದೆ, ಅಥವಾ ಇಂಥಿಂಥ ಯೋಜನೆಗಳನ್ನು ಕಾರ್ಯರೂಪಕ್ಕೆ ತರುತ್ತದೆ ಎಂಬ ಯಾವನಿರ್ದಿಷ್ಟ ಅಂಶಗಳೂ ಇದರಲ್ಲಿ ಕಾಣುತ್ತಾ ಇಲ್ಲ. ಈ ಸರ್ಕಾರ ಬಂದನಂತರ, ಆಡಳಿತದ ಮೇಲೆ ಯಾವ ರೀತಿ ನಿಯಂತ್ರಣ ಕಡಿಮೆಯಾಗಿದೆ ಎನ್ನುವುದನ್ನು ಒಂದೆರಡು ವಿಚಾರಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಈಗಾಗಲೇ ಮಾನ್ಯ ಕಂದಾಯ ಸಚಿವರ ಗಮನಕ್ಕೂ ಈ ವಿಷಯವನ್ನು ತಂದಿರುತ್ತೇನೆ. ಮೈಸೂರು ಜಿಲ್ಲೆಯ ಒಬ್ಬ ತಹಶೀಲ್ದಾರ್‌ರವರು ಸುಳ್ಳು ಸರ್ಟಿಫಿಕೇಟ್ ಪಡೆದು, ಪ್ರಮೋಷನ್ ಪಡೆದಂಥ ದಾಖಲೆಯನ್ನು ಈಗಾಗಲೇ ಕೊಟ್ಟಿದ್ದೇನೆ. ಇದರ ಬಗ್ಗೆ ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಎರಡನೆಯದು ಸರ್ಕಾರದ ಸುತ್ತೋಲೆಗಳಿಗೆ ಎಷ್ಟು ಬೆಲೆ ಇದೆಯೆಂಬ ಬಗ್ಗೆ ಹೇಳುವುದಾದರೆ, ಸ್ಥಳೀಯ ಆಡಳಿತದಲ್ಲಿ ಕೆಲಸ ಮಾಡತಕ್ಕಂಥ, ಟೈಮ್ ಸ್ಕೇಲ್‌ನಲ್ಲಿ ಯಾರು ಗ್ರಾಜುಯೇಟ್ಸ್ ಕೆಲಸ ಮಾಡುತ್ತಿದ್ದಾರೆ ಅವರಿಗೆ ಪ್ರಮೋಷನ್ ಕೊಡಬಾರದೆಂದು ಸರ್ಕಾರದ ಸುತ್ತೋಲೆ ಇದೆ. ಈ ಸರ್ಕಾರದ ಸುತ್ತೋಲೆಗೆ ಎಷ್ಟು ಬೆಲೆ ಇದೆಯೆಂದು ಹೇಳಿದರೆ, ಈ ಜನತಾ ದಳ ಸರ್ಕಾರ ಬಂದನಂತರ, ಮೈಸೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ, ಈ ಕಾನೂನನ್ನು ಮೀರಿ, ಗುರುಪಾದಸ್ವಾಮಿ ಎಂಬುವವರನ್ನು ಇಂಜಿನಿಯರ್ ಆಗಿ ಖಾಯಂ ಮಾಡುವುದರ ಜೊತೆಗೆ, ಎಕ್ಸಿಕ್ಯೂಟಿವ್ ಇಂಜಿನಿಯರ್ ಆಗಿ ಪ್ರಮೋಷನ್ ಕೊಟ್ಟಿದ್ದಾರೆ. ಇವರ ಮೇಲೆ, ಸರ್ಕಾರದ ನಿಯಂತ್ರಣ ಎಷ್ಟಿದೆ ಎಂಬುದನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಅಲ್ಲಿ ನಡೆಯತಕ್ಕ ಅವ್ಯವಹಾರಗಳನ್ನು ಈಗಾಗಲೇ ಪತ್ರಿಕೆಗಳ ಮುಖಾಂತರ ನೋಡುತ್ತಿದ್ದೇವೆ. ಮತ್ತು ಯಾವರೀತಿಯಲ್ಲಿ ಸರ್ಕಾರದ ಹಣ ಸೋರಿ ಹೋಗುತ್ತಿದೆ ಎಂಬುದನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನಮ್ಮ ರಾಜ್ಯದಲ್ಲಿ ಎನ್.ಜಿ.ಇ.ಎಫ್.ನಲ್ಲಿ ಒಂದು ಟ್ರಾನ್ಸ್‌ಫಾರ್ಮ್‌ರಿಗೆ ಕೇವಲ ಒಂದು ಲಕ್ಷ, ಹದಿನೆಂಟು ಸಾವಿರ ರೂಪಾಯಿ ಆಗುತ್ತದೆ. ಸೂಪರಿಂಟೆಂಡೆಂಟ್ ಇಂಜಿನಿಯವರು, ಕೇಲ್ಯಾನ್ ಸಂಸ್ಥೆಯಿಂದ ಟ್ರಾನ್ಸ್‌ಫಾರ್ಮ್‌ರ್ ತೆಗೆದುಕೊಳ್ಳ ಬಾರದೆಂದು ಪತ್ರದ ಮುಖೇನ ತಿಳಿಸಿದ್ದರೂ ಕೂಡ ಆ ಸಂಸ್ಥೆಯಲ್ಲಿ

ಒಪ್ಪಂದ ಮಾಡಿಕೊಂಡು 64 ಟ್ರಾನ್ಸ್‌ಫಾರ್ಮ್‌ರ್‌ಗಳನ್ನು ಪಡೆದು ಸುಮಾರು 18 ಲಕ್ಷಕ್ಕೂ ಹೆಚ್ಚು ಹಣವನ್ನು ಕೊಟ್ಟಿರತಕ್ಕಂಥಾದ್ದು ಎಷ್ಟು ಸಮಂಜಸ ಎಂಬುದನ್ನು ತಮಗೆ ನಿದರ್ಶನವಾಗಿ ಹೇಳುತ್ತಿದ್ದೇನೆ. ಅಂದರೆ ಇವರಿಗೆ ಎಷ್ಟರಮಟ್ಟಿನ ಕಾಳಜಿ ಇದೆ ಎಂಬುದನ್ನು ಯೋಚನೆ ಮಾಡಬೇಕಾಗಿದೆ. ಇನ್ನೊಂದು ಸರ್ಕಾರ ಯೋಚನೆ ಮಾಡಬೇಕಾದ ವಿಚಾರವೆಂದರೆ ಮೈಸೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ಅಲ್ಲಿಯ ಕಾರ್ಮಿಕರು ಮತ್ತು ಅಲ್ಲಿರುವಂಥ ನೌಕರರ ಸುಮಾರು 62 ಸಾವಿರ ಅರ್ಜಿಗಳು ನಿವೇಶನಗಳಿಗಾಗಿ ಬಾಕಿ ಉಳಿದಿದೆ. ಇವುಗಳಲ್ಲಿ ಸುಮಾರು 16 ಸಾವಿರ ನಿವೇಶನಗಳ ವಿಚಾರ ನ್ಯಾಯಾಲಯದಲ್ಲಿದೆ. ಇವರಲ್ಲಿ ಸುಮಾರು 6 ಕೋಟಿ ರೂಪಾಯಿಗಳ ಭೂಮಿಯನ್ನು ಮನೆ ನಿವೇಶನಗಳನ್ನಾಗಿ ಹಂಚಿಕೊಡುವುದಕ್ಕೆ ನಿರ್ಧಾರ ಮಾಡಿದ್ದಾರೆ. ಉಳಿದ ಭೂಮಿಯನ್ನು ಅಲ್ಲಿರುವಂಥ ನೌಕರರು ಮತ್ತು ಕಾರ್ಮಿಕರು ನಿವೇಶನಗಳಿಗೆ ಹಂಚಿಕೊಳ್ಳುವಂಥ ವ್ಯವಸ್ಥೆಯನ್ನು ಮಾಡಿಕೊಂಡಿದ್ದಾರೆ. ಕಳೆದ ತಿಂಗಳು ಇದನ್ನು ಸರ್ಕಾರ ಮುಂದೆ ಇಟ್ಟಿರುತ್ತೇನೆ. ಇದನ್ನುನೋಡಿದರೆ, ಈ ಸರ್ಕಾರ ಆಡಳಿತದ ಬಗ್ಗೆ ಎಷ್ಟು ಮಟ್ಟಿನ ನಿಯಂತ್ರಣ ಹೊಂದಿದೆ ಎನ್ನುವ ವಿಚಾರವನ್ನು ಈ ಸದನದ ಮುಂದೆ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಈ ಸಂದರ್ಭದಲ್ಲಿ ಒಂದು ವಿಚಾರವನ್ನು ಹೇಳಬೇಕಾಗಿದೆ. ಸನ್ಮಾನ್ಯ ಸಭಾನಾಯಕರು ಈ ಹಿಂದೆಯೇ ಒಂದು ವಿಚಾರವನ್ನು ಹೇಳಿದರು. ಈಗ ನಮ್ಮ ಸರ್ಕಾರ ಬಂದಿದೆ, ಮುಂದೆ ಸಾಮಾನ್ಯ ಬರುವ ವರ್ಗಾವಣೆಗೆ ಮುಂಚೆ ಯಾವುದೇ ವರ್ಗಾವಣೆಯನ್ನು ಮಾಡುವುದಿಲ್ಲ ಮಾಡಬಾರದು ಎಂದು ಹೇಳಿದ್ದಾರೆ. ಆದರೆ, ಸೋಜಿಗದ ವಿಚಾರವೆಂದರೆ, ಜನತಾ ದಳ ಸರ್ಕಾರ ಬಂದನಂತರ, ಮೈಸೂರಿನಲ್ಲಿ 85 ಜನ ಪ್ರಾಥಮಿಕ ಶಾಲಾ ಉಪಾಧ್ಯಾಯರನ್ನು ವರ್ಗಾವಣೆ ಮಾಡಿದ್ದಾರೆ. ಇವರನ್ನು ಯಾವ ಆದೇಶದ ಮೇಲೆ ಮಾಡಿದ್ದಾರೆ? ಮೈಸೂರು ನಗರದಲ್ಲಿರುವಂಥ ಶಿಕ್ಷಕರ ವಿಚಾರದಲ್ಲಿ, ಜಿಲ್ಲಾ ಅಬಿವೃದ್ಧಿ ಮಂಡಳಿ ಸಭೆಯಲ್ಲೂ ಚರ್ಚೆ ಮಾಡಿದ್ದೇವೆ. ಆದರೂ ಕೂಡ, ಮೈಸೂರು ನಗರದಿಂದ, ಗ್ರಾಮಾಂತರ ಪ್ರದೇಶಕ್ಕೆ 21 ಜನ ಶಿಕ್ಷಕರನ್ನು ವರ್ಗಾವಣೆ ಮಾಡಿದ್ದಾರೆ. ಇದನ್ನು ನೋಡಿದಾಗ, ಸರ್ಕಾರದಿಂದ ಬಂದ ಸುತ್ತೋಲೆ ಏನಿದೆ,

ಅಧಿಕಾರಿಗಳು ಯಾವರೀತಿ ಅದನ್ನು ಪಾಲಿಸಿದ್ದಾರೆಂಬ ಸತ್ಯ ಗೊತ್ತಾಗುತ್ತದೆ. ಈ ಸರ್ಕಾರಕ್ಕೆ, ಆಡಳಿತವರ್ಗದಲ್ಲಿರುವ ಸರ್ಕಾರಿ ಅಧಿಕಾರಿಗಳ ಮೇಲೆ ಇರುವಂಥ ನಿಯಂತ್ರಣ ಎಷ್ಟಿದೆ ಎನ್ನುವ ವಿಚಾರ ಗೊತ್ತಾಗುತ್ತದೆ. ಇನ್ನು ಸರ್ಕಾರಿ ವೈದ್ಯರ ವಿಚಾರದಲ್ಲಿ ಹೇಳುವುದಾದರೆ ಸರ್ಕಾರ, ಇವರಿಗೆ ಕೈತುಂಬ ಸಂಬಳ ಕೊಟ್ಟು, ನೇಮಕ ಮಾಡುತ್ತಾರೆ. ಇಂಥಹ ವೈದ್ಯರು ಸರ್ಕಾರಿ, ವೈದ್ಯರಾಗಿ ಕೆಲಸ ಮಾಡಬೇಕೇ ಹೊರತು, ಖಾಸಗಿ ಪ್ರಾಕ್ಟೀಸ್ ಮಾಡಬಾರದು. ದಯಮಾಡಿ, ಈ ಪ್ರೈವೇಟ್ ಪ್ರಾಕ್ಟೀಸ್ ಮಾಡುವುದನ್ನು ನಿಲ್ಲಿಸಲು ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳತಕ್ಕ ಅವಶ್ಯಕತೆ ಇದೆ. ಇನ್ನು ವಯಸ್ಕರ ಶಿಕ್ಷಣ ಸಂಸ್ಥೆಗಳನ್ನು ಯಾವುದಕ್ಕೋಸ್ಕರ ಇಟ್ಟುಕೊಂಡಿದ್ದೀರಿ.

ಇದೊಂದು ಬಿಳಿ ಆನೆ ಸಾಕತಕ್ಕ ವಿಚಾರವಾಗಿದೆ. ಇದರಿಂದ ಯಾವುದೇ ಉಪಯೋಗವಿಲ್ಲ. ಇದನ್ನು ಸರ್ಕಾರ ಮನದಟ್ಟು ಮಾಡಿಕೊಂಡು ಇದನ್ನು ರದ್ದು ಮಾಡುವುದು ಸೂಕ್ತವೆಂದು ಭಾವಿಸುತ್ತೇನೆ. ದಯಮಾಡಿ, ಇಂತಹ ವಿಚಾರಗಳಿಗೆ ಹಣ ಪೋಲು ಮಾಡುವುದನ್ನು ತಪ್ಪಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಕೊನೆಯದಾಗಿ ಒಂದು ವಿಚಾರವನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನಮ್ಮ ಶಿಕ್ಷಣ ನೀತಿ ವಿಚಾರದಲ್ಲಿ ಹೇಳುವುದಾದರೆ, ಇನ್ನು ಮುಂದೆ, ಎಲ್ಲಾ ಅನುಧಾನಿತ ಶಿಕ್ಷಣ ಸಂಸ್ಥೆಗಳಿಗೆ, ಸರ್ಕಾರದಿಂದ ಕೊಡುವ ಅನುಧಾನವನ್ನು ರದ್ದು ಮಾಡಬೇಕೆಂಬ ವಿಚಾರ ಸರ್ಕಾರದ ಮನದಲ್ಲಿದೆ ಎಂಬುದು ತಿಳಿದು ಬಂದಿದೆ. ಡಯಮಾಡಿ, ಈ ಶಾಲೆಗಳಿಗೆ ಅನುದಾನವನ್ನು ರದ್ದು ಮಾಡಬಾರದು ಮತ್ತೇ ರಾಜ್ಯಪಾಲರ ಭಾಷಣದಲ್ಲಿ, ಹೊಸ ಶಾಲೆಗಳನ್ನು ಪ್ರಾರಂಭ ಮಾಡುವ ಬಗ್ಗೆ ಎಲ್ಲಿಯೂ ಉಲ್ಲೇಖ ಕಾಣುತ್ತಿಲ್ಲ. ಇನ್ನು ಸಾರಿಗೆ ವಿಚಾರದಲ್ಲಿ ಒಂದು ಮಾತನ್ನು ಹೇಳಬೇಕಾಗಿದೆ. ಸುಮಾರು ದಶಕಗಳಿಂದ, ಸರ್ಕಾರದ ಸಾರಿಗೆ ವ್ಯವಸ್ಥೆಯಲ್ಲಿ ನಾವು ನಷ್ಟವನ್ನು ಕಾಣುತ್ತಿದ್ದೇವೆ. ಈ ನಷ್ಟವನ್ನು ಸರಿದೂಗಿಸಬೇಕಾದರೆ, ವಿದ್ಯಾವಂತ ಯುವಕರಿಗೆ ಖಾಸಗಿಯಾಗಿ ಸಾರಿಗೆ ವ್ಯವಸ್ಥೆಗೆ ಅವಕಾಶ ಮಾಡಿಕೊಡಬೇಕು. ಇದರಿಂದ ಒಂದು ಲಕ್ಷ ಜನರಿಗೆ ಉದ್ಯೋಗಾವಕಾಶವೂ ಸಿಕ್ಕಂತಾಗುತ್ತದೆ. ಮತ್ತು ವಿದ್ಯಾವಂತ್ತ ಯುವಕರನ್ನು ವೃತ್ತಿಪರರನ್ನಾಗಿಯೂ ಮಾಡಿದಂತಾಗುತ್ತದೆ. ಈ ರೀತಿ ವಿದ್ಯಾವಂತರಿಗೆ ಒಬ್ಬರಿಗೆ ಒಂದು ಪರ್ಮಿಟ್ ಕೊಡುವ ಮಾಖಾಂತರ, ಅವರು ಜೀವನ ನಡೆಸುವುದಕ್ಕೆ ಅನುಕೂಲ ಮಾಡಿಕೊಡಬೇಕು. ಇನ್ನು ಕೈಗಾರಿಕೆ ವಿಚಾರದಲ್ಲಿ ಹೇಳುವುದಾದರೆ, ಇತ್ತೀಚೆಗೆ, ಅನೇಕ ಕೈಗಾರಿಕೆಗಳು ಸಿಕ್ ಇಂಡಸ್ಟ್ರೀಗಳಾಗುತ್ತಿವೆ. ಈ ದಿಸೆಯಲ್ಲಿ ಸರ್ಕಾರ ಚಿಂತನೆ ಮಾಡಿ, ಒಂದು ಹೊಸ ಯೋಜನೆಯನ್ನು ಮಾಡಬೇಕಾಗಿದೆ.

ಇದರ ಜೊತೆಗೆ ಒಂದು ಕಾರ್ಯಕ್ರಮವನ್ನು ಹಾಕಿಕೊಳ್ಳತಕ್ಕಂಥಾದ್ದು ಅತ್ಯಗತ್ಯವೆಂದು ನನಗನ್ನಿಸುತ್ತದೆ. ಇವತ್ತಿನ ಕಾನೂನಿನ ಅಡಿಯಲ್ಲಿ ಯಾವುದೇ ಒಬ್ಬ ಉದ್ಯೋಗಸ್ಥನನ್ನು ನಿಯಂತ್ರಣದಲ್ಲಿ ಇಟ್ಟುಕೊಳ್ಳುವಂಥ ವ್ಯವಸ್ಥೆ ಇಲ್ಲ. ಹೊರರಾಜ್ಯದಿಂದ ಬಂದಿರತಕ್ಕವನು ಇಲ್ಲಿ ತನ್ನದೇ ಆದ ಒಂದು ಕೈಗಾರಿಕೆಯನ್ನು ಪ್ರಾರಂಭಮಾಡಿ, ಇಲ್ಲಿಯ ಎಲ್ಲಾ ಸವಲತ್ತುಗಳನ್ನೂ ಕೂಡ ಉಪಯೋಗಿಸಿಕೊಂಡು ಕೊನೆಗೊಂದು ದಿನ ಆತ ಬೀಗ ಹಾಕಿಕೊಂಡು ಹೋದಾಗ ಆತನನ್ನು ಏನೂ ಮಾಡಲಾಗದ ಪರಿಸ್ಥಿತಿ ಸರ್ಕಾರದಲ್ಲಿದೆ. ಆದ್ದರಿಂದ ಇಂತಹ ಸಂದರ್ಭದಲ್ಲಿ ಸೂಕ್ತವಾದ ಕಾನೂನನ್ನು ಇಟ್ಟುಕೊಂಡಾಗ ಮಾತ್ರ ಇಂತಹವರ ಮೇಲೆ ರಾಜ್ಯಸರ್ಕಾರದಿಂದ ನಿಯಂತ್ರಣವನ್ನು ಇಟ್ಟುಕೊಳ್ಳಬಹುದು ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಕೊನೆಯದಾಗಿ ಆಹಾರ ಇಲಾಖೆಗೆ ಸಂಬಂಧಪಟ್ಟಂತೆ ಸಂರಕ್ಷಣೆ ಮತ್ತೇ ವಿತರಣೆಯಲ್ಲಿ ನಡೆಯತಕ್ಕಂಥ ವ್ಯವಹಾರಗಳನ್ನು ನೋಡಿದಾಗ ಕೆಎಸ್ಎಫ್‌ಸಿಃ ಟಿಎಪಿಸಿಎಂಎಸ್ ಈ ವ್ಯವಸ್ಥೆಗಳಿಂದ ಸರ್ಕಾರದ ಬೊಕ್ಕಸ ಹಾಳಾಗುತ್ತಿದೆ. ಈ ದಿಸೆಯಲ್ಲಿ ಇಂತಹ ಸಂಸ್ಥೆಗಳನ್ನು ಬಿಟ್ಟು, ಈ ರೇಷನ್ ಸಿಸ್ಟಮ್‌ನಿಂದ ಕೆಲಮಟ್ಟಿಗೆ ಒಳ್ಳೆಯದಾಗಿದೆ. ಆದರೆ ನಮ್ಮ ರಾಜ್ಯದಿಂದ ಭತ್ತವನ್ನು ಹೊರಗಡೆಗೆ ಸಾಗಿಸತಕ್ಕಂಥ ವಿಚಾರ ಏನಿದೆ, ಅದನ್ನು ನಿಲ್ಲಿಸಿ

ಆ ಭತ್ತವನ್ನು ನಮ್ಮಲ್ಲೇ ಇರುವಂಥ ಮಿಲ್‌ಗಳಲ್ಲಿ ಅಕ್ಕಿ ಮಾಡಿಸಲು ಹೆಚ್ಚು ಅವಕಾಶವನ್ನು ಮಾಡಿಕೊಟ್ಟಾಗ ಇದರಿಂದ ಬೆಲೆಯನ್ನು ನಿಯಂತ್ರಣದಲ್ಲಿ ಇಟ್ಟುಕೊಳ್ಳಬಹುದು ಇಷ್ಟುಮಾತ್ರವಲ್ಲದೆ ಇದರಿಂದಾಗಿ ಹೆಚ್ಚು ಜನರಿಗೆ ಉದ್ಯೋಗವನ್ನು ಕೊಡಬಹುದಾಗಿದೆ.

ಅಧ್ಯಕ್ಷರು : ಇನ್ನೆಷ್ಟು ಕೊನೆ? ಸಮಯ ಆಗುತ್ತಿದೆ ನಿಮ್ಮಲ್ಲೇ ಅನೇಕರಿಗೆ ಮಾತನಾಡುವುದಕ್ಕೆ ಅವಕಾಶಕೊಡುವುದಕ್ಕೆ ಆಗಿಲ್ಲ.

ಶ್ರೀ ಎ.ರಾಮದಾಸ್ : ಒಟ್ಟಿನಲ್ಲಿ ಇಡೀ ರಾಜ್ಯಪಾಲರ ಭಾಷಣದ ಸಾರಾಂಶವನ್ನು ಎಲ್ಲಾ ರೀತಿಯಿಂದ ಅಳೆದು ನೋಡಿದಾಗ ನನಗನ್ನಿಸುತ್ತದೆ, ಯಾವುದೇ ಒಂದು ಇಲಾಖೆಯಲ್ಲಿ ಅಭಿವೃದ್ಧಿಕಾರ್ಯ ನಡೆದಾಗ ಏಷಿಯಾ ಡೆವಲಪ್‌ಮೆಂಟ್ ಬ್ಯಾಂಕ್ ಇರಬಹುದು ಅಥವಾ ಬೇರೆ ಯಾವುದೇ ಸಂಸ್ಥೆಗಳ ಮೂಲಕ, ಹೊರದೇಶಗಳಿಂದ ಬರತಕ್ಕಂಥ ಹಣವನ್ನು ಇಟ್ಟುಕೊಂಡು ಯೋಜನೆಯನ್ನು ಏನು ಮಾಡುತ್ತೇವೆ, ಹೀಗೆ ಮಾಡಿಕೊಂಡು ಹೆಚ್ಚು ಪರಿಣಾಮ ಅಥವಾ ಲಾಭವನ್ನು ನಿರೀಕ್ಷೆ ಮಾಡಿದಾಗ ಅದು ಕನ್ನಡಿಯೊಳಗಿನ ಗಂಟು ಆಗುವ ಸಾಧ್ಯತೆ ಇಲ್ಲದಿಲ್ಲ. ಗ್ರಾಮಾಂತರ ಪ್ರದೇಶಗಳ ಅಭಿವೃದ್ಧಿಯನ್ನು ಹೆಚ್ಚು ಗಮನದಲಿಟ್ಟುಕೊಂಡು ಯೋಜನೆಗಳನ್ನು ರೂಪಿಸಿದಲ್ಲಿ ಹೆಚ್ಚು ಪ್ರಯೋಜನವಾಗುತ್ತದೆ ಎಂದು ಹೇಳುತ್ತಾ ಇದು ನಾನು ಕೇವಲ ವಿರೋಧಪಕ್ಷದವರಾಗಿ ಹೇಳತಕ್ಕ ವಿಚಾರ ಅಲ್ಲ. ಜನ ಹೆಚ್ಚು ನಿರೀಕ್ಷಣೆ ಮಾಡತಕ್ಕಂಥ ವಿಚಾರದಲ್ಲಿ ಯುವಜನಾಂಗ ಏನು ಇವತ್ತು ನಿರೀಕ್ಷಣೆ ಮಾಡುತ್ತಿದೆ, ಆ ದಿಸೆಯಲ್ಲಿ ಹೆಚ್ಚು ಗಮನಕೊಡುವುದು ಅಗತ್ಯವೆಂದು ಹೇಳಿ ನನಗೆ ಇಷ್ಟು ಮಾತನಾಡಲು ಅವಕಾಶಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ಅರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ. ಶ್ರೀನಿವಾಸಗೌಡ(ಕೋಲಾರ): ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ರಾಜ್ಯಪಾಲರ ಭಾಷಣದ ಬಗ್ಗೆ ವಂದನಾನಿರ್ಣಯವನ್ನು ಸ್ವಾಗತಿಸುತ್ತಾ, ಮಾನ್ಯ ರಾಜ್ಯಪಾಲರು ಚಿಕ್ಕ, ಚೊಕ್ಕ ಮತ್ತು ಎಲ್ಲಾ ಇಲಾಖೆಗಳಿಗೂ ಒತ್ತುಕೊಟ್ಟು ತಮ್ಮ ಭಾಷಣವನ್ನು ಮಾಡಿದ್ದಾರೆ. ನಿಜವಾಗಿಯೂ ಕೂಡ ಅವರ ಭಾಷಣ ಪ್ರಶಂಸನೀಯವಾದುದು. ಇದನ್ನು ನಾವೆಲ್ಲರೂ ಕೂಡ ಸ್ವಾಗತಿಸಲೇಬೇಕಾದ ವಿಚಾರ. ಮೊದಲನೆಯದಾಗಿ ನಮ್ಮ ಸರ್ಕಾರ ಬಂದಮೇಲೆ ಕೇವಲ 47 ದಿನಗಳ ಒಳಗೆ ಹುಬ್ಬಳ್ಳಿಯಲ್ಲಿ ಏನೊಂದು ದೊಡ್ಡ ದುರಂತವಾಗುವುದನ್ನು ತಪ್ಪಿಸಿದರು. ಅಲ್ಲಿಯ ಈದ್ಗಾ ಮೈದಾನದ ವಿಷಯ ಸಣ್ಣ ವಿಷಯವೇನೂ ಅಲ್ಲ. ಇವತ್ತು ಕೆಲವು ಕಿಡಿಗೇಡಿಗಳು ಯಾವಾಗಲೂ ಇದಕ್ಕೆ ಹೆಚ್ಚು ಮಹತ್ವ ಕೊಟ್ಟು ಈ ವಿಷಯ ಯಾವಾಗಲೂ ಜೀವಂತವಾಗಿರಬೇಕೆಂದು ಪ್ರಯತ್ನ ಮಾಡಿದ್ದರು ಎಂದು ಹೇಳಿದರೆ ಅದು ತಪ್ಪಾಗಲಾರದು. ಆದರೆ ಬಹಳ ಸಮಯದಿಂದ ನೆನೆಗುದಿಗೆ ಬಿದ್ದಿದ್ದ ಈ ವಿಷಯವನ್ನು ಅಧಿಕಾರಕ್ಕೆ ಬಂದ ಕೇವಲ 47 ದಿವಸಗಳಲ್ಲಿ ನಮ್ಮ ಸರ್ಕಾರ, ಸಮಯ ಪ್ರಜ್ಞೆಯಿಂದ ಸುಧಾರಿಸಿದ್ದು, ಈ ಗೌರವ ಸರ್ಕಾರಕ್ಕೆ ಸಲ್ಲಬೇಕಾಗುತ್ತದೆ. ನಿನ್ನೆಯ ದಿವಸ ಮಾತನಾಡುತ್ತಿರುವಾಗ ಕೆಲವರು ಹೇಳಿದರು ಏನೆಂದರೆ, ನೀವು ಮುಸ್ಲೀಂ ಬಾಂಧವರ ಓಟನ್ನು ತೆಗೆದುಕೊಂಡಿದ್ದರಿಂದ ಇದು ಸಾಧ್ಯವಾಯಿತು ಎಂದು. ಅವರು 47 ವರ್ಷಗಳಿಂದಲೂ ಕಾಂಗ್ರೆಸ್ ಬಾಂಧವರಿಗೇ ಓಟನ್ನು ಹಾಕಿದ್ದರು......

ಶ್ರೀ ರಾಮಲಿಂಗಾರೆಡ್ಡಿ : ಯಾವ ಪಕ್ಷದವರು ಯಾರಿಗೆ ಓಟು ಹಾಕಿದ್ದಾರೆ ಎಂಬುದು ಹೇಗೆ ಗೊತ್ತಾಗುತ್ತದೆ?

ಶ್ರೀ ಕೆ. ಶ್ರೀನಿವಾಸಗೌಡ : ಇದರಬಗ್ಗೆ, ಈದ್ಗಾ ಮೈದಾನದ ವಿಷಯದಲ್ಲಿ ಹೋದವಾರ 'ಸಂಡೇ' ಪತ್ರಿಕೆಯಲ್ಲಿ ಪ್ರಕಟವಾಗಿರುವುದನ್ನು ನಾನು ಓದಿದೆ.

6.50 ಪಿ.ಎಂ

ಹೊಸದಾದ ಒಂದು ಆಯಾಮವನ್ನು ಸೃಷ್ಟಿ ಮಾಡಲಿಕ್ಕೆ ಹೊರಟಿದ್ದಾರೆ. ಈ ದೇಶದಲ್ಲಿ ಮಥುರಾ ದೇವಸ್ಥಾನವನ್ನು ತೆಗೆದುಕೊಂಡರು, ಈಗ ಕಾಶಿವಿಶ್ವನಾಥನನ್ನು ತೆಗೆದುಕೊಂಡು ಹೊರಟಿದ್ದಾರೆ. ಇದನ್ನು ಸರ್ಕಾರದವರು ಈಗಲೇ ಸದೆಬಡಿಯದಿದ್ದರೆ ಈ ದೇಶಕ್ಕೆ ಭವಿಷ್ಯ ಇಲ್ಲ. ನಮ್ಮ ರಾಜ್ಯ ಸರ್ಕಾರ ಕೂಡ ಇದರ ಬಗ್ಗೆ ಕಟ್ಟುನಿಟ್ಟಿನ ಕಠೋರವಾದ ಎಲ್ಲಾ ಪ್ರಯತ್ನಗಳನ್ನು ಮಾಡಿ ಈ ತರದ ಕಿಡಿಗೇಡಿಗಳು ವಿಧ್ವಂಸಕ ಕೃತ್ಯಗಳನ್ನು ಮಾಡದಂತೆ ನೋಡಿಕೊಳ್ಳಬೇಕು ಎನ್ನುವಂತಹ ಮಾತನ್ನು ನಾನು ಹೇಳಬಯಸುತೇನೆ.

ಶ್ರೀ ಎ.ರಾಮದಾಸ್ : ಮಾನ್ಯ ಅಧ್ಯಕ್ಷರೇ, ಕಾಶಿವಿಶ್ವನಾಥ ದೇಶದ್ರೋಹಿ ಎಂದು ಎಲ್ಲಿ ಹೇಳಿದೆ ಎನ್ನುವುದನ್ನು ಮಾನ್ಯ ಸದಸ್ಯರು ಹೇಳಬೇಕು.

ಶ್ರೀ ಕೆ. ಶ್ರೀನಿವಾಸಗೌಡ : ಮಾನ್ಯ ಅಧ್ಯಕ್ಷರೇ, ಸಂಡೇ ಎನ್ನುವ ಒಂದು ಮಾಸಪತ್ರಿಕೆಯಲ್ಲಿ ಕಾಶಿ ವಿಶ್ವನಾಥ ದೇವಸ್ಥಾನದ ಬಗ್ಗೆ ಮಸೀದಿ ಬಗ್ಗೆ ಏನು ಚರ್ಚೆ ಆಗಿದೆ, ಅದರ ಮೇಲೆ ನಾನು ಹೇಳಿದೆ. ಇವತ್ತು ಇವರು ಈ ಒಂದು ವಿಷಯವನ್ನು ಬಂಡವಾಳವಾಗಿಟ್ಟುಕೊಂಡು ಬಾಬರಿ ಮಸೀದಿ ರಾಮನ ಹೆಸರನ್ನು ಹೇಳಿಕೊಂಡು ಹೋದಂಥ ಪಕ್ಷ ಅದನ್ನೇ ಒಂದು ಬಂಡವಾಳವನ್ನಾಗಿ ಮಾಡಿಕೊಂಡು ಹೊರಟರು. ಈ ರೀತಿ ಆದರೆ ಈ ದೇಶಕ್ಕೆ ಭವಿಷ್ಯ ಇಲ್ಲ.

ಅಧ್ಯಕ್ಷರು : ಮಾನ್ಯ ಸದಸ್ಯರಾದ ಶ್ರೀನಿವಾಸಗೌಡರು ಲೋಕಸಭೆಗೆ ಹೋಗಬೇಕೆನ್ನುವ ಆಸೆಯಿಂದ ಇದ್ದಾರೆ. ಅದಕ್ಕೆ ಅವರು ತಯಾರಿ ನಡೆಸುತ್ತಿದ್ದಾರೆ.

ಶ್ರೀ ಕೆ.ಶ್ರೀನಿವಾಸಗೌಡ : ಮಾನ್ಯ ಅಧ್ಯಕ್ಷರೇ, ಇಂತಹ ಶಕ್ತಿಗಳು ಬೆಳೆಯುವುದಕ್ಕೆ ಸರ್ಕಾರ ಬಿಡಬಾರದು. ನಾನು ನೊಂದು ಒಂದು ಮಾತು ನುಡಿಯಬೇಕಾಗಿದೆ.ಕಾಂಗ್ರೆಸ್ ಈ ದೇಶದಲ್ಲಿ ಬಹಳ ಕೆಳಮಟ್ಟಕ್ಕೆ ಹೋಗುತ್ತಿದೆ. ನಾನು ಒಂದು ವಿಷಯವನ್ನು ಹೇಳಬಯಸುತ್ತೇನೆ. ನೇರವಾಗಿ ನಾವು ಇವತ್ತು ಈ ವಿಚಿತ್ರಧಕಾರಿ ಶಕ್ತಿಗಳನ್ನು ಸದೆ ಬಡಿಯಬೇಕಾದರೆ ಕಾಂಗ್ರೆಸ್ ಪಕ್ಷ ದೇಶದಲ್ಲಿ ಇರಬೇಕಾಗುತ್ತದೆ. ಇವತ್ತು ನಮ್ಮ ದೇಶದಲ್ಲಿ ಸೆಕ್ಯುಲರ್ ಥಿಂಕಿಂಗ್ ಇರುವಂತಹ ಪಕ್ಷಗಳು ಇದರ ಬಗ್ಗೆ ಯೋಚನೆ ಮಾಡಬೇಕಾಗುತ್ತದೆ. ಆ ದಿಕ್ಕಿನಲ್ಲಿ ನಾವು ಸ್ವಲ್ಪ ಮಟ್ಟಿಗೆ ಚಿಂತನೆ ಹರಿಸಬೇಕಾಗುತ್ತದೆ. ಆದರೆ ಒಂದು ದುರ್ದೈವದ ಸಂಗತಿ ಅಂದರೆ ಕಾಂಗ್ರೆಸ್ ಸರ್ಕಾರದ ಪರಿಸ್ಥಿತಿ ಕೇಂದ್ರಸರ್ಕಾರದಲ್ಲಿ ಏನಾಗಿದೆ ಅಂದರೆ ಡೆಲ್ಲಿಯಲ್ಲಿ ಒಬ್ಬ ಲಿಕ್ವಿಡೇಟರ್ ಅನ್ನು ಇಟ್ಟುಕೊಂಡು ಡೆಲ್ಲಿಯಲ್ಲಿ ಕುಳಿತಿದ್ದಾರೆ. ಲಿಕ್ವಿಡೇಟರ್ ಅಂದರೆ ಸಾಮಾನ್ಯವಾಗಿ ಬಹಳಷ್ಟು ಜನರಿಗೆ ಗೊತ್ತಾಗುವುದಿಲ್ಲ ಸಹಕಾರ ಸಂಘಗಳಲ್ಲಿ ಎಲ್ಲಾ ಮುಗಿದು ಕೊನೆಯಲ್ಲಿ ಲಿಕ್ವಿಡೇಟರ್ ಅನ್ನು ನೇಮಕ ಮಾಡುತ್ತಾರೆ. ಆ ಲಿಕ್ವಿಡೇಟರ್ ಅವನ ಕೆಲಸ ಏನೆಂದರೆ

ಕೊನೆಯಲ್ಲಿ ಉಳಿದಿರತಕ್ಕಂಥ ಬೆಂಚ್ ಮಾರುವುದು, ಚೇರ್ ಮಾರುವುದು ಬೀರು ಮಾರುವುದು ಅಂತಾದ್ದು ಇಂತಾದ್ದು ಏನಾದರೂ ಉಳಿದಿದ್ದರೆ ಅದನ್ನು ಮಾರುವುದಕ್ಕೆ ಇಟ್ಟುಕೊಂಡಿರುತ್ತಾರೆ. ಹಾಗೆಯೇ ಕಾಂಗ್ರೆಸ್‌ನವರು ಲಿಕ್ವಿಡೇಟರ್‌ನಂತಹ ಒಬ್ಬ ಅಧ್ಯಕ್ಷರನ್ನು ಇಟ್ಟುಕೊಂಡಿದ್ದಾರೆ. ಈ ಮಾತನ್ನು ನಾನು ಬಹಳ ನೊಂದು ನುಡಿಯಬೇಕಾಗುತ್ತದೆ. ಕಾಂಗ್ರೆಸ್‌ಪಕ್ಷ ಇವತ್ತು ಬಹಳ ಕೆಳಮಟ್ಟಕ್ಕೆ ಹೋಗುತ್ತಿದೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ಇವರು ಎಲ್ಲಿದ್ದಾರೆ ಎಂದು ತಿಳಿದುಕೊಂಡು ಮಾತನಾಡಿದರೆ ಒಳ್ಳೆಯದು. ನಾವೇನು ಲಿಕ್ವಿಡೇಟರ್‌ನ್ನು ಇಟ್ಟುಕೊಂಡಿದ್ದೇವೆ ಸರಿ ಆದರೆ ಇವರದ್ದು ಕರ್ನಾಟಕ ಮತ್ತು ಬಿಹಾರ್‌ನಲ್ಲಿ ಬಿಟ್ಟರೆ ಬೇರೆ ಎಲ್ಲಿದ್ದಾರೆ? ಇವರು ಆಕಳು ಮತ್ತು ಕರ ಇದ್ದಂತೆ. ಅಲ್ಲೊಂದು ಇಲ್ಲೊಂದು ಇದೆ. ಬೇರೆಯವರನ್ನು ಲಿಕ್ವಿಡೇಟರ್ ಎಂದು ಕರೆಯುವುದು ಸರಿಯಲ್ಲ. ಸಂಬಂಧ ಇರತಕ್ಕಂಥಾದರ ಬಗ್ಗೆ ಮಾತನಾಡಲಿ.

ಶ್ರೀ ರಾಮಲಿಂಗಾರೆಡ್ಡಿ : ಮಾನ್ಯ ಅಧ್ಯಕ್ಷರೇ, ನಾವು ಈಗ 36 ಜನ ಇದ್ದೇವೆ. ಅವರು ಪಾಪ 22ಜನ ಇದ್ದರು ಆಗ ಅವರ ಪರಿಸ್ಥಿತಿ ಏನಿತ್ತು?

ಅಧ್ಯಕ್ಷರು : ನಿಮ್ಮದು ಶಕ್ತಿ ಕಡಿಮೆ ಆಗಿದೆ ಅವರದ್ದು ಶಕ್ತಿ ಕಡಿಮೆ ಆಗಿದೆ, ನೀವಿಬ್ಬರೂ ಕೂಡಿಹೋಗಿ.

ಶ್ರೀ ಕೆ.ಶ್ರೀನಿವಾಸಗೌಡ : ಮಾನ್ಯ ಅಧ್ಯಕ್ಷರೇ, ಅದಕ್ಕೇ ನಾನು ಮೊದಲು ನೊಂದು ನುಡಿಯುತ್ತಿದ್ದೇನೆ ಎಂದು ಹೇಳಿದ್ದು. ಅದನ್ನು ತಾವು ಸ್ವಲ್ಪ ಗಮನಿಸಿ. ಜನತಾದಳದ ಚುನಾವಣಾ ಪ್ರಣಾಳಿಕೆಯಲ್ಲಿ ಏನು ಹೇಳಿದ್ದೇವೋ ಅದನ್ನೆಲ್ಲಾ ನಾವು ಮಾಡುತ್ತೇವೆ. ಈಗಾಗಲೇ ಕೆಲವು ವಿಷಯಗಳನ್ನು ಅನುಷ್ಠಾನಕ್ಕೆ ತಂದಿದ್ದೇವೆ. ಇದರಲ್ಲಿ ಮುಖ್ಯವಾಗಿ ತಾಲ್ಲೂಕು ಪಂಚಾಯತಿ ಚುನಾವಣೆಗಳು ಜಿಲ್ಲಾ ಪಂಚಾಯತಿ ಚುನಾವಣೆಗಳನ್ನು ಮಾಡಿದ್ದೇವೆ. ಮಾನ್ಯ ನಾಗೇಗೌಡರು ಈಗ ನಮ್ಮ ಕಡೆ ಇದ್ದಾರೆ. ಮಾನ್ಯ ವೀರಪ್ಪಮೊಯಿಲಿಯವರು ಮುಖ್ಯಮಂತ್ರಿಗಳಾಗಿದ್ದಾಗ ಈ ತಾಲ್ಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿ ಚುನಾವಣೆಗಳನ್ನು ಮುಂದಕ್ಕೆ ಹಾಕಿ ಕೊಂಡೇ ಬಂದರು. ಕಡೆಗೆ ದೇವೇಗೌಡರು ಅಧಿಕಾರಕ್ಕೆ ಬಂದ ಮೇಲೆ ಈ ತಾಲ್ಲೂಕು ಪಂಚಾಯತಿ ಜಿಲ್ಲಾ ಪಂಚಾಯತಿ ಚುನಾವಣೆಗಳನ್ನು ಮಾಡಬೇಕಾಯಿತು. ಈ ಒಂದು ಆಶ್ವಾಸನೆಯನ್ನು ನಾವು ಜನತೆಗೆ ಕೊಟ್ಟಿದ್ದೆವು. ಆ ಆಶ್ವಾಸನೆಯನ್ನು ನಮ್ಮ ಸರ್ಕಾರ ಈಡೇರಿಸಿದೆ. ಇವತ್ತು ನಮ್ಮ ಹಳೆಯ ಮೈಸೂರು ಪ್ರಾಂತ್ಯದಲ್ಲಿ ಒಕ್ಕಲಿಗರು ಜಾಸ್ತಿ ಜನ ಇದ್ದಾರೆ. ಅದೇ ರೀತಿಯಾಗಿ ಹೈದರಾಬಾದ್ ಕರ್ನಾಟಕ ಭಾಗದಲ್ಲಿ ಬಾಂಬೇ ಕರ್ನಾಟಕ ಭಾಗದಲ್ಲಿ ಲಿಂಗಾಯತರು ಪ್ರಾಬಲ್ಯ ಜಾಸ್ತಿ ಇದೆ. ಆದರೂ ಇವತ್ತು ಈ ಕಡೆಗಳಲ್ಲಿ ಕೂಡ ಬಣಜಿಗರು, ಅಗಸರು, ಇತರೇ ಹಿಂದುಳಿದವರ್ಗದ ಅಭ್ಯರ್ಥಿಗಳು ತಾಲ್ಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿ ಚುನಾವಣೆಗಳಲ್ಲಿ ಗೆದ್ದು ಬಂದು ಅನೇಕ ಕಡೆಗಳಲ್ಲಿ ಅಧ್ಯಕ್ಷರಾಗಿದ್ದಾರೆ. ಆದರೆ ಈ ಹಿಂದೆ ಇದು ಸಾಧ್ಯವಾಗುತ್ತಿರಲಿಲ್ಲ. ಇವತ್ತು ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಮೀಸಲಾತಿಯನ್ನು ಹಿಂದುಳಿದ ವರ್ಗದವರಿಗೆ ಕೊಟ್ಟಿದ್ದರ ದಿಸೆಯಿಂದ ಗಾಣಿಗರು, ಗೊಲ್ಲರು, ತಿಗಳರು ಎಲ್ಲಾ ವರ್ಗದ ಜನರು ತಾಲ್ಲೂಕು ಪಂಚಾಯತಿ ಚುನಾವಣೆಗಳಲ್ಲಿ ಗೆದ್ದು ಬಂದಿದ್ದಾರೆ. ಹಿಂದೆ ಪಂಚಾಯತಿ

ಚುನಾವಣೆಗಳಲ್ಲಿ ಈ ವರ್ಗದ ಜನ ಗೆದ್ದಿದ್ದರು ಆದರೆ ಅಧ್ಯಕ್ಷರಾಗುತ್ತಿರಲಿಲ್ಲ. ಕಾರಣ ಇತರೇ ವರ್ಗದ ಪ್ರಾಬಲ್ಯ ಜಾಸ್ತಿ ಇತ್ತು. ಅವರು ಬಿಟ್ಟುಕೊಡುತ್ತಿರಲಿಲ್ಲ. ಇದನ್ನು ತಾವು ಅರ್ಥಮಾಡಿಕೊಳ್ಳಬೇಕು. ದಿವಂಗತ ದೇವರಾಜ ಅರಸುರವರು ಹಿಂದುಳಿದ ವರ್ಗದವರಿಗೆ ಮೀಸಲಾತಿ ಸೌಲಭ್ಯವನ್ನು ಕೊಟ್ಟರು, ಈ ಮಾತನ್ನು ನಾನು ಒತ್ತಿ ಒತ್ತಿ ಹೇಳಬೇಕಾಗಿದೆ. ನಾನು ಆಗ ವಿದ್ಯಾರ್ಥಿಯಾಗಿದ್ದೆ. ಮತ್ತು ಸಿ ಪಿ ಪಕ್ಷದಲ್ಲಿ ಇದ್ದೆ. ಆಗ ಶ್ರೀಮಾನ್ ದೇವರಾಜ ಅರಸರು ಒಂದು ಭೂ ಸುಧಾರಣಾ ಕಾಯ್ದೆಯನ್ನು ತಂದರು, ಈ ಕಾಯ್ದೆಯನ್ನು ತಂದು ಉಳುವವನಿಗೆ ಭೂಮಿಯನ್ನು ಕೊಡುತ್ತಾರೆ ಎಂದು ಮಾತನಾಡಿಕೊಳ್ಳುತ್ತಿದ್ದರು. ಶ್ರೀ ದೇವರಾಜ ಅರಸರು ಮುಖ್ಯಮಂತ್ರಿಗಳಾಗಿದ್ದಾಗ ಕೆಲವರು ಮಾತನಾಡಿಕೊಂಡರು ನಮ್ಮಲ್ಲಿ ಒಬ್ಬ ಜೋಡಿದಾರು ಇದ್ದರು. ಅವರು ಹೇಳಿದರು ಲ್ಯಾಂಡ್ ಸೀಲಿಂಗ್ ಆಕ್ಟನ್ನು ಏನಾದರೂ ದೇವರಾಜ ಅರಸರು ಜಾರಿಗೆ ತಂದರೆ ಅವರು ಅಧಿಕಾರದಲ್ಲಿ ಉಳಿಯುವುದಿಲ್ಲ ಎಂದು. ಆದರೆ ಅದರಿಂದ ಅನೇಕ ಜನರಿಗೆ ಅನುಕೂಲ ಆಯಿತು. ಇಂತಹ ಒಳ್ಳೆಯ ಕೆಲಸ ಮಾಡಿದಾಗ ಯಾವ ಪಕ್ಷದವರೇ ಇರಬಹುದು ನಾವು ಅದನ್ನು ಸ್ವಾಗತ ಮಾಡಬೇಕಾಗುತ್ತದೆ. ಅದೇ ಒಂದು ದಿಕ್ಕಿನಲ್ಲಿ ಇವತ್ತು ಮಾನ್ಯ ದೇವೇಗೌಡರು ಒಳ್ಳೆಯ ಕೆಲಸ ಕಾರ್ಯಗಳನ್ನು ಮಾಡಲು ಹೊರಟಿದ್ದಾರೆ. 1983ರಿಂದ 85ರವರೆಗೂ ರಾಮಕೃಷ್ಣ ಹೆಗಡೆಯವರು ಒಳ್ಳೆಯ ಸರ್ಕಾರವನ್ನು ಕೊಟ್ಟರು. ಶ್ರೀಮಾನ್ ವೀರೇಂದ್ರಪಾಟೀಲರು ಸುಮಾರು 11 ತಿಂಗಳು ಒಳ್ಳೆಯ ಸರ್ಕಾರವನ್ನು ರಾಜ್ಯದ ಜನತೆಗೆ ಕೊಟ್ಟರು. ಒಳ್ಳೆಯ ಕೆಲಸ ಮಾಡಿದಾಗ ಪಕ್ಷಾತೀತವಾಗಿ ಎಲ್ಲರೂ ಶ್ಲಾಘನೆ ಮಾಡಬೇಕಾಗುತ್ತದೆ. ಆ ಒಂದು ದಿಸೆಯಲ್ಲಿ ನಮ್ಮ ಸರ್ಕಾರ ಕೂಡ ನಡೆಯುತ್ತಿದೆ. ನಮ್ಮ ಸರ್ಕಾರಕ್ಕೆ ನಾನು ಒಂದು ಕಿವಿ ಮಾತು ಹೇಳುವುದೇನೆಂದರೆ ನಮ್ಮ ನಮ್ಮಲ್ಲಿ ಏನೇ ವ್ಯತ್ಯಾಸಗಳು ಇರಬಹುದು ಆದರೆ ಒಳ್ಳೆಯ ಕೆಲಸ ಮಾಡಿದಾಗ ಸ್ವಾಗತ ಮಾಡಬೇಕು. ಕಾರಣ ಚರಿತ್ರೆ ಪುನರಾವರ್ತನೆಯಾಗುತ್ತದೆ. ಇದನ್ನು ಗಮನದಲ್ಲಿಟ್ಟುಕೊಂಡು ನಾವು ಕೆಲಸ ಮಾಡಬೇಕಾಗುತ್ತದೆ. ಇನ್ನು ಕೈಗಾರಿಕಾ ನೀತಿಯ ಬಗ್ಗೆ ನಾನು ಮಾತನಾಡುವುದಾದರೆ ಈ ಕೈಗಾರಿಕಾ ನೀತಿ ಹೇಗಿದೆ ಅಂದರೆ ಇಮಾಮ್ ಸಾಬಿಗೂ ಗೋಕುಲಾಷ್ಟಮಿಗೂ ಏನು ಸಂಬಂಧ ಎಂಬ ಹಾಗೆ ಇದೆ. ಇವತ್ತು ನಮ್ಮ ಜಿಲ್ಲೆಯಲ್ಲಿ ಪಂಪ್‌ಸೆಟ್‌ಗಳಿಗೆ ಸರಿಯಾಗಿ ವಿದ್ಯುತ್ ಸೌಲಭ್ಯ ಇಲ್ಲ. ಮೊದಲು ನಮ್ಮ ರಾಜ್ಯದಲ್ಲಿ ವಿದ್ಯುತ್ ಉತ್ಪಾದನೆಯನ್ನು ಹೆಚ್ಚು ಮಾಡಬೇಕಾಗುತ್ತದೆ. ಅದರ ಬಗ್ಗೆ ನಮ್ಮ ಸರ್ಕಾರ ಗಮನಹರಿಸಬೇಕಾಗುತ್ತದೆ. ನಾನು ಚೈನಾ ದೇಶಕ್ಕೆ ಒಮ್ಮೆ ಭೇಟಿ ಕೊಟ್ಟಿದ್ದೆ. ಅಲ್ಲಿ ಕಮ್ಯುನಿಸ್ಟ್ ಸರ್ಕಾರ ಇರುವುದು. 1980ನೇ ಇಸವಿಯಲ್ಲಿ ಅಲ್ಲಿಸುಮಾರು 12-13 ವರ್ಷಗಳಿಂದ ಕಮ್ಯುನಿಸ್ಟ್ ಸರ್ಕಾರ ನಡೆಸಿಕೊಂಡು ಬರುತ್ತಿದ್ದಾರೆ. ನನ್ನ ಜೊತೆಯಲ್ಲಿ ಎಂ.ಚಂದ್ರಶೇಖರ್‌ರವರು ಕೂಡ ಬಂದಿದ್ದರು. ನಾವು ಅಲ್ಲಿನ ಪರಿಸ್ಥಿತಿಯನ್ನು ನೋಡಿದಾಗ ನಮ್ಮಂತಹ ಪ್ರಜಾಪ್ರಭುತ್ವ ದೇಶಗಳು ಅಷ್ಟು ಮುಂದುವರೆದಿಲ್ಲ ಆದರೆ ಕಮ್ಯುನಿಸ್ಟ್ ರಾಷ್ಟ್ರಗಳು ಇಷ್ಟು ಮುಂದುವರಿದಿದೆಯಲ್ಲಾ ಎಂದು ಅನ್ನಿಸಿತು. ಆದ್ದರಿಂದ ನಾನು ಸರ್ಕಾರಕ್ಕೆ ಹೇಳುವುದೇನೆಂದರೆ ನಮ್ಮ ರಾಜ್ಯದಲ್ಲಿ ಮೊದಲು ವಿದ್ಯುತ್‌ಶಕ್ತಿಯನ್ನು ಹೆಚ್ಚು ಹೆಚ್ಚು ಉತ್ಪಾದನೆ ಮಾಡಿ ಕೈಗಾರಿಕೆಗಳನ್ನು ಬೆಂಗಳೂರಿನಲ್ಲಿ ಸ್ಥಾಪನೆ ಮಾಡಲು ಬಿಡದೇ ಬೇರೆ ಬೇರೆ ಜಿಲ್ಲೆಗಳಲ್ಲಿ ಕೈಗಾರಿಕೆಗಳನ್ನು ಸ್ಥಾಪನೆ ಮಾಡಲು ಅನುಮತಿ

ಕೊಡಬೇಕೆಂದು ನಾನು ಹೇಳುತ್ತೇನೆ. ಈ ದಿಕ್ಕಿನಲ್ಲಿ ಸರ್ಕಾರ ಚಿಂತನೆ ಮಾಡಬೇಕು. ನಾಳೆ ದಿವಸ ನನ್ನ ಭಾಷಣವನ್ನು ಮುಂದುವರಿಸಲಿಕ್ಕೆ ತಾವು ಅವಕಾಶ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ಈ ಹಿಂದೆ ಮಾನ್ಯ ಬೈರೇಗೌಡರು ಮಾತನಾಡುತ್ತಿದ್ದ ಹಾಗೆ ತಾವೂ ಮಾತನಾಡಲು ಈಗ ಸಮಯಾವಕಾಶವಿಲ್ಲ. ಈ ದಿವಸ 7.30 ಗಂಟೆಗೆ ಮುಖ್ಯ ಮಂತ್ರಿಗಳ ಒಂದು ಔತಣ ಕೂಟ ಇದೆ. ಔತಣ ಕೂಟಕ್ಕೆ ಹೋಗುವ ಮೊದಲು ಮಧ್ಯಪಾನ ನಿಷೇದದ ಬಗ್ಗೆ ತಂದಿರುವ ಖಾಸಗಿ ನಿರ್ಣಯದ ಮೇಲೆ ಚರ್ಚೆ ಕೂಡ ಇದೆ, ಇದರ ಜೊತೆಗೆ ಬಿಲ್‌ಗಳನ್ನೂ ಪಾಸ್ ಮಾಡಬೇಕಾಗಿದೆ. ಆದುದರಿಂದ ಈಗ ತಮ್ಮ ಭಾಷಣವನ್ನು ಬೇಗ ಮುಗಿಸಿ.

ಶ್ರೀ ಕೆ.ಶ್ರೀನಿವಾಸಗೌಡ : ಇನ್ನು ಕೆಲವು ವಿಷಯಗಳ ಮೇಲೆ ನಾನು ಮಾತನಾಡಬೇಕಾಗಿತ್ತು. ನಾಳೆ ದಿವಸ ತಾವು ಅವಕಾಶ ಕೊಟ್ಟರೆ ಒಳ್ಳೆಯದು. ಈಗ ನಾನು ಕೃಷಿ ಇಲಾಖೆ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ರೈತರುಗಳು ದೇಶದ ಬೆನ್ನೆಲೆಬು ಎಂದು ನಾವುಗಳೆಲ್ಲರೂ ಹೇಳುತ್ತೇವೆ. ಆದರೆ, ರೈತರುಗಳಿಗೆ ಬೆನ್ನು ಮೂಳೆಯೇ ಇಲ್ಲದಂಥ ಪರಿಸ್ಥಿತಿ ಇವತ್ತಿನ ದಿವಸಗಳಲ್ಲಿ ಆಗಿದೆ. ಇವತ್ತಿನ ದಿವಸ ಕೃಷಿ ಇಲಾಖೆಯು ಒಂದು ಬಿಳಿ ಆನೆ ಇದ್ದ ಹಾಗೆ. ಮಲ್ಟಿ ನ್ಯಾಷನಲ್ ಕಂಪನಿಗಳು ಬೀಜೋತ್ಪಾದನೆಯ ವ್ಯಾಪಾರದಲ್ಲಿ ನಮ್ಮ ದೇಶದಲ್ಲಿ ತೊಡಗಿರುವುದರಿಂದ ನಮ್ಮ ರೈತರುಗಳಿಗೆ ಅಪಾರ ಹಾನಿಯಾಗುತ್ತಿದೆ. ವ್ಯವಸಾಯ ಇಲಾಖೆ ಏಕಾದರೂ ಇದೆಯೋ ಎನ್ನುವ ಹಾಗಾಗಿದೆ. ಹಾಗೂ ಇದ್ದರೂ ಅದು ಎಲ್ಲಿ ಇದೆ ಎನ್ನುವುದನ್ನು ಈ ಸಮಯದಲ್ಲಿ ನಾವು ಕೇಳಬೇಕಾಗುತ್ತದೆ. ನಮ್ಮ ಸರ್ಕಾರ ಬಂದ ಮೇಲೆ ಕೃಷಿ ಅಭಿವೃದ್ಧಿಗಾಗಿ ಕೆಲವು ಕ್ರಮಗಳನ್ನು ಹಾಕಿಕೊಳ್ಳಲಾಗುತ್ತದೆ. ವ್ಯವಸಾಯಗಾರರನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ ಶಿವಮೊಗ್ಗ ಜಿಲ್ಲೆಯಲ್ಲಿ ಕೃಷಿ ಪಂಡಿತರೆನಿಸಿಕೊಂಡಿರುವ ಡಿ.ಆರ್.ಪ್ರಫುಲ್‌ಚಂದ್ರ ಅವರಿಗೆ ನಮ್ಮ ರಾಜ್ಯ ಸರ್ಕಾರ ಗೌರವ ಡಾಕ್ಟರೇಟನ್ನು ದಯಪಾಲಿಸುವ ಕ್ರಮವನ್ನು ಹಾಕಿಕೊಂಡಿರುವುದು ನಿಜಕ್ಕೂ ಶ್ಲಾಘನಿಯವಾದ ವಿಚಾರವಾಗಿದೆ. ನಾನು ಒಂದು ವಿಷಯವನ್ನು ಸದನದ ಗಮನಕ್ಕೆ ತರಬಯಸುತ್ತೇನೆ. ಹೋದ ಸಾರಿ ವಿಧಾನ ಸಭೆಯ ಸದಸ್ಯರಾಗಿದ್ದ ಲಕ್ಷ್ಮಣಯ್ಯನವರ ಮನೆಗೆ ನಾನು ಒಂದು ಸಾರಿ ಹೋಗಿದ್ದೆ. ಅವರು ಮನೆಯ ಸುತ್ತ ಹಾಗೂ ಮನೆಯ ಮೇಲಗಡೆ ಇಟ್ಟಿದ್ದ ಕುಂಡಗಳಲ್ಲಿ ರಾಗಿಯನ್ನು ಬಿತ್ತನೆ ಮಾಡಿ ಬೆಳೆದಿದ್ದನ್ನು ನಾನು ನೋಡಿದೆ. ಏನು ರಾಗಿಯನ್ನು ಕುಂಡಗಳಲ್ಲಿ ಬೆಳೆದಿದ್ದೀರಲ್ಲಾ ಎಂದು ಕೇಳಿದ್ದಕ್ಕೆ, ನಾನು ಹಳ್ಳಿಗಾಡು ಪ್ರದೇಶದಿಂದ ಬಂದಿರತಕ್ಕವನು, ನಮ್ಮ ತಂದೆ ತಾಯಿಯರು ಹೊಲದಲ್ಲಿ ರಾಗಿಯನ್ನು ಬಿತ್ತನೆ ಮಾಡಿ ಬೆಳೆಯುತ್ತಿದ್ದರು. ನಾನು ಇಲ್ಲಿ ಇದ್ದರೂ ಕೂಡ ಏನಾದರೂ ಹೊಸದಾಗಿ ಮಾಡಬೇಕೆನ್ನುವ ಬಯಕೆಯಿಂದ ರಾಗಿಯನ್ನು ಕುಂಡಗಳಲ್ಲಿ ಬಿತ್ತನೆ ಮಾಡಿ ಬೆಳೆಯುತ್ತಿದ್ದೇನೆಂದು ಹೇಳಿದರು. ಅದನ್ನು ಕೇಳಿ ನನಗೆ ನಿಜಕ್ಕೂ ಬಹಳ ಸಂತೋಷವಾಯಿತು. ಇವರು ಮಾಡುತ್ತಿರುವ ಕೆಲಸದ ಬಗ್ಗೆ ಸರ್ಕಾರದವರು ಒಳ್ಳೆಯ ಪ್ರಚಾರವನ್ನು ಕೊಟ್ಟು ಕೃಷಿಯಲ್ಲಿ ಅವರ ಮಾರ್ಗದರ್ಶನ ಎಲ್ಲರಿಗೂ ಸಿಗುವ ಹಾಗೆ ಮಾಡಬೇಕು. ಇನ್ನು ರೇಷ್ಮೆ ಕೃಷಿ ಬಗ್ಗೆ ಹೇಳುವುದಾದರೆ, ನಾನು ಕೋಲಾರ ಜಿಲ್ಲೆಯಿಂದ

ಬಂದಿರತಕ್ಕವನು, ಇವತ್ತು ನಾನು ಬೆಳ್ಳಗ್ಗೆ ಬಟ್ಟೆ ಹಾಕಿರಬೇಕಾದರೆ ರೇಷ್ಮೆ ಕೃಷಿಯನ್ನು ಮಾಡುತ್ತಿದ್ದರಿಂದ ಮಾತ್ರ ಸಾಧ್ಯವಾಯಿತು. ಬೇರೆ ದೇಶಗಳಲ್ಲಿ ಬೆಳೆಯತಕ್ಕಂಥ ರೇಷ್ಮೆ ಗೂಡಿನಿಂದ 1400 ಮೀಟರ್‌ಗಳ ವರೆಗೆ ರೇಷ್ಮೆ ಎಳೆಯನ್ನು ತೆಗೆಯುವ ಮಟ್ಟದಲ್ಲಿ ಸುಧಾರಿತ ರೀತಿಯಲ್ಲಿ ರೇಷ್ಮೆ ಬೆಳೆಯನ್ನು ಬೆಳೆಯುತ್ತಿದ್ದಾರೆ. ಅದೇ ನಮ್ಮ ಕಡೆ ಬೆಳೆಯತಕ್ಕಂಥ ರೇಷ್ಮೆ ಗೂಡಿನಿಂದ 700 ರಿಂದ 800 ಮೀಟರ್‌ವರೆಗೆ ಮಾತ್ರ ಎಳೆಗಳು ಸಿಗುತ್ತದೆ. ನಮ್ಮ ಕಡೆ ಉತ್ತಮವಾದ ಗೂಡುಗಳು ಬರದೆ ಇರುವುದಕ್ಕೆ ಕಾರಣಗಳೇನು? ರೇಷ್ಮೆ ಕೃಷಿ ಬಗ್ಗೆ ನಮ್ಮ ಸರ್ಕಾರದವರು ಹೆಚ್ಚಿನ ಗಮನ ಕೊಟ್ಟು ಯಾವ ರೀತಿ ಉತ್ತಮ ಮೊಟ್ಟೆಗಳನ್ನು ತಯಾರು ಮಾಡುವುದು ಹಾಗೂ ಬೆಳೆಯನ್ನು ತೆಗೆಯಬಹುದೆಂಬ ಬಗ್ಗೆ ರಿಸರ್ಚ್ ಮಾಡಿಸಿ ರೈತರುಗಳಿಗೆ ಉತ್ತಮ ಮೊಟ್ಟೆಗಳನ್ನು ಸರಬರಾಜು ಮಾಡುವಹಾಗೆ ಮಾಡಬೇಕು. ಇನ್ನು ಹಾಲಿನ ಉತ್ಪಾದನೆ ಬಗ್ಗೆ ಹೇಳಬೇಕಾದರೆ, ನಮ್ಮ ಕೋಲಾರ ಜಿಲ್ಲೆಯಲ್ಲಿ ಹಾಲಿನ ಉತ್ಪಾದನೆ ಜಾಸ್ತಿ. ಆದರೆ ಹಾಲಿಗೆ ಕೊಡತಕ್ಕಂಥ ಬೆಲೆ ಬಹಳ ಕಡಿಮೆ ಇದೆ. ಇವತ್ತಿನ ದಿವಸ ದನಗಳಿಗೆ ಹಾಕುವಂಥ ಫೀಡ್ ಬೆಲೆ ಗಗನಕೇರಿದೆ ಹುಲ್ಲಿನ ಬೆಲೆ ಜಾಸ್ತಿಯಾಗಿದೆ. ರೈತರುಗಳು ಎಲ್ಲವನ್ನೂ ಕೊಂಡು ಹಾಲನ್ನು ಡೇರಿಗಳಿಗೆ ಹಾಕಿದರೆ ಒಂದು ಲೀಟರ್ ಹಾಲಿಗೆ 4.80 ರೂಪಾಯಿನಿಂದ 6 ರೂಪಾಯಿಯವರೆಗೆ ಮಾತ್ರ ಕೊಡಲಾಗುತ್ತಿದೆ. ಇದರಿಂದಾಗಿ ಇವತ್ತಿನ ದಿವಸ ಹೈನುಗಾರಿಕೆಯನ್ನು ಮಾಡತಕ್ಕಂಥ ರೈತರುಗಳಿಗೆ ಒಂದು ಪೈಸೆ ಕೂಡಾ ಲಾಭ ಸಿಗುತ್ತಿಲ್ಲ. ಆದುದರಿಂದ, ಈಗಲಾದರೂ ರೈತರುಗಳಿಗೆ ಹಾಲಿನ ದರವನ್ನು ಏರಿಸಿ ಸಹಾಯ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಆಮೇಲೆ ಅಂತರ್ಜಲದ ಬಗ್ಗೆ ಹೇಳುವುದಾದರೆ, ರಾಜ್ಯದ ಎಲ್ಲಾ ಕಡೆ ಸಾವಿರಾರು ಬೋರ್ ವೆಲ್‌ಗಳನ್ನು ಹಾಕಿ ನೀರನ್ನು ಮೇಲಕ್ಕೆ ಎತ್ತಲಾಗುತ್ತಿದೆ. ಇವತ್ತಿನ ದಿವಸಗಳಲ್ಲಿ ಕಾಡುಗಳು ಇಲ್ಲದಂತಾಗಿ ಮಳೆ ಕೂಡಿ ಬಹಳ ಕಡಿಮೆ ಬರುತ್ತಿದೆ. ನಮ್ಮ ಜಿಲ್ಲೆಯಲ್ಲಂತೂ ಮಳೆ ಅಪರೂಪವಾಗುತ್ತಿದೆ. ಕೆರೆ ಕುಂಟೆಗಳು ಮತ್ತು ತೆರೆದ ಬಾವಿಗಳಲ್ಲಿ ನೀರಿಲ್ಲದಂತಾಗಿದೆ. ಇದೇರೀತಿ ಮುಂದುವರದರೆ ಇನ್ನು ಕೆಲವೇ ವರ್ಷಗಳಲ್ಲಿ ಕುಡಿಯುವುದಕ್ಕೆ ನೀರು ಸಿಗದೇ ಇರುವಂಥ ಪರಿಸ್ಥಿತಿ ಖಂಡಿತವಾಗಿಯೂ ಬರುತ್ತದೆ. ಅದಕ್ಕಾಗಿ ನಾವು ಭೂಮಿಯಲ್ಲಿನ ಅಂತರ್ಜಲ ಮಟ್ಟವನ್ನು ಏರಿಸಲೇಬೇಕು. ಅಂತರ್ಜಲದ ಮಟ್ಟವನ್ನು ಏರಿಸುವ ದೃಷ್ಟಿಯಿಂದ ಆಂಧ್ರಪ್ರದೇಶದಲ್ಲಿ ಕೆರೆಗಳಲ್ಲಿ ತುಂಬಿಕೊಂಡಿರುವ ಹೂಳನ್ನು ಎತ್ತಿಸಿ ಜೊತೆಗೆ ನೀರು ಹೊರ ಹೋಗದಂಥೆ ತೂಬುಗಳನ್ನು ಬಂದ್ ಮಾಡಿ ನೀರನ್ನು ಕೆರೆಗಳಲ್ಲಿ ಸದಾ ಕಾಲ ಸಂಗ್ರಹ ಮಾಡುವ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆ. ಅವರು ಹಾಗೆ ಮಾಡಿರುವುದರಿಂದ ಆ ಭಾಗಗಳಲ್ಲಿ ಅಂತರ್ಜಲದ ಮಟ್ಟ ಸುಧಾರಣೆಯಾಗಿರುವುದು ಕಂಡು ಬಂದಿದೆ. ಅದೇ ರೀತಿ ನಮ್ಮ ರಾಜ್ಯ ಸರ್ಕಾರವೂ ಅಂತರ್ಜಲ ಮಟ್ಟವನ್ನು ಹೆಚ್ಚಿಸುವ ಸಲುವಾಗಿ ಕೆರೆಗಳಲ್ಲಿ ತುಂಬಿರುವ ಹೂಳನ್ನು ಎತ್ತಿಸಿ, ನೀರು ಹೊರ ಹೋಗದಂತೆ ತೂಬುಗಳನ್ನು ಬಂದ್ ಮಾಡುವ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಅಧ್ಯಕ್ಷರು : 7.30 ಗಂಟೆಗೆ ಮುಖ್ಯ ಮಂತ್ರಿಗಳು ಕರೆದಿರುವ ಔತಣ ಕೂಟಕ್ಕೆ ಹೋಗಬೇಕಾಗಿರುವುದರಿಂದ ತಾವು ದಯವಿಟ್ಟು ಮುಗಿಸಿ.

ಶ್ರೀ ಕೆ.ಶ್ರೀನಿವಾಸ ಗೌಡ : ಮಂಡ್ಯ, ಮೈಸೂರು ಮತ್ತು ಹಾಸನ ಜಿಲ್ಲೆಗೆ ನೀರಿನ ಸಮಸ್ಯೆ ಇಲ್ಲ ಆದರೆ, ನಮ್ಮ ಜಿಲ್ಲೆಗೆ ಕುಡಿಯಲು ನೀರು ಸಿಗಬೇಕಾದರೂ ಬಹಳ ಕಷ್ಟವಾಗಿದೆ.

ಶ್ರೀ ಎಸ್. ಆರ್. ಲಕ್ಷ್ಮಣಯ್ಯ : ಅದು ನಿಮ್ಮ ಹಣೆಬರಹ ಅದಕ್ಕೆ ಏನು ಮಾಡುವುದಕ್ಕಾಗುತ್ತದೆ?

ಶ್ರೀ ಕೆ. ಶ್ರೀನಿವಾಸಗೌಡ : ಹಣೆ ಬರಹ ಎಂದು ಏನೂ ಮಾಡದೇ ಇದ್ದರೆ ನಮ್ಮ ಜಿಲ್ಲೆಯ ಜನರ ಗತಿ ಏನು? ನೀರನ್ನು ಸದುಪಯೋಗ ಪಡಿಸುವ ದೃಷ್ಟಿಯಿಂದ ನಮ್ಮ ಜಿಲ್ಲೆಯಲ್ಲಿ ತೋಟಗಾರಿಕೆ ಮತ್ತು ಇತರೆ ಬೆಳೆಗಳಿಗೆ ಡ್ರಿಫ್ ಇರಿಗೇಷನ್ ಹಾಗೂ ತುಂತುರು ಇರಿಗೇಷನ್‌ಗೆ ಸರ್ಕಾರದವರು ಹೆಚ್ಚಿನ ರೀತಿಯಲ್ಲಿ ಸಬ್ಸಿಡಿ ಕೊಡಬೇಕು. ನಮ್ಮ ಜಿಲ್ಲೆಯಲ್ಲಿ ಮಾವು ವಿಪರೀತ ಬೆಳೆಯಾಲಾಗುತ್ತಿದೆ. ಅದೂ ಅಧ್ಯಕ್ಷರ ತಾಲ್ಲೂಕಾದ ಶ್ರೀನಿವಾಸಪುರದಲ್ಲಿ ಅತಿ ಹೆಚ್ಚಿನ ಹಣ್ಣನ್ನು ಬೆಳೆಯಲಾಗುತ್ತಿದೆ. ಬೈಗಾನ್‌ಪಲ್ಲಿ ಬಾದಾಮಿ, ಮಲಗೋವ ಮುಂತಾದ ಸ್ವಾದಭರಿತವಾಗ ಹಣ್ಣನ್ನು ಬೆಳೆದರೂ ಅವುಗಳನ್ನು ಶೇಖರಣೆ ಮಾಡಲು ಸೂಕ್ತವಾದ ಶೈತ್ಯಾಗಾರದ ಅನುಕೂಲವಿಲ್ಲದೆ ರೈತರುಗಳು ಬಹಳ ನಷ್ಟವನ್ನು ಅನುಭವಿಸುತ್ತಿದ್ದಾರೆ. ಆದ್ದರಿಂದ ಅವಶ್ಯಕತೆ ಇರುವ ಕಡೆಗಳಲ್ಲಿ ಶೈತ್ಯಾಗಾರಗಳನ್ನು ಒದಗಿಸಿ ರೈತರುಗಳಿಗೆ ಅನುಕೂಲ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಪ್ರತಿ ತಾಲ್ಲೂಕುಗಳಲ್ಲೂ ಒಂದೊಂದು ಮಿನಿ ವಿಧಾನಸೌಧವನ್ನು ಕಟ್ಟಿಸಿದರೆ ತಾಲ್ಲೂಕುಗಳು ಮುಂದುವರಿಯುವುದಿಲ್ಲವಾದ್ದರಿಂದ ಪ್ರೊಡಕ್ಟಿವಿಟಿ ಬಗ್ಗೆ ಹೆಚ್ಚಿನ ಗಮನಹರಿಸಬೇಕು. ಇನ್ನು ಕೆ.ಎಸ್.ಆರ್.ಟಿ.ಸಿ ಬಗ್ಗೆ ಹೇಳುವುದಾದರೆ, ಬಸ್ಸುಗಳ ಟಾಪ್ ಮೇಲೆ ಜನರು ಕುಳಿತುಕೊಂಡು ಪ್ರಯಾಣ ಮಾಡುತ್ತಿದ್ದರೂ ಆ ಸಂಸ್ಥೆಗೆ ಲಾಸ್ ಆಗುತ್ತಿದೆ. ಅದೇ ತಮಿಳುನಾಡು ರೋಡ್ ಟ್ರಾನ್ಸ್‌ಪೋರ್ಟ್ ಸರ್ವೀಸ್‌ನವರು ಒಳ್ಳೆಯ ಲಾಭದಾಯಕವಾಗಿ ನಡೆಸುತ್ತಿದ್ದಾರೆ. ಅದೇ ರೀತಿ ನಮ್ಮ ಟ್ರಾನ್ಸ್‌ಪೋರ್ಟ್ ಸಂಸ್ಥೆಯೂ ಲಾಭ ಗಳಿಸುವ ಹಾಗೆ ಮಾರ್ಪಾಡುಗಳನ್ನು ಮಾಡುವ ಕಡೆ ಸರ್ಕಾರವು ಗಮನ ಹರಿಸಬೇಕು. ಬಸ್‌ನ ಒಳಗಡೆಯಲ್ಲಿ ಕಿಕ್ಕಿರಿದು ಜನರು ತುಂಬಿದ್ದು ಬಸ್‌ನ ಮೇಲೆಯೂ ಸಾಕಷ್ಟು ಜನರು ಕುಳಿತುಕೊಂಡು ಪ್ರಯಾಣ ಮಾಡುವ ಪರಿಸ್ಥಿತಿಯನ್ನು ನಾವು ನೋಡುತ್ತಿದ್ದೇವೆ. ಅಂಥ ಕಡೆಗಳಲ್ಲಿ ಸಾಕಷ್ಟು ಬಸ್‌ಗಳನ್ನು ಹಾಕಿ, ಅನಾಹುತುಗಳನ್ನು ತಪ್ಪಿಸ ಬೇಕೆಂದು ಕೇಳಿಕೊಳ್ಳುತ್ತೇನೆ. ಅಂತೆಯೇ ಆಶ್ರಯ ಮುಂತಾದ ಯೋಜನೆಗಳಡಿಯಲ್ಲಿ ನಿರ್ವಸತಿಗರಿಗೆ, ಬಡವರಿಗೆ ಮನೆಗಳನ್ನು ನೀಡಿದ್ದಾರೆ. ಹಾಗೆಯೇ ಸರಕಾರದವರು ಇನ್ನು ಮುಂದೆ ನೀಡಲಿರುವ ಮನೆಗಳಿಗೆ ಮಾನ್ಯ ದೇವರಾಜ್ ಅರಸ್‌ರವರ ಹೆಸರನ್ನು ಇಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನೂ ಹೇಳಬೇಕಾದ ವಿಚಾರಗಳು ಬಹಳಷ್ಟು ಇದ್ದರೂ ಕೂಡ ಸಮಯಾವಕಾಶದ ಅಭಾವದಿಂದ ನನ್ನ ಮಾತುಗಳನ್ನು ಮುಗಿಸುವ ಮೊದಲು ಸನ್ಮಾನ್ಯ ಅಧ್ಯಕ್ಷರಿಗೆ ನನಗೆ ಕಾಲಾವಕಾಶವನ್ನು ಮಾಡಿಕೊಟ್ಟಿದ್ದಕ್ಕಾಗಿ ಕೃತಜ್ಞತೆಗಳನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

* ಶ್ರೀಮತಿ ಎನ್.ಜ್ಯೋತಿರೆಡ್ಡಿ (ಗೌರಿಬಿದನೂರು) : ಸನ್ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ರಾಜ್ಯಪಾಲರು ದಯಪಾಲಿಸಿದ ಭಾಷಣವನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತಾ ಕರ್ನಾಟಕ ರಾಜ್ಯದ ಜನತೆ ನಮ್ಮ ಪಕ್ಷಕ್ಕೆ ತಮ್ಮ ಪೂರ್ಣ ಬೆಂಬಲವನ್ನು

ಇತ್ತು ಆಶೀರ್ವದಿಸಿ ರಾಜ್ಯದಲ್ಲಿ ಜನತಾದಳದ ಸರಕಾರವನ್ನು ರಚನೆ ಮಾಡಲು ಅನುಕೂಲ ಮಾಡಿಕೊಟ್ಟಿದ್ದಕ್ಕಾಗಿ ಜನತಾಜನಾರ್ಧನರಿಗೆಲ್ಲಾ ನನ್ನ ಕೃತಜ್ಞತೆಗಳನ್ನು ಮೊದಲಿಗೆ ಸಲ್ಲಿಸುತ್ತೇನೆ. ಜನತೆಯು ನಮಗೆ ವಿಶ್ವಾಸದಿಂದ ಕೊಟ್ಟ ಈ ಅಧಿಕಾರವನ್ನು ಜನತೆಯ ಪರವಾಗಿ ಮಾಡಿ ಅವರಿಂದ ಮೆಚ್ಚುಗೆಯನ್ನು ಪಡೆಯುವಲ್ಲಿ ನಮ್ಮ ಸರಕಾರವು ಶ್ರಮಿಸುತ್ತದೆ ಎಂಬ ಭರವಸೆ ನಮ್ಮದು. ಜನತೆಯ ಅಣತಿಯ ಸದ್ವಿನಿಯೋಗವನ್ನು ಮಾಡಿಕೊಂಡು ಜನತೆಗಾಗಿ ತನ್ನೆಲ್ಲಾ ಶ್ರಮವನ್ನು ವಹಿಸಿ ಒಳ್ಳೆಯ ದಾರಿಯಲ್ಲಿ ನಮ್ಮ ಸರಕಾರ ಮುನ್ನೆಡೆಯುತ್ತದೆ ಎಂಬುದು ನನ್ನ ನಂಬಿಕೆ. ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಮುಖ್ಯತ: ಹುಬ್ಬಳ್ಳಿಯ ಈದ್ಗಾ ಮೈದಾನದ ವಿವಾದಾತ್ಮಕ ವಿಷಯವನ್ನು ಬಹಳ ಸೂಕ್ತ ರೀತಿಯಲ್ಲಿ ಬಗೆಹರಿಸಿರುವುದನ್ನು ಉಲ್ಲೇಖಿಸಿದ್ದಾರೆ...

(ಸದನದ ವಿದ್ಯುತ್‌ಚ್ಛಕ್ತಿ ಸಂಪರ್ಕ ನಿಂತು ಹೋಯಿತು)

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಸದನದಲ್ಲಿ ಹಿಂದೆಂದೂ ಈ ರೀತಿಯಲ್ಲಿ ವಿದ್ಯುಚ್ಚಕ್ತಿಯ ಪೂರೈಕೆಯು ನಿಂತು ಹೋಗಿಲ್ಲ. ಬಹುಶಃ ಇದೇ ಮೊದಲ ಉದಾಹರಣೆ ಇರಬಹುದು. ಸಂಪೂರ್ಣವಾಗಿ ಸದನದಲ್ಲಿ ಕತ್ತಲು ಆವರಿಸಿದೆ. ವಿದ್ಯುಚ್ಚಕ್ತಿಯ ವಿಚಾರದಲ್ಲಿ ನಮ್ಮ ಮಹಾನ್ ಸದನದ ಕಥೆಯೇ ಹೀಗಾದರೆ ರಾಜ್ಯದಲ್ಲಿ ಇತರರ ಪರಿಸ್ಥಿತಿಯ ಬಗ್ಗೆ ಗಂಭೀರವಾಗಿ ಯೋಚಿಸಬೇಕು. ಮಾನ್ಯ ಪಟೇಲ್‌ರವರು ಇದು ಹೀಗೆ ಏಕೆ ಎಂದು ಕೇಳಿದರೆ ಕಥೆಹೇಳಲು ಪ್ರಾರಂಭ ಮಾಡುತ್ತಾರೆ...

ಶ್ರೀ ಜೆ.ಹೆಚ್. ಪಟೇಲ್ : ಇದು ಹೀಗೆ ಏಕೆ ಆಯಿತು ಎಂದು ತಾವು ತಾಳ್ಮೆಯಿಂದ ಕೇಳುವುದಾದರೆ ತಾಂತ್ರಿಕ ಲೋಪದೋಷಗಳ ಬಗ್ಗೆ ನಾನು ಹೇಳಬಹುದು.

ಅಧ್ಯಕ್ಷರು : ಶ್ರೀಮತಿ ಜ್ಯೋತಿ ರೆಡ್ಡಿಯವರು ತಮ್ಮ ಭಾಷಣವನ್ನು ಮುಂದುವರಿಸಿ..

ಶ್ರೀ ವಾಟಾಳ್ ನಾಗರಾಜ್‌ರವರು : ಶ್ರೀಮತಿ ಜ್ಯೋತಿ ರೆಡ್ಡಿಯವರು ಭಾಷಣ ಪ್ರಾರಂಭ ಮಾಡುವಾಗಲೇ ಈ ರೀತಿಯಲ್ಲಿ ಕರೆಂಟ್ ಹೋಗಬೇಕೇ? ಪಾಪ, ಅವರಿಗೆ ಮಾನ್ಯ ಅಧ್ಯಕ್ಷರು ಅವಕಾಶ ಮಾಡಿಕೊಡಬೇಕು.

ಶ್ರೀಮತಿ ಎನ್. ಜ್ಯೋತಿರೆಡ್ಡಿ : ಮಾನ್ಯ ಅಧ್ಯಕ್ಷರೇ, ಅಕಸ್ಮಾತ್ತಾಗಿ ಕರೆಂಟ್ ಲೋಪದಿಂದ ನನ್ನ ಮಾತಿಗೆ ಆಡಚಣೆಯಾಯಿತು. ನನಗೆ ತಾವು ಅವಕಾಶ ಕೊಟ್ಟಿದ್ದೀರಿ. ಅದನ್ನು ಪಡೆದು ನಾನು ನನ್ನ ಮಾತುಗಳನ್ನು ಹೇಳ ಬಯಸುತ್ತೇನೆ. Don't give us chance saying 'paapa'. We don't want any sympathy. We are having a right to speak here. I don't want any sympathy from anybody. ನಮ್ಮ ಸರಕಾರದವರು ಬಹಳ ಶಾಂತಿಯುತವಾಗಿ 1992ರ ಜನವರಿಯಿಂದಲೂ ಹುಬ್ಬಳ್ಳಿಯಲ್ಲಿನ ಈದ್ಗಾ ಮೈದಾನ ವಿವಾದ ಏನಿತ್ತು, ಅದನ್ನು ಯಾರಿಗೂ ಮನನೋಯದಂತೆ ಸೌಹಾರ್ದಯುತವಾಗಿ ಬಗೆಹರಿಸಿ ಜನತೆಯ ಮೆಚ್ಚುಗೆಯನ್ನು ಪಡೆದಿದ್ದಾರೆ. ತಾಲ್ಲೂಕು, ಜಿಲ್ಲಾ ಮತ್ತು ಪಂಚಾಯತ್ ಮಟ್ಟದಲ್ಲಿ ಅಧಿಕಾರ ವಿಕೇಂದ್ರೀಕರಣವನ್ನು ಬಹಳ ಅರ್ಥಪೂರ್ಣವಾದ ರೀತಿಯಲ್ಲಿ ಜಾರಿಗೆ ತರುವಲ್ಲಿ ಸೂಕ್ತ ಮತ್ತು ಸಕಾಲಿಕ ಕ್ರಮವನ್ನು ತೆಗೆದುಕೊಂಡಿದೆ. ಸಮಾಜದ ಎಲ್ಲಾ ವರ್ಗದವರಿಗೂ ಅದರಲ್ಲಿಯೂ ಹಿಂದುಳಿದವರಿಗೆ ಸಾಮಾಜಿಕ ನ್ಯಾಯವನ್ನು ಒದಗಿಸಿಕೊಟ್ಟು

ಅವರೂ ಆಡಳಿತದಲ್ಲಿ ಪಾಲ್ಗೊಳ್ಳಲು ಮೀಸಲಾತಿಯನ್ನು ಜಾರಿಗೆ ತಂದು ಅದರಂತೆ ಚುನಾವಣೆಯನ್ನು ನಡೆಸಿ ಜನತೆಯಿಂದ ಮೆಚ್ಚುಗೆಯನ್ನು ನಮ್ಮ ಸರಕಾರವು ಪಡೆದುಕೊಂಡಿದೆ. ಪಡಿತರ ವ್ಯವಸ್ಥೆಯ ಮುಖೇನ ಜನಸಾಮಾನ್ಯರಿಗೆ 3-20ರೂಗಳಿಗೆ ಒಂದು ಕೇಜಿ ಅಕ್ಕಿಯನ್ನು ವಿತರಣೆ ಮಾಡಿ ಬಡಜನತೆಗೆ ಆಶಾದಾಯಕ ಬದುಕನ್ನು ಕೊಟ್ಟಿದ್ದಾರೆ. ಹಾಗೆಯೇ ರೈತರುಗಳ ಸಾಲದ ಮೇಲಿನ ಸುಸ್ತಿಬಡ್ಡಿಯನ್ನು ಕೂಡ ಮನ್ನಾ ಮಾಡಿದ್ದಾರೆ. ಇಂಥ ಒಂದು ಜನತೆಯ ನೋವು ನಲಿವಿಗೆ ಸ್ಪಸ್ಪಂಧಿಸುವಂಥ ಸರಕಾರವನ್ನು ಜನತೆಯ ಅಣತಿಯನ್ನು ಪಡೆದು ನಾವು ಮುನ್ನಡಿಸಿಕೊಂಡು ಹೋಗುತ್ತಿದ್ದೇವೆ. ಇನ್ನು ನೀರಾವರಿ ಯೋಜನೆಗಳ ಬಗ್ಗೆ ಹೇಳುವುದಾದರೆ ನಮ್ಮ ರಾಜ್ಯದ ಕೆಲವು ಭಾಗಗಳಲ್ಲಿ ಮಾತ್ರ ನೀರಾವರಿಯ ಸೌಲಭ್ಯವಿದ್ದು, ಕೋಲಾರ ಚಿತ್ರದುರ್ಗ ಮುಂತಾದ ಕೆಲವು ಜಿಲ್ಲೆಗಳಿಗೆ ಅಂಥ ಸೌಲಭ್ಯವಿಲ್ಲದೆ ಜನತೆಯು ಸಮಸ್ಯೆಗಳನ್ನು ಎದುರಿಸಬೇಕಾಗಿದೆ. ನಮ್ಮಲ್ಲಿ ಹಿಂದಿನಿಂದಲೂ ಕನ್‌ವೆನ್‌ಶನಲ್ ಕ್ರಾಫ್‌ಗಳನ್ನು ಮಾಡಿಕೊಂಡು ಬಂದಿದ್ದಾರೆ. ಈ ಆಧುನಿಕ ಯುಗದಲ್ಲಿ ನಾವು ಕೃಷಿ ಕ್ಷೇತ್ರವನ್ನು ಅಭಿವೃದ್ಧಿ ಪಡಿಸಲೇಬೇಕಾಗಿದೆ. ಫ್ಲೋರಿಕಲ್ಚರ್ ಹಾರ್ಟಿಕಲ್ಚರ್ ಮುಂತಾದ ಕ್ಷೇತ್ರಗಳಿಗೆ ಗಣನೀಯ ಸೌಲಭ್ಯ ಇತ್ಯಾದಿಗಳನ್ನು ಕೊಟ್ಟು ಕೃಷಿಕರಿಗೆ ನೆರವಾಗಬೇಕಾಗಿದೆ. ಆ ದಿಶೆಯಲ್ಲಿ ಸರಕಾರದವರು ನೀರಾವರಿ ಕ್ಷೇತ್ರದಲ್ಲಿ ಸಾಕಷ್ಟು ಬಂಡವಾಳ ಹೂಡಿದ್ದರೂ ಅದಕ್ಕೆ ಪ್ರತಿಫಲವಾಗಿ ಸಾಕಷ್ಟು ಕೃಷಿ ಉತ್ಪಾದನೆಯಾಗಿಲ್ಲ ಎಂಬುದನ್ನು ಮನಗಂಡಿದ್ದಾರೆ ಸರ್ಕಾರವು ನೀರಾವರಿ ಮತ್ತು ಒಣ ಭೂಮಿಗಳಿಗೆ ಸಂಬಂಧಪಟ್ಟ ಹಾಗೆ ವ್ಯಾಪಕವಾದ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವ ದಿಶೆಯಲ್ಲಿ ಹಲವಾರು ಕಾರ್ಯಕ್ರಮಗಳನ್ನು ಹಾಕಿಕೊಂಡಿರುವುದು ಸ್ವಾಗತಾರ್ಹ. ನೀರಾವರಿ ವಿಚಾರದಲ್ಲಿ ನಮ್ಮ ಕೋಲಾರ ಜಿಲ್ಲೆಯು ತೀರಾ ವಂಚಿತಪ್ರದೇಶ ಎಂದು ಹೇಳಲೇಬೇಕಾಗುತ್ತದೆ. ನಮ್ಮಲ್ಲಿ ಯಾವುದೇ ನೀರಾವರಿ ಯೋಜನೆಗಳು ಇಲ್ಲ. ಯಾವುದಾದರೂ ಒಂದು ಯೋಜನೆಯನ್ನು ನಮ್ಮಲ್ಲಿ ತಂದು ಕೃಷಿಕರಿಗೆ ನೀರಾವರಿಯ ಅನುಕೂಲತೆಯ ವ್ಯವಸ್ಥೆಯನ್ನು ಮಾಡಿಕೊಡಬೇಕಾಗಿ ಸರಕಾರದವರಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ. ಲಿಫ್ಟ್ ಇರಿಗೇಷನ್ ಮುಂತಾದ ಸ್ಕೀಮ್‌ಗಳನ್ನು ನಮ್ಮಲ್ಲಿ ತಂದು ನೀರಾವರಿಯ ಅನುಕೂಲವನ್ನು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ನಮ್ಮ ಗೌರಿಬಿದನೂರು ತಾಲ್ಲೂಕು ತುಂಬಾ ಹಿಂದುಳಿದ ಪ್ರದೇಶ. ಇಲ್ಲಿ ನೀರಾವರಿಯ ವಿಚಾರದಲ್ಲಾಗಲೀ, ವಿದ್ಯಾಭ್ಯಾಸದ ವಿಚಾರದಲ್ಲಿಯೇ ಆಗಲಿ ಸೂಕ್ತ ಸೌಲಭ್ಯಗಳೇ ಇಲ್ಲ. ನಮ್ಮಲ್ಲಿನ ರೈತರು ಒಂದು ಬೋರ್‌ವೆಲ್‌ನ್ನು ತೆಗೆಯಬೇಕೆಂದುಕೊಂಡರೂ ಕೂಡ ಅವರಿಗೆ ಬ್ಯಾಂಕ್‌ಗಳಲ್ಲಿ ಸಾಲಸೌಲಭ್ಯಗಳ ವ್ಯವಸ್ಥೆ ಇಲ್ಲ. ಸೆಂಟ್ರಲ್ ಜಿಯಾಲಾಜಿಕಲ್ ಸರ್ವೆಯವರು ನಮ್ಮ ಪ್ರದೇಶವನ್ನು ಟಾರ್ಗೆಟ್ ಏರಿಯಾ ಎಂದು ಮಾಡಿದ್ದಾರೆ. ಈ ಬಗ್ಗೆ ಸರಕಾರದವರು ಸೂಕ್ತ ಕ್ರಮವನ್ನು ಜರುಗಿಸಿ ನಮ್ಮ ರೈತರುಗಳಿಗೆ ಬ್ಯಾಂಕ್ ಸಾಲ ಸೌಲಭ್ಯ ದೊರೆಯುವಂತೆ ಮಾಡಬೇಕು. 1965-70ರ ಅವಧಿಯಲ್ಲಿ ಒಂದು ಸರ್ವೆ ಮಾಡಿ ನಮ್ಮ ತಾಲ್ಲೂಕಿನಲ್ಲಿ 35 ಪರ್‌ಸೆಂಟ್‌ನಷ್ಟು ಮತ್ತು ಅದಕ್ಕಿಂತಲೂ ಜಾಸ್ತಿ ಭಾಗವು ಇರಿಗೇಷನ್ ಲ್ಯಾಂಡ್ ಇದೆ ಎಂದು ಹೇಳಿದ್ದಾರೆ. ನಮ್ಮ ತಾಲ್ಲೂಕ್‌ನ್ನು ಎನ್‌ಡಿಪಿಎಪಿ ತಾಲ್ಲೂಕು ಎಂದು ಡಿಕ್ಲೇರ್ ಮಾಡಿದ ಮೇಲೆ ನಮಗೆ ಎಂಪ್ಲಾಯಮೆಂಟ್ ಎಫ್‌ರ್‌ಮೇಷನ್ ಸ್ಕೀಮ್‌ಗಳ ಮೂಲಕ ಆರ್ದಿಕ ಸೌಲಭ್ಯಗಳು ಸಿಗುತ್ತಾ ಇಲ್ಲ.

ಆದ್ದರಿಂದ ನಮ್ಮ ತಾಲ್ಲೂಕನ್ನು ಡಿಪಿಎಪಿ ತಾಲ್ಲೂಕು ಎಂದು ಪರಿಗಣಿಸಬೇಕಾಗಿ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇನ್ನು ನಮ್ಮ ಭಾಗದಲ್ಲಿ ಕುಡಿಯುವ ನೀರಿನ ವಿಚಾರದಲ್ಲಿ ತುಂಬಾ ಸಮಸ್ಯೆಯು ಉದ್ಭವವಾಗಿದೆ. ಸರಕಾರದವರು ಈ ಬಗ್ಗೆ ಸಾಕಷ್ಟು ಹಣ ಬಿಡುಗಡೆ ಮಾಡಿರುವುದು ಸತ್ಯಾರ್ಹವಾದರೂ ಸಮರ್ಪಕವಾಗಿ ವ್ಯವಸ್ಥೆಯು ಆಗುತ್ತಿಲ್ಲ. ಪ್ರತಿಯೊಂದು ಹೆಡ್‌ಕ್ವಾರ್ಟರ್ಸ್‌ನಲ್ಲಿಯೂ, ಸಬ್‌ಡಿವಿಜನ್‌ಗಳಲ್ಲಿಯೂ ಕೆಲವು ಪಂಪ್‌ಸೆಂಟ್‌ಗಳನ್ನು ಹೆಚ್ಚು ಇಟ್ಟುಕೊಳ್ಳಬೇಕು. ಬೋರ್‌ವೆಲ್‌ಗಳು ನಿಷ್ಪ್ರಯೋಜಕವಾದಲ್ಲಿ ಕೂಡಲೇ ಬೇರೆಕಡೆಗಳಲ್ಲಿ ಹಾಕಿ ಜನರಿಗೆ ಅನುಕೂಲ ಮಾಡಿಕೊಡಬೇಕು. ಪ್ರತಿಯೊಂದು ಸಬ್‌ಡಿವಿಜನ್‌ನಲ್ಲಿಯೂ 5-10ಹೆಚ್ಚು ಪಂಪ್‌ಸೆಟ್‌ಗಳನ್ನು ಇಟ್ಟುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಕೆಲವು ವ್ಯಕ್ತಿಗಳು ಟ್ಯಾಂಕ್‌ಗಳ ಪಕ್ಕದ ಜಮೀನನ್ನು ಒತ್ತುವರಿ ಮಾಡಿಕೊಂಡು ಅದು ತಮ್ಮದೇ ಎಂದು ಹೇಳಿಕೊಂಡು ಬೋಗಸ್ ಖಾತಾ ಇತ್ಯಾದಿಗಳನ್ನು ಮಾಡಿಕೊಂಡು ಅಕ್ರಮವೆಸಗಿದ್ದಾರೆ. ನಮ್ಮ ಭಾಗದ ಕರಚನಲಹಳ್ಳಿಯಲ್ಲಿನ ಹಿಂದೆ ಇದ್ದ ಒಂದು ಇರಿಗೇಷನ್ ಟ್ಯಾಂಕ್‌ನ್ನು ಅಕ್ಕಪಕ್ಕದವರು ಒತ್ತುವರಿ ಮಾಡಿಕೊಂಡಿದ್ದು ಅದರಿಂದ ಸಮಸ್ಯೆಯುಂಟಾದ ಬಗ್ಗೆ ಸರಕಾರದ ಗಮನಕ್ಕೆ ತಂದಿದ್ದೆವು. ಆದರೆ ಅದರ ಬಗ್ಗೆ ಸೂಕ್ತ ಕ್ರಮವನ್ನು ಸರಕಾರದವರು ಇನ್ನೂ ತೆಗೆದುಕೊಂಡಿಲ್ಲ. ಆ ಬಗ್ಗೆ ನ್ಯಾಯಾಲಯದ ಮೊರೆ ಹೋಗ-ಬೇಕಾಗಿಬಂತು. ಇದರ ಬಗ್ಗೆ ಸರಕಾರದವರು ಗಮನಹರಿಸಬೇಕೆಂದು ಅರಿಕೆ ಮಾಡಿಕೊಳ್ಳುತ್ತೇನೆ. ಇನ್ನು ವಿದ್ಯುಚ್ಛಕ್ತಿಯ ಕುರಿತು ನಾನೇನೂ ಹೇಳಬೇಕಾಗಿಲ್ಲ. ಈ ಸದನದಲ್ಲಿಯೇ ಕರೆಂಟ್‌ನಿಂತು ಹೋದ ಉದಾಹರಣೆಯನ್ನು ಜ್ಞಾಪಿಸಿಕೊಳ್ಳಬಹುದು. ಇಲ್ಲಿಯೇ ಹೀಗೆ ಇದೆ ಎಂದ ಮೇಲೆ ಹಳ್ಳಿಗಾಡುಗಳಲ್ಲಿನ ಪರಿಸ್ಥಿತಿಯನ್ನು ಬೇರೆ ಹೇಳಬೇಕಾಗಿಲ್ಲ. ಹಳ್ಳಿಗಳಲ್ಲಿ ವ್ಯವಸ್ಥೆಗೊಳಿಸಿದ ಟ್ರಾನ್ಸ್‌ಫಾರ್ಮರ್‌ಗಳು ಸರಿಯಾಗಿಲ್ಲ, ಮತ್ತು ಸೂಕ್ತ ಪ್ರಮಾಣದಲ್ಲಿ ಇಲ್ಲ. ಇಲ್ಲಿ ಕೆಲವು ಕೆಟ್ಟುಹೋದ ಟ್ರಾನ್ಸ್‌ಫಾರ್ಮ್‌ರ್‌ಗಳನ್ನು ಹೊಸದಾಗಿ ಅಳವಡಿಸಲಾಗಿಲ್ಲ. ದಯಮಾಡಿ ಆ ಬಗ್ಗೆ ಸೂಕ್ತ ಕ್ರಮವನ್ನು ತೆಗೆದುಕೊಂಡು ಜನರಿಗೆ ಅನುಕೂಲ ಮಾಡಿಕೊಡಬೇಕಾಗಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

7.20 ಪಿ.ಎಂ

ಗ್ರಾಮ ನೈರ್ಮಲ್ಯದ ಬಗ್ಗೆ ಹೇಳಬೇಕಾದರೆ ಇದರಿಂದ ತುಂಬಾ ಕಷ್ಟಪಡುತ್ತಿರುವವರು ಹಳ್ಳಿಗಾಡಿನ ಹೆಣ್ಣುಮಕ್ಕಳು ಎಂದು ತಮಗೆಲ್ಲಾ ಗೊತ್ತಿದೆ. because of lack of public lavatories or personal ones. ಇದರ ಬಗ್ಗೆ ಈಗಾಗಲೇ ಕೆಲವು ಸ್ಕೀಮ್ಸನ್ನು ಹಿಂದಿನ ವರ್ಷ ಸ್ಟಾರ್ಟ್ ಮಾಡಿದ್ದಾರೆ. ಇವರು ತಲಾ ಲ್ಯಾವೆಟರಿ ಕಟ್ಟಲು 3500 ರೂ ವ್ಯವಸ್ಥೆ ಮಾಡಿದ್ದಾರೆ. ದಯವಿಟ್ಟು ನೀವು ಯೋಚನೆ ಮಾಡಬೇಕಾಗಿದೆ, 3500 ರೂನಲ್ಲಿ ಎಂತಹ ಲ್ಯಾಟ್ರಿನ್ ಕಟ್ಟಲು ಅವಕಾಶ ಇರುತ್ತದೆ ಅನ್ನುವುದನ್ನು. ಅದೂ ಅಲ್ಲದೆ ಕೆಲಸವನ್ನು ಕೆಲವು ಸ್ವಯಂಸೇವಾ ಸಂಸ್ಥೆಗೆ ಕೊಟ್ಟಿದ್ದಾರೆ. ಇದರಲ್ಲಿ 700 ರೂ ಫಲಾನುಭವಿಯಿಂದ ಪಡೆಯಬೇಕೆಂದು ಜಿ.ಓ ಬಂದಿದೆಯಂತೆ ಹಾಗಾಗಿ ಅವರು 700 ರೂ ತೆಗೆದುಕೊಳ್ಳುತ್ತಿದ್ದಾರೆ. ಇನ್ನು ಉಳಿದಿರುವ 2800 ರೂ ಅವರು ಸ್ಪೆಂಡ್ ಮಾಡಿರುವ ವ್ಯವಸ್ಥೆ ಅಲ್ಲಿ ಕಾಣುತ್ತಿಲ್ಲ. ನಾನು ಹೋಗಿ

ಆ ಲೆಟ್ರಿನ್‌ಗಳನ್ನು ನೋಡಿದ್ದೇನೆ. ತುಂಬಾ ಕಳಪೆ ಲೆಟ್ರಿನ್ ಕಟ್ಟಿಸಿಕೊಟ್ಟಿದ್ದಾರೆ. ಇಂಥವು ಬೇಕಾಗಿಲ್ಲ, ಕೊಡುವಹಾಗಿದ್ದರೆ ಒಳ್ಳೆಯ ಲೆಟ್ರಿನ್‌ಗಳನ್ನು ಕೊಡಿ. ಇಲ್ಲದಿದ್ದರೆ ಬಿಟ್ಟುಬಿಡಿ. ಆ ಹೆಣ್ಣುಮಕ್ಕಳು ಆಚೀನೆ ಹೋಗುವಂತಹ ವ್ಯವಸ್ಥೆಯನ್ನು ಮಾಡಿಕೊಳ್ಳಲಿ. ಇನ್ನು ಹೌಸಿಂಗ್ ಪ್ರಾಬ್ಲಮ್ ಬಂದಾಗ ಲಾಸ್ಟ್ 91ರಲ್ಲಿ ಫ್ಲಡ್ ಡ್ಯಾಮೇಜ್ಡ್ ಹೌಸಸ್ ಎಂದು 6000 ಮನೆಗಳನ್ನು ನಮ್ಮ ತಾಲೂಕಿನಲ್ಲಿ ಕಟ್ಟಿಸಿಕೊಡುತ್ತೇವೆಂದು ತಿಳಿಸಿದ್ದರು. ಇವತ್ತಿನವರೆಗೂ ಅದರ ಬಗ್ಗೆ ಏನೂ ವ್ಯವಸ್ಥೆ ಮಾಡಿಲ್ಲ. ನಾವು ಅದರ ಬಗ್ಗೆ ಸ್ವಲ್ಪ ಹೋರಾಟ ಮಾಡಿದಾಗ ಅದರ ಬಗ್ಗೆ ಏನೋ ಸಿಓಡಿ ತನಿಖೆ ಮಾಡಿದ್ದೇವೆ, ಬೆಂಗಳೂರಿನ ಹೌಸಿಂಗ್‌ಬೋರ್ಡಿಗೆ ವಹಿಸಿದ್ದೆವು ಅದು ಸರಿಯಾಗಿ ನಡೆಯಲಿಲ್ಲ ಎಂದರು ಇದರ ಬಗ್ಗೆ ತಾವು ಗಮನಹರಿಸಿ ಈ ಫ್ಲಡ್ ಡ್ಯಾಮೇಜ್ 6000 ಹೌಸೆಸ್ ಏನಿವೆ ಅದಕ್ಕೆ ಬೇರೆ ಒಂದು ಅವಕಾಶ ಮಾಡಿಕೊಡಬೇಕೆಂದು ತಮ್ಮನ್ನು ಕೇಳಿಕೊಳ್ಳುತ್ತಾ ಈ ಸೈಟ್‌ಲೆಸ್ ಪೀಪಲ್‌ಗೆ ಹಕ್ಕುಪತ್ರ ಕೊಡುವಾಗ ಅದನ್ನು ಹಸ್ಬೆಂಡ್-ವೈಫ್ ಹೆಸರಲ್ಲಿ ಜಾಯಿಂಟಾಗಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಟ್ರಾನ್ಸ್‌ಪೋರ್ಟ್ ವಿಷಯಕ್ಕೆ ಬಂದಾಗ ಯಾವುದೇ ಸರ್ಕಾರ ಇದನ್ನು ಸರಿಮಾಡಲು ಅವಕಾಶ ಇಲ್ಲ. Because of high population we can't supply buses to each and every village. ತಮಗೆಲ್ಲರಿಗೂ ಗೊತ್ತಿದೆ. ಆದರೂ ಬೆಂಗಳೂರಿನಲ್ಲಿ ಸಿಟಿ ಬಸಸ್ ಎಂದು ರನ್ ಮಾಡುತ್ತಿರುವಂತೆ ಪ್ರತಿತಾಲೂಕಿನಲ್ಲೂ ನಾಲ್ಕೈದು ಬಸ್‌ಗಳನ್ನು ಇಡೀ ತಾಲ್ಲೂಕು, ಹಳ್ಳಿಗಳಿಗೆ ಹೋಗಿಬರುವಂತಹ ವ್ಯವಸ್ಥೆ ಮಾಡಿಕೊಡಬೇಕೆಂದು ತಮ್ಮನ್ನು ಕೇಳಿಕೊಳ್ಳುತ್ತಿದ್ದೇನೆ. ಪ್ರೈಮರಿ ಹೆಲ್ತ್‌ಸೆಂಟರ್‌ಗಳಲ್ಲಿ ತುಂಬಾ ವೇಕ್‌ನ್ಸೀಸ್ ಇದೆ. ಅದನ್ನೆಲ್ಲಾ ಫಿಲಪ್ ಮಾಡಿ ಹಳ್ಳಿಗಾಡಿನಲ್ಲಿ ಕೆಲಸ ಮಾಡುವ ವೈದ್ಯಾಧಿಕಾರಿಗಳನ್ನು ಹಾಕಿಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಶಿಕ್ಷಣದ ವಿಚಾರದಲ್ಲಿ ಇನ್ನೂ ಹಳ್ಳಿಗಾಡಿನಲ್ಲಿ ಸರಿಯಾದ ಸೌಲಭ್ಯ ಇಲ್ಲವೆಂದು ನಾನು ಭಾವಿಸುತ್ತಿದ್ದೇನೆ. ವಿಶೇಷವಾಗಿ ಗರ್ಲ್ ಶಿಕ್ಷಣ ನಮ್ಮ ಸಮಾಜದಲ್ಲಿ ಅಷ್ಟಾಗಿ ಅಭಿವೃದ್ಧಿಯಾಗಿಲ್ಲ ಈ ಪ್ರೈಮರಿ ಬುಕ್ಸ್‌ಗಳಿಂದಲೇ ಮಾನಸಿಕವಾಗಿ ಹೆಣ್ಣುಮಕ್ಕಳಿಗೆ ಆಸಕ್ತಿ ಇಲ್ಲದಂತೆ ಮಾಡುತ್ತಿದ್ದೇವೆ, ಇದನ್ನು ತಮ್ಮ ಗಮನಕ್ಕೆ ಏಕೆ ತರುತ್ತಿದ್ದೇವೆ. ಎಂದರೆ ಪ್ರಿಸ್ಕೂಲಿಂಗ್ ಬುಕ್ಸ್ ಯಾವುದರಲ್ಲಾಗಲಿ ಭಾವಚಿತ್ರ ಹಾಕುತ್ತಾರೆ, ಅದರಲ್ಲಿ ಅಡಿಗೆ ಮನೆ ಕೆಲಸಮಾಡುವಾಗ ಹೆಣ್ಣುಮಕ್ಕಳ ಚಿತ್ರ ಹಾಕುತ್ತಾರೆ. It shows that from the beginning when the girl child go to the school there it self we are psychologically creating a feeling that her only duty is cooking in the house. ಎಂಬ ಮಾನಸಿಕ ಭಾವನೆ ಬೆಳೆಸುತ್ತಿದ್ದೇವೆ. ಹಾಗಾಗಿ ಇದರ ಬಗ್ಗೆ ಬೇಕಾದರೆ ತಜ್ಞರನ್ನು ವಿಚಾರಿಸಿ why can't you show a Doctor as a girl? ಎಂಬುದು ನನ್ನ ಅನಿಸಿಕೆ. ಒಬ್ಬ ಡಾಕ್ಟರ ಚಿತ್ರ ತೋರಿಸುವಾಗ ಪುರುಷರನ್ನು ತೋರಿಸುತ್ತಾರೆ, ಅದನ್ನೇ ಹೆಣ್ಣು ಮಕ್ಕಳನ್ನು ಏಕೆ ತೋರಿಸಬಾರದೆಂದು ನಾನು ಹೇಳುತ್ತಿದ್ದೇನೆ, ಅಡಿಗೆ ಮಾಡುವುದು ತಪ್ಪು ಎಂದು ಅಲ್ಲ. ಅದಕ್ಕೋಸ್ಕರವೇ ನಾವಿದ್ದೇವೆ ಎಂಬ ಭಾವನೆ ಹೆಣ್ಣುಮಕ್ಕಳಲ್ಲಿ ತರಬಾರದೆಂಬ ಉದ್ದೇಶದಿಂದ ನಾನು ಹೇಳುತ್ತಿದ್ದೇನೆ.who is woman? Woman is a deprived and

exploited class in the society. I am requesting the Government to give us some developmental schemes rather than welfare schemes. ಇದನ್ನು ಮಹಿಳಾ ಅಭಿವೃದ್ಧಿ ಕಾರ್ಯಕ್ರಮಗಳನ್ನು ಮಾಡಿದರೆ ಒಳ್ಳೆಯದೆಂದು ನನಗೆ ಅನ್ನಿಸಿಕೆ. ಈ ವಿಷಯದ ಬಗ್ಗೆ ಒಂದು ಚಿಕ್ಕ ವಿನಂತಿ ಮಾಡುತ್ತೇನೆ. ಮಹಿಳಾ ಮಂಡಲಗಳನ್ನು ಸ್ಥಾಪನೆ ಮಾಡಬೇಕೆಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ನಮಗೆಲ್ಲಾ ಬಂದಿತ್ತು. ಆದರೆ ಹಾಗೆ ಮಹಿಳಾಮಂಡಲ ಸ್ಥಾಪನೆ ಮಾಡಬೇಕೆಂದು ಹೋದಾಗ ರಿಜಿಸ್ಟ್ರೈಷನ್ ಫೀ 100 ಇದ್ದರೆ ಸಾವಿರ ರೂ ಬ್ರೈಬ್ ಕೊಡದೇ ಇದ್ದರೆ ಅವರು ರಿಜಿಸ್ಟ್ರೇಷನ್ ಮಾಡಿಕೊಡುತ್ತಿಲ್ಲ. ಇಂತಹ ವ್ಯವಸ್ಥೆ ಇದೆ. ಹಳ್ಳಿಗಾಡಿನಹೆಣ್ಣುಮಕ್ಕಳು ಸಾವಿರ ಲಂಚ್ ಕೊಟ್ಟು ರಿಜಿಸ್ಟರ್ ಮಾಡಿಸಿಕೊಳ್ಳುವಂತಹ ಶಕ್ತಿ ಹೊಂದಿಲ್ಲ, ಇದನ್ನು ತಾವು ದಯವಿಟ್ಟು ಸೀರಿಯಸ್ಸಾಗಿ ಗಮನಕ್ಕೆ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಆಮೇಲೆ ಮಹಿಳಾಮಂಡಲಗಳ ರಿನ್ಯೂವಲ್ಸ್ ಚಾರ್ಜ್ ಇಷ್ಟು ದಿವಸ 2ರೂ ಇತ್ತು, ಒಂದು ವರ್ಷದ ಹಿಂದೆ 100 ರೂ ಮಾಡಿದ್ದಾರೆ, ಹಿಂದೆ ರಿನ್ಯೂವಲ್ಸ್‌ನ್ನು ಕಡ್ಡಾಯವಾಗಿ ಮಾಡಬೇಕೆಂದಿರಲಿಲ್ಲ. ಹಾಗಾಗಿ ತುಂಬಾ ಮಹಿಳಾಮಂಡಲಗಳು 10-15 ವರ್ಷಗಳಿಂದ ರಿನ್ಯೂವಲ್ ಮಾಡಿರಲಿಲ್ಲ. ಈಗ ಕಡ್ಡಾಯ ಬಂದಾಗ ನಾವು ಮಾಡಬೇಕೆಂದು ಹೋದಾಗ ಒಬ್ಬೊಬ್ಬರು 1000, 1500 ರೂಗಳನ್ನು ಕಟ್ಟಬೇಕಾಗಿ ಬಂದಿದೆ. ಹಾಗಾಗಿ ದಯವಿಟ್ಟು ತಾವು ರಿನ್ಯೂವಲ್ ಫೀಜನ್ನು 10, ಅಥವಾ 15 ರೂ ಗೆ ಇಳಿಸಬೇಕೆಂದು ತಮ್ಮಲ್ಲಿ ವಿನಂತಿಸುತ್ತಾ, ಈ ಕಷ್ಟಕಾಲದಲ್ಲಿ ನಾವು ಅಧಿಕಾರಕ್ಕೆ ಬಂದರೂ ಒಳ್ಳೆಯ ಹಂತದಲ್ಲಿ ನಾವು ಹೋಗುತ್ತಿದ್ದೇವೆ, ಅದಕ್ಕೆ ಸ್ವಾಗತಿಸಿ ಈ ಅವಕಾಶ ಮಾಡಿಕೊಟ್ಟದ್ದಕ್ಕೆ ತಮಗೆ ವಂದಿಸಿ ನಾನು ಮುಕ್ತಾಯ ಮಾಡುವ ಮೊದಲು ಒಂದು ಸಣ್ಣ ವಿಷಯ, ಬರೆದು ಕೊಂಡಿದ್ದೆ ಆದರೆ ಮರೆತುಬಿಟ್ಟಿದ್ದೇನೆ, Actually women are suffering with drunkard husbands ತಮಗೆ ಗೊತ್ತಿದೆ. complete Prohibition Act ನಮ್ಮ ಸರ್ಕಾರದವರು ತಂದರೆ ಒಳ್ಳೆಯದೆಂದು ನಾನು ಭಾವಿಸುತ್ತಿದ್ದೇನೆ.

ಖಾಸಗಿ ನಿರ್ಣಯದ ಮೇಲೆ ಚರ್ಚೆ

ಅಧ್ಯಕ್ಷರು : ಈಗ ಖಾಸಗಿ ನಿರ್ಣಯದ ಮೇಲಿನ ಚರ್ಚೆ. ಶ್ರೀ ವಾಟಾಳ್‌ನಾಗರಾಜ್‌ರವರು ದಿನಾಂಕ 31-3-95ರಂದು ಮಂಡಿಸಿದ ಕೆಳಕಂಡ ನಿರ್ಣಯದ ಮೇಲಿನ ಚರ್ಚೆ ಮುಂದುವರಿಸುವುದು. ಈ ರಾಜ್ಯದಲ್ಲಿ ಸಂಪೂರ್ಣ ಪಾನನಿರೋಧ ಜಾರಿಗೆ ತರಬೇಕೆಂದು ಈ ಸಭೆ ಒತ್ತಾಯಿಸುವುದು.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ): ಅಧ್ಯಕ್ಷರೇ, ಸ್ಫೂರ್ತಿನೇ ಬರುತ್ತಿಲ್ಲ, ಇಷ್ಟು ತಡವಾಗಿ ಬರಬೇಕಾದರೆ ಯಾರದೋ ಪಿತೂರಿ ಇರಬೇಕೆನಿಸುತ್ತದೆ. ಏಕೆಂದರೆ ಇದು ಬಹಳ ಮುಖ್ಯವಾದದ್ದು ಇಲ್ಲಿ ಬಹುತೇಕ ಜನ ಈ ನಿರ್ಣಯದ ಪರ ಇಲ್ಲ. ಏನೋ ಬಹುಮತ ಬರುವ ಸೂಚನೆ ಇದೆ.